*Pandit Teaches the Bible Series*

# The Books of the Bible

**Kannada Edition 2019**

**Author: T. Pandit**

**Translator: Prakash Naik**

ಕನ್ನಡ ಸತ್ಯವೇದ ಮಹಾವಿದ್ಯಾಲಯ ಪಠ್ಯಪುಸ್ತಕಗಳ ಸರಣಿ

# ಸತ್ಯವೇದದಲ್ಲಿನ ಪುಸ್ತಕಗಳು


ಪ್ರಧಾನ ಸಂಪಾದಕರು

**ಟಿ. ಪಂಡಿತ್**

ಲೇಖಕರು

**ಟಿ. ಪಂಡಿತ್**

ಅನುವಾದಕರು

**ಆರ್. ಪ್ರಕಾಶ್ ನಾಯ್ಕ್**

# ಮುನ್ನುಡಿ

ಈ ಕಿರುಪುಸ್ತಕವನ್ನು ಕೆಲ ವರ್ಷಗಳ ಹಿಂದೆ ಸತ್ಯವೇದದ ಕುರಿತು ಸ್ವಲ್ಪ ತಿಳುವಳಿಕೆ ಹೊಂದಿರುವ ಭಾರತದಲ್ಲಿನ ವಿಶ್ವಾಸಿಗಳಿಗಾಗಿ ಸಿದ್ಧಪಡಿಸಲಾಗಿತ್ತು. ಇದು ಸಭೆಯಲ್ಲಿ ನಡೆಯುವ ಗುಂಪು ಪ್ರಾರ್ಥನೆಗಳಿಗಾಗಿ (ಮನೆ ಪ್ರಾರ್ಥನೆಗಳು ಮತ್ತು ಯೌವನಸ್ಥರ ಕೂಟಗಳಿಗಾಗಿ) ಬರೆಯಲ್ಪಟ್ಟಿದೆ. ಹಾಗೆಯೇ ವೈಯಕ್ತಿಕ ಅಭ್ಯಾಸಕ್ಕಾಗಿಯೂ ಸಹ ಇದನ್ನು ಉಪಯೋಗಿಸಬಹುದು ಮತ್ತು ಸತ್ಯವೇದ ಶಾಲೆಗಳಲ್ಲಿ ಪ್ರಾರಂಭದ ತರಗತಿಗಳಿಗಾಗಿಯೂ ಉಪಯೋಗಿಸಬಹುದು.

ಪ್ರತಿಯೊಂದು ಘಟಕಗಳ ನಂತರದಲ್ಲಿ ಬರುವ ಪ್ರಶ್ನೆಗಳು ಗುಂಪು ಚರ್ಚೆಗಾಗಿ ಉಪಯೋಗಿಸಬಹುದು. ಪ್ರತಿಯೊಂದು ಗುಂಪುಗಳಲ್ಲಿ 4 ರಿಂದ 7 ಜನರು ಇರತಕ್ಕದ್ದು. ದೊಡ್ಡ ಗುಂಪುಗಳು ಇರಬಾರದು. ಚರ್ಚೆಯಲ್ಲಿ ಗುಂಪಿನ ಎಲ್ಲಾ ಸದಸ್ಯರು ಪಾಲ್ಗೊಳ್ಳುವಂತೆ ಮಾಡಿರಿ. ಸತ್ಯವೇದ ಪ್ರಶ್ನೆಗಳು ವರ್ಲ್ಡ್ ಇಂಗ್ಲೀಷ್ ಬೈಬಲ್ (WEB) ತರ್ಜುಮೆಯ ಆಧಾರಿತವಾಗಿವೆ.

**ಟಿ. ಪಂಡತ್** ರವರು ಒಬ್ಬ ಶಿಕ್ಷಣತಜ್ಞರಾಗಿಯೂ, ಒಬ್ಬ ಸತ್ಯವೇದ ಉಪದೇಶಕರಾಗಿಯೂ ಮತ್ತು ಒಬ್ಬ ಪ್ರಾಂಶಪಾಲರಾಗಿಯೂ ಅನೇಕ ವರ್ಷಗಳ ಅನುಭವವನ್ನು ಹೊಂದಿದ್ದಾರೆ. ಅವರು ಕನ್ನಡ ಸತ್ಯವೇದ ಮಹಾವಿದ್ಯಾಲಯದೊಂದಿಗೆ, 2006 ರಲ್ಲಿನ ಅದರ ಪ್ರಾರಂಭದಿಂದಲೂ ತಮ್ಮನ್ನು ನಿಕಟವಾಗಿ ತೊಡಗಿಸಿಕೊಂಡಿದ್ದಾರೆ.

**ಆರ್. ಪ್ರಕಾಶ್ ನಾಯ್ಕ್** ರವರು ಒಬ್ಬ ಎಂ.ಎ. ಮತ್ತು ಎಂ.ಡಿವ್. ಪದವೀದರರಾಗಿದ್ದು, ಕನ್ನಡ ಸತ್ಯವೇದ ಮಹಾವಿದ್ಯಾಲಯದಲ್ಲಿ 2008 ರಿಂದ ಉಪನ್ಯಾಸಕರಾಗಿ ಕೆಲಸನಿರ್ವಹಿಸುತ್ತಿದ್ದಾರೆ. ಅದಲ್ಲದೆ ಅವರು ತಮ್ಮ ಪತ್ನಿ ಪ್ರೇಮಲತಾರೊಂದಿಗೆ ಹೂವಿನಹಡಗಲಿಯಲ್ಲಿ ಸಭಾಪಾಲಕರಾಗಿ ದೇವರ ಸೇವೆ ಮಾಡುತ್ತಿದ್ದಾರೆ. ಈ ಪುಸ್ತಕವು ಮೂಲತಃವಾಗಿ ಆಂಗ್ಲಭಾಷೆಯಲ್ಲಿದ್ದು, ಇದು ಅದರ ಕನ್ನಡದ ತರ್ಜುಮೆಯಾಗಿರುತ್ತದೆ.

ಈ ಪುಸ್ತಕದ ಲೇಖಕರು ಗ್ರಂಥಕರ್ತರಾಗಿ (ಹಣಕಾಸಿನ ಮತ್ತು ನೈತಿಕ) ತಮ್ಮ ಹಕ್ಕನ್ನು ಹೊಂದಿರುತ್ತಾರೆ, ಮತ್ತು ತಕ್ಷಣದಿಂದಲೇ ಈ ಪುಸ್ತಕವು ಅವರಅಧಿಕಾರಕ್ಕೊಳಲ್ಪಟ್ಟಿದೆ. ಆದ್ದರಿಂದ ಅವರ ಗಮನಕ್ಕೆ ತರದೆ ಈ ಪುಸ್ತಕವನ್ನು ತಿದ್ದುವುದಾಗಲಿ ಅಥವಾ ನಕಲು ಮಾಡುವುದಾಗಲಿ ಅಥವಾ ನಾಶಮಾಡುವುದಾಗಲಿ ಮಾಡಕೂಡದೆಂದು ತಿಳಿಸಲಾಗಿದೆ.
ಆದ್ದರಿಂದಅವರಗಮನಕ್ಕೆತರದೆಈಪುಸ್ತಕವನ್ನುತಿದ್ದುವುದಾಗಲಿಅಥವಾನಕಲುಮಾಡುವುದಾಗಲಿಅಥವಾನಾಶಮಾಡುವು ದಾಗಲಿಮಾಡಕೂಡದೆಂದುತಿಳಿಸಲಾಗಿದೆ.

ಹೊಸಪ್ರತಿಫೆಬ್ರುವರಿ 2019

# ಪರಿವಿಡಿ


| | |
|---|---|
| ಮುನ್ನುಡಿ | 2 |
| ಪೀಠಿಕೆ | 4 |
| ಹಳೇ ಒಡಂಬಡಿಕೆ | 8 |
| ಭಾಗ 1: ಪಂಚಕಾಂಡ (ಅಥವಾ ಮೋಶೆಯ ಐದು ಪುಸ್ತಕಗಳು) | 8 |
| ಭಾಗ 2: ಐತಿಹಾಸಿಕ ಪುಸ್ತಕಗಳು | 15 |
| ಭಾಗ 3: ಪದ್ಯರೂಪಿ ಮತ್ತು ಜ್ಞಾನದ ಪುಸ್ತಕಗಳು | 24 |
| ಭಾಗ 4: ಪ್ರವಾದಿಗಳ ಪುಸ್ತಕಗಳು | 30 |
| ಹೊಸ ಒಡಂಬಡಿಕೆ | 42 |
| ಭಾಗ 1: ಸುವಾರ್ತೆಗಳು ಮತ್ತು ಅಪೊಸ್ತಲರ ಕೃತ್ಯಗಳು | 42 |
| ಭಾಗ 2: ಪೌಲನ ಪತ್ರಿಕೆಗಳು | 50 |
| ಭಾಗ 3: ಹೊಸ ಒಡಂಬಡಿಕೆಯ ಇತರ ಪತ್ರಿಕೆಗಳು | 62 |
| ಭಾಗ 4: ಪ್ರಕಟಣೆ | 68 |

# ಪೀಠಿಕೆ

ಸತ್ಯವೇದವು ಒಂದೇ ಪುಸ್ತಕವಾಗಿಲ್ಲ. ಅದು 66 ಪುಸ್ತಕಗಳನ್ನೊಳಗೊಂಡ ಒಂದು ಗ್ರಂಥವಾಗಿದೆ. ಈ ಪುಸ್ತಕಗಳು ವ್ಯತ್ಯಾಸವಾದ ಸಾಹಿತ್ಯಗಳನ್ನು ಪ್ರತಿನಿಧಿಸುತ್ತವೆ. 'ಬೈಬಲ್' ಎಂಬ ಪದವು ಗ್ರೀಕ್ ಭಾಷೆಯಿಂದ ಬಂದಿದೆ, ಅದರ ಅರ್ಥವು "ಪುಸ್ತಕಗಳು" ಎಂಬುದಾಗಿದೆ. ಸಾರ್ವಜನಿಕ ಗ್ರಂಥಾಲಯದಲ್ಲಿ ವ್ಯತ್ಯಾಸವಾದ ಕಪಾಟುಗಳಲ್ಲಿ ವಿವಿಧ ರೀತಿಯ ಸಾಹಿತ್ಯಗಳನ್ನು ನಾವು ಕಾಣಬಹುದಾಗಿದೆ. ಪದ್ಯಗಳನ್ನು ಒಳಗೊಂಡ ಪುಸ್ತಕಗಳು ಒಂದು ಕಪಾಟುಗಳಲ್ಲಿ ನಾವು ಕಾಣಬಹುದು. ಇತಿಹಾಸ ಪುಸ್ತಕಗಳು ಒಂದರಲ್ಲಿ, ಮತ್ತು ಅನೇಕ ವಿಧದ ಪುಸ್ತಕಗಳು ಒಂದೊಂದು ಕಪಾಟುಗಳಲ್ಲಿರುತ್ತವೆ. ಹಾಗೆಯೇ ಸತ್ಯವೇದದಲ್ಲಿಯೂ ಸಹ ಪ್ರತಿಯೊಂದು ಪುಸ್ತಕಗಳನ್ನು ಅವುಗಳ ವರ್ಗಗಳ (ಅವುಗಳ ಶೈಲಿಗಳ) ಆಧಾರದ ಮೇಲೆ ಇರಿಸಲಾಗಿದೆ.

## ಹಳೇ ಒಡಂಬಡಿಕೆ

ಹಳೇ ಒಡಂಬಡಿಕೆಯು ನಾಲ್ಕು ಪ್ರಮುಖ ವಿಧದ ಸಾಹಿತ್ಯಗಳನ್ನು (ಪ್ರಕಾರಗಳನ್ನು) ಒಳಗೊಂಡಿದೆ.

1. ಮೊದಲನೇಯ ವಿಭಾಗವು ಧರ್ಮಶಾಸ್ತ್ರವನ್ನು ಒಳಗೊಂಡಿದೆ, ಅವುಗಳನ್ನು "ಮೋಶೆಯ ಐದು ಪುಸ್ತಕಗಳೆಂದು" ಕರೆಯಲ್ಪಡುತ್ತವೆ. ಆದರೆ ಈ ಐದು ಪುಸ್ತಕಗಳಲ್ಲಿರುವ ಅಂಶಗಳು ಭಾರತದಲ್ಲಿ ನಾವು ಕರೆಯುವ "ಕಾನೂನು" ಎಂಬ ಅಂಶಗಳಂತೆ ಅಲ್ಲ. ಇಬ್ರಿಯ ಭಾಷೆಯ 'ಥೋರಾ' ಎಂಬ ಪದವು ಆಜ್ಞೆ ಮತ್ತು ನಿಯಮಗಳನ್ನು ಒಳಗೊಳ್ಳದೆ ಹೆಚ್ಚಾಗಿ ಮಾರ್ಗದರ್ಶನ ಮತ್ತು ಸೂಚನೆಗಳನ್ನು ಒಳಗೊಂಡಿರುತ್ತದೆ. ಈ ಐದು ಪುಸ್ತಕಗಳು ಆದಿಕಾಂಡ, ವಿಮೋಚನಕಾಂಡ, ಯಾಜಕಕಾಂಡ, ಅರಣ್ಯಕಾಂಡ ಮತ್ತು ಧರ್ಮೋಪದೇಶಕಾಂಡಗಳೆಂದು ಕರೆಯಲ್ಪಡುತ್ತವೆ.
2. ಹಳೇ ಒಡಂಬಡಿಕೆಯಲ್ಲಿ ಬರುವ ಎರಡನೇಯ ಸಾಹಿತ್ಯವು ಇತಿಹಾಸವೆಂದು ಕರೆಯಲ್ಪಡುತ್ತದೆ. ಇಲ್ಲಿ ಇತಿಹಾಸದ ಪುಸ್ತಕಗಳನ್ನು ನಾವು ಎರಡು ಸರಪಣಿಗಳಲ್ಲಿ ಕಾಣಬಹುದು.
   - ಮೊದಲ ಸರಣಿಯು ಧರ್ಮೋಪದೇಶಕಾಂಡದ ಮುಂದುವರಿಕೆಯಾಗಿರುತ್ತದೆ. ಇದು ಈ ಮುಂದಿನ ಪುಸ್ತಕಗಳನ್ನು ಒಳಗೊಂಡಿರುತ್ತದೆ: ಯೆಹೋಶುವನು, ನ್ಯಾಯಸ್ಥಾಪಕರು, ಮೊದಲ ಮತ್ತು ಎರಡನೇಯ ಸಮುವೇಲನು ಮತ್ತು ಮೊದಲ ಮತ್ತು ಎರಡನೇ ಅರಸರುಗಳು. ಈ ಪುಸ್ತಕಗಳು ಯೆಹೂದ ಮತ್ತು ಇಸ್ರಾಯೇಲ್ಯರಲ್ಲಿದ್ದ ಪ್ರವಾದಿಗಳು ಮತ್ತು ಅರಸರುಗಳ ಮಾಹಿತಿಗಳನ್ನು ಒಳಗೊಂಡಿರುತ್ತವೆ. ರೂತಳ ಪುಸ್ತಕವು ಸ್ವತಂತ್ರವಾದ ಕಥೆಯನ್ನು ಒಳಗೊಂಡಿದ್ದು, ಈ ಇತಿಹಾಸದ ಭಾಗಕ್ಕೆ ಸಂಬಧಪಟ್ಟಿಲ್ಲ.
   - ಇತಿಹಾಸದ ಪುಸ್ತಕಗಳ ಎರಡನೇಯ ಸರಣಿಯು ಈ ಮುಂದಿನ ಪುಸ್ತಕಗಳನ್ನು ಒಳಗೊಂಡಿರುತ್ತದೆ: ಮೊದಲ ಮತ್ತು ಎರಡನೇಯ ಪೂರ್ವಕಾಲವೃತ್ತಾಂತ, ಎಜ್ರನು ಮತ್ತು ನೆಯೆಮೀಯನು. ಇದು 9 ಅಧ್ಯಾಯಗಳ ವಂಶಾವಳಿಯಿಂದ ಪ್ರಾರಂಭಗೊಳ್ಳುತ್ತದೆ. ಇದು ಯೆಹೂದದ ಅರಸರುಗಳನ್ನು ಮತ್ತು ದೇವಾಲಯ ಹಾಗೂ ಯಾಜಕರನ್ನು ಕೇಂದ್ರಿಕರಿಸುತ್ತದೆ. ಇದು ಬಾಬೆಲಿನಿಂದ ಜನರು ಮರುಳಿ ಬಂದಿದ್ದನ್ನು ಹಾಗೂ ಯೆರೂಸಲೇಮಿನಲ್ಲಿ

ದೇವಾಲಯವನ್ನು ಪುನರ್ ನಿರ್ಮಿಸಿದ್ದರ ಕುರಿತು ತಿಳಿಸುತ್ತದೆ. ಮತ್ತೊಮ್ಮೆ ಇನ್ನೊಂದು ಪುಸ್ತಕವಾದ ಎಸ್ತೇರಳು ಸ್ವತಂತ್ರವಾದ ಕಥೆಯನ್ನು ಒಳಗೊಂಡಿದ್ದು ಈ ಇತಿಹಾಸದ ಗುಂಪಿಗೆ ಸೇರುವುದಿಲ್ಲ.

3. ನಂತರದಲ್ಲಿ ನಾವು ಕಾವ್ಯ ಮತ್ತು ಜ್ಞಾನೋಕ್ತಿಗಳನ್ನು ಕಾಣಬಹುದು. ಈ ಗುಂಪಿಗೆ ಐದು ಪುಸ್ತಕಗಳು ಸಂಬಧಪಟ್ಟಿವೆ: ಯೋಬನು, ಕೀರ್ತನೆಗಳು, ಜ್ಞಾನೋಕ್ತಿಗಳು, ಪ್ರಸಂಗಿ ಮತ್ತು ಪರಮಗೀತೆ. ಈ ಪುಸ್ತಕಗಳಲ್ಲಿ ನಾವು ಅದ್ಭುತವಾದ ಪದ್ಯಗಳನ್ನು ಮತ್ತು ಆಳವಾದ ಜ್ಞಾನೋಕ್ತಿಗಳನ್ನು ಕಾಣಬಹುದಾಗಿದೆ. ಈ ಪುಸ್ತಕಗಳಲ್ಲಿ ಅರಸನಾದ ದಾವೀದನು ಮತ್ತು ಆತನ ಮಗನಾದ ಸೊಲೊಮೋನರು ಪ್ರಾಮುಖ್ಯರಾಗಿದ್ದಾರೆ.
4. ಕೊನೆಯಲ್ಲಿ ನಾವು ದೊಡ್ಡ ಗುಂಪಿನಲ್ಲಿ ಪ್ರವಾದಿಗಳ ಪುಸ್ತಕಗಳನ್ನು ಕಾಣಬಹುದು. ಅನೇಕ ಚಿರಪರಿಚಿತವಾದ ಹಳೇ ಒಡಂಬಡಿಕೆಯ ಪ್ರವಾದಿಗಳ ಪುಸ್ತಕಗಳು ಅವರ ಹೆಸರುಗಳನ್ನೇ ಶೀರ್ಷಿಕೆಗಳಾಗಿ ಹೊಂದಿವೆ, ಉದಾ: ಯೆಶಾಯನು, ಯೆರೆಮೀಯನು, ಯೆಹೆಜ್ಕೇಲನು, ಯೋನನು ಮತ್ತು ಆಮೋಸನು. ಈ ಗುಂಪಿನಲ್ಲಿ 17 ಪುಸ್ತಕಗಳಿದ್ದು, 16 ಪುಸ್ತಕಗಳ ಪ್ರವಾದಿಗಳ ಹೆಸರುಗಳನ್ನೇ ಹೊಂದಿವೆ.

ಸಾರಾಂಶವಾಗಿ ಹೇಳಬೇಕಾದರೆ ಹಳೇ ಒಡಂಬಡಿಕೆಯು ಇಸ್ರಾಯೇಲ್ ಜನರಿಗೆ ರಾಷ್ಟ್ರೀಯ ದಾಖಲೆಗಳ ಹಾಗೆ ಇದೆ. ವ್ಯತ್ಯಾಸವಾದ ಪುಸ್ತಕಗಳು ವ್ಯತ್ಯಾಸವಾದ ದೃಷ್ಟಿಕೋನದಲ್ಲಿ ಯಾಕೆ ಇಸ್ರಾಯೇಲ್ ದೇಶವು ರಚಿಸಲ್ಪಟ್ಟಿತ್ತು ಮತ್ತು ಹೇಗೆ ಯೆಹೂದ್ಯ ಜನರು ದೇವರಿಂದ ಆರಿಸಲ್ಪಟ್ಟು ಮಾರ್ಗದರ್ಶಿಸಲ್ಪಟ್ಟರೆಂಬುದರ ಹಿನ್ನಲೆಯನ್ನು ತಿಳಿಸಿ ವಿವರಿಸುತ್ತವೆ.

ಹಳೇ ಒಡಂಬಡಿಕೆಯಲ್ಲಿರುವ ಪುಸ್ತಕಗಳ ಪಠ್ಯಗಳು ಸುಮಾರು 1500 ವರ್ಷಗಳ ಕಾಲಾವಧಿಯಲ್ಲಿ ಬರೆಯಲ್ಪಟ್ಟಿವೆ. ಎಲ್ಲವೂ ಇಸ್ರಾಯೇಲ್ ಜನರ (ಅಥವಾ ಇಂದು ಕರೆಯಲ್ಪಡುವ ಯೆಹೂದ್ಯರ) ಪ್ರಾಚೀನ ಭಾಷೆಯಾದ ಇಬ್ರಿಯ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಇನ್ನೂ ಕೆಲವು ಪಠ್ಯಗಳು ಅಂದಿನ ಅಂತರ್ ರಾಷ್ಟ್ರೀಯ ಭಾಷೆಯಾಗಿದ್ದ ಅರಾಮೀಕಿನಲ್ಲಿ ಬರೆಯಲ್ಪಟ್ಟಿವೆ. ನಮ್ಮ ಇಂದಿನ ಕಾಲದವರೆಗೂ ಈ ಪಠ್ಯದ ಮೂಲ ಪ್ರತಿಗಳನ್ನು ಸಂಗ್ರಹಿಸಿಡಲು ಆಗಿಲ್ಲ. ಆದರೆ ತಲಾತಲಾಂತರಗಳಿಂದಲೂ ತತ್ವಜ್ಞಾನಿಗಳಿಂದಲೂ ಮತ್ತು ಲೇಖಕರುಗಳಿಂದಲೂ ಮೂಲ ಪಠ್ಯಗಳನ್ನು ನಕಲು ಮಾಡಿ ಇಡಲಾಗಿದೆ. ನಂತರದಲ್ಲಿ ಈ 39 ಪುಸ್ತಕಗಳನ್ನು ಯೆಹೂದ್ಯ ಲೇಖಕರುಗಳಿಂದ ಒಂದು ಪುಸ್ತಕವನ್ನಾಗಿ ಸಂಗ್ರಹಿಸಿ ಬರೆಯಲಾಯಿತು. ಈ ಕಾರ್ಯವು ಬಹುಶಃ ಕ್ರಿ.ಪೂ. 200 ರಲ್ಲಿ ಪೂರ್ಣವಾಯಿತು.

## ಹೊಸ ಒಡಂಬಡಿಕೆ

ಹೊಸ ಒಡಂಬಡಿಕೆಯನ್ನು ಸಹ "ದಾಖಲೆಗಳ" ದೃಷ್ಟಿಯಲ್ಲಿ ನೋಡಬಹುದಾಗಿದೆ. ಆದರೆ ಅದರ ದೃಷ್ಟಿಕೋನವು ರಾಷ್ಟ್ರೀಯವಾಗಿರದೆ ಅದು ಅಂತರ್ ರಾಷ್ಟ್ರೀಯವಾಗಿರುತ್ತದೆ. ಇಲ್ಲಿ ನಾವು ದೇವರ ಉದ್ದೇಶವು ಇಸ್ರಾಯೇಲ್ ಜನರ ಮೇಲೆ ಹೇಗೆ ಪೂರ್ಣಗೊಂಡಿತೆಂಬುದನ್ನು ತೋರಿಸುವ ಸಾಹಿತ್ಯವನ್ನು ಕಾಣುತ್ತೇವೆ. ಈ ಪಠ್ಯವು ದೇವರು ಇಸ್ರಾಯೇಲ್ ಜನರಿಗೆ ಕೊಟ್ಟ ಸಂದೇಶವನ್ನು ಅವರು ನಂಬಿಗಸ್ಥರಾಗಿ ಹಿಡಿದುಕೊಂಡು ಭೂಮಿಯ ಇತರ ಎಲ್ಲಾ ಜನರಿಗೆ ಹೇಗೆ ತಲುಪಿಸಲಾಯಿತೆಂಬುದರ ಕುರಿತು ವಿವರಿಸುತ್ತದೆ. ಹೊಸ ಒಡಂಬಡಿಕೆಯು ಸಾಹಿತ್ಯದ ದೃಷ್ಟಿಕೋನದಲ್ಲಿ ಮೂರು ವರ್ಗಗಳನ್ನು ಒಳಗೊಂಡಿರುತ್ತದೆ.

1. ನಾವು ಮೊದಲು ಐದು ಐತಿಹಾಸಿಕ ಪುಸ್ತಕಗಳನ್ನು ಕಾಣುತ್ತೇವೆ. ನಾಲ್ಕು ಸುವಾರ್ತೆಗಳು – ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನ, ಇವುಗಳು ಯೇಸುವಿನ ಕುರಿತ ಕಥೆಗಳನ್ನು ಹೇಳುತ್ತವೆ. ಲೂಕನ ಸುವಾರ್ತೆಯ ಮುಂದುವರೆದ ಭಾಗವು ಅಪೊಸ್ತಲರ ಕೃತ್ಯದಲ್ಲಿದ್ದು, ಇದು ಯೇಸುವಿನ ಕುರಿತ ಸುವಾರ್ತೆಯ ಸಾರೋಣದ ಸೇವೆಯ ನಿರಂತರತೆಯನ್ನು ಮತ್ತು ಆದಿಸಭೆಯ ಕುರಿತ ಕಥೆಗಳನ್ನು ತಿಳಿಸುತ್ತದೆ.
2. ಎರಡನೇಯ ಗುಂಪಿನಲ್ಲಿ ನಾವು ಪತ್ರಿಕೆಗಳನ್ನು ಕಾಣುತ್ತೇವೆ.
    - ಮೊದಲನೇಯದಾಗಿ ಅಪೊಸ್ತಲನಾದ ಪೌಲನಿಂದ ಬರೆಯಲ್ಪಟ್ಟ 13 ಪತ್ರಿಕೆಗಳು
    - ನಂತರದಲ್ಲಿ ನಮಗೆ ಇಬ್ರಿಯದವರಿಗೆ ಬರೆದ ಪತ್ರಿಕೆ ಇದೆ, ನಂತರ ಇತರೆ ಸಾಮಾನ್ಯ ಪತ್ರಿಕೆಗಳೆಂದು ಕರೆಯಲ್ಪಡುವ ಪತ್ರಿಕೆಗಳಾದ: ಯಾಕೋಬ, ಮೊದಲ ಮತ್ತು ಎರಡನೇಯ ಪೇತ್ರ, ಯೋಹಾನನು ಬರೆದ ಮೂರು ಪತ್ರಿಕೆಗಳು ಮತ್ತು ಕೊನೆಯಲ್ಲಿ ಯೂದನ ಪತ್ರಿಕೆ.
3. ಮೂರನೇಯ ಗುಂಪು ಒಂದು ಒಂದು ಪುಸ್ತಕವನ್ನು ಹೊಂದಿದೆ, ಅದು ಪ್ರಕಟಣೆ ಪುಸ್ತಕವಾಗಿದೆ. ಈ ಪ್ರವಾದನಾ ಪುಸ್ತಕವು ಸತ್ಯವೇದ ನಾಟಕವನ್ನು ಮುಕ್ತಾಯಗೊಳಿಸುತ್ತದೆ.

ಆದಿಕಾಂಡ ಪುಸ್ತಕವು ಭೂಮಿಯಲ್ಲಿ ಪಾಪವು ಪ್ರವೇಶಿಸಲು ಮನುಷ್ಯನು ಹೇಗೆ ಬಾಗಿಲನ್ನು ತೆರೆದನೆಂದು ವಿವರಿಸುತ್ತದೆ. ಪ್ರಕಟಣೆ ಪುಸ್ತಕವು ದೇವರು ಕೊನೆಯಲ್ಲಿ ದುಷ್ಟನನ್ನು ಸೋಲಿಸಿ ತನ್ನ ಸೃಷ್ಟಿಯಿಂದ ಶಾಶ್ವತವಾಗಿ ಹೊರಗಿರುವಂತೆ ಹೇಗೆ ಮಾಡಿದನೆಂಬುದರ ಕುರಿತು ವಿವರಿಸುತ್ತದೆ. ಹೊಸ ಒಡಂಬಡಿಕೆಯ ಪುಸ್ತಕಗಳು ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನಕ್ಕೂ ಹಾಗೂ ಪವಿತ್ರನಾಡಿನಲ್ಲೂ ಮತ್ತು ರೋಮ್ ಸಾಮ್ರಾಜ್ಯದಾದ್ಯಂತ ಸ್ಥಾಪಿಸಲ್ಪಟ್ಟ ಆದಿಸಭೆಗಳ ಉಗಮಕ್ಕೂ ಬಹಳ ಅಂತರದ ವರ್ಷಗಳಲ್ಲಿ ಬರೆಯಲ್ಪಡದೆ ಅವುಗಳು ಮೊದಲನೇಯ ಶತಮಾನದ ಮಧ್ಯಕಾಲದಲ್ಲಿ ಬರೆಯಲ್ಪಟ್ಟವು. ಅವುಗಳೆಲ್ಲವು ಸಾಮಾನ್ಯ ಆಡುಭಾಷೆಯಾಗಿದ್ದ ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟವು, ಗ್ರೀಕ್ ಭಾಷೆಯು ಯೇಸು ಕ್ರಿಸ್ತನ ಜನನದ ಮುಂಚೆ ಮತ್ತು ನಂತರದ ಕೆಲವು ಶತಮಾನಗಳವರೆಗೂ ಗ್ರೀಕ್ ಮತ್ತು ರೋಮ್ ಸಾಮ್ರಾಜ್ಯದಾದ್ಯಂತ ವಿಸ್ತಾರವಾಗಿ ಹರಡಿಕೊಂಡಿತ್ತು. ನಮ್ಮ ಸಮಯದವರೆಗೂ ಈ ಪುಸ್ತಕಗಳ ಯಾವುದೇ ಮೂಲ ಪ್ರತಿಗಳನ್ನು ಸಂಗ್ರಹಿಸಿ ಇಡಲಾಗಿಲ್ಲ. ಆದರೆ ಪ್ರಪಂಚದಲ್ಲಿನ ಯಾವುದೇ ಪ್ರಾಚೀನ ಪುಸ್ತಕಗಳಿಗಿಂತ ಮೊದಲ ನೂರಾರು ನಕಲು ಪ್ರತಿಗಳನ್ನು ಸಂಗ್ರಹಿಸಿ ಇಡಲಾಗಿದೆ ! ಅದೇ ಸಮಯದಲ್ಲಿ ಅನೇಕ ಕ್ರೈಸ್ತ ಪುಸ್ತಕಗಳು ಸಹ ಬರೆಯಲ್ಪಟ್ಟವು, ಆದರೆ ಅದರಲ್ಲಿ ಅನೇಕ ಪುಸ್ತಕಗಳು ಸುಳ್ಳು ಸಿದ್ಧಾಂತಗಳನ್ನು ಆಧಾರ ಮಾಡಿಕೊಂಡಿವೆ. ಆದರೆ ಆಧಿಸಭೆಯ ಕ್ರೈಸ್ತ ನಾಯಕರುಗಳು ಪವಿತ್ರಾತ್ಮನ ಮಾರ್ಗದರ್ಶನದಿಂದ ಈ ಹೊಸ ಒಡಂಬಡಿಕೆಯ 27 ಪುಸ್ತಕಗಳನ್ನು ಆಯ್ಕೆ ಮಾಡಿದ್ದಾರೆ, ಮತ್ತು ಇವುಗಳನ್ನು ಸೇವೆಯಲ್ಲಿ ಉಪಯೋಗಿಸಿಕೊಂಡು ದೇವರು ಮೆಚ್ಚುವ ರೀತಿಯಲ್ಲಿ ವಿಶ್ವಾಸಿಗಳು ಹೇಗೆ ಜೀವಿಸಬೇಕೆಂಬುದನ್ನು ಕಲಿಸಲು ಮತ್ತು ಯೇಸು ಕ್ರಿಸ್ತನ ಕುರಿತು ತಿಳಿಸಲು ಉಪಯೋಗಿಸಲಾಗಿದೆ. ಪವಿತ್ರಾತ್ಮನಿಂದ ಪ್ರೇರಣೆಯನ್ನು ಹೊಂದಿದ್ದ ಅಪೊಸ್ತಲರಿಂದಲೂ ಮತ್ತು ಇತರರಿಂದಲೂ ಬರೆಯಲ್ಪಟ್ಟಂತಹ ಈ ಪುಸ್ತಕಗಳು ನಂತರದಲ್ಲಿ ಸಂಗ್ರಹಿಸಿ ಹೊಸ ಒಡಂಬಡಿಕೆ ಎಂಬುದಾಗಿ ಕರೆಯಲ್ಪಟ್ಟಿವೆ. ಈ ಸಂಗ್ರಹಿಸುವ ಕಾರ್ಯವು ಕ್ರಿ.ಶ. 4 ನೇ ಶತಮಾನದಂದು ಕೊನೆಗೊಂಡಿತ್ತು.

## ಪ್ರಶ್ನೆಗಳು

1. ಹಳೇ ಒಡಂಬಡಿಕೆಯಲ್ಲಿ ಕಂಡುಬರುವ ನಾಲ್ಕು ವಿಧವಾದ ಸಾಹಿತ್ಯಗಳಾವುವು?
2. ಹಳೇ ಒಡಂಬಡಿಕೆಯು ಇಸ್ರಾಯೇಲ್ ಜನರಿಗೆ "ರಾಷ್ಟ್ರೀಯ ದಾಖಲೆಯಾಗಿದೆ" ಎನ್ನುವುದರ ಅರ್ಥವೇನು? ಆಲೋಚಿಸಿ ಮತ್ತು ಚರ್ಚಿಸಿರಿ !
3. ಹಳೇ ಒಡಂಬಡಿಕೆಯ ಪುಸ್ತಕಗಳು ಯಾವ ಮೂಲ ಭಾಷೆಯಲ್ಲಿ ಬರೆಯಲ್ಪಟ್ಟವು?
4. ಹಳೇ ಒಡಂಬಡಿಕೆಯ ಪುಸ್ತಕಗಳು ಯಾವಾಗ ಪೂರ್ಣಗೊಂಡವು?
5. ಹೊಸ ಒಡಂಬಡಿಕೆಯಲ್ಲಿರುವ ಮೂರು ಸಾಹಿತ್ಯದ ಪತ್ಯಗಳಾವುವು?
6. ಹೊಸ ಒಡಂಬಡಿಕೆಯ ಪುಸ್ತಕಗಳ ಮೂಲ ಭಾಷೆ ಯಾವುದು?
7. ಹೊಸ ಒಡಂಬಡಿಕೆಯ ಪುಸ್ತಕಗಳು ಯಾವಾಗ ಪೂರ್ಣಗೊಂಡವು?
8. ಆದಿಸಭೆಯ ದಿನಗಳಲ್ಲಿ ಬರೆಯಲ್ಪಟ್ಟ ಇತರೆ ಕ್ರೈಸ್ತರ ಪುಸ್ತಕಗಳನ್ನು ಆಯ್ಕೆ ಮಾಡದೆ, ಬರೀ ಈ 27 ಪುಸ್ತಕಗಳನ್ನು ಹೊಸ ಒಡಂಬಡಿಕೆಯ ಪುಸ್ತಕಗಳನ್ನಾಗಿ ಯಾಕೆ ಆಯ್ಕೆ ಮಾಡಿದರು? ಆಲೋಚಿಸಿ ಮತ್ತು ಚರ್ಚಿಸಿರಿ !
9. ಆದಿಕಾಂಡ ಮತ್ತು ಪ್ರಕಟಣೆಗಳ ನಡುವೆ ಇರುವ ಸಂಬಂಧವೇನು? ಆಲೋಚಿಸಿ ಮತ್ತು ಚರ್ಚಿಸಿರಿ !
10. ಈ ಪೀಠಿಕೆಯ ಮಾಹಿತಿಯ ಆಧಾರದ ಮೇಲೆ 5 ಪ್ರಶ್ನೆಗಳನ್ನು ಬರೆಯಿರಿ. ನಂತರದಲ್ಲಿ ನಿಮ್ಮ ಸ್ನೇಹಿತರು ಉತ್ತರ ಬರೆಯುವಂತೆ ಕೇಳಿಕೊಳ್ಳಿರಿ. ಕೊನೆಯಲ್ಲಿ ಅವರು ಬರೆದಿರುವ ಉತ್ತರಕ್ಕೆ ಅಂಕಗಳನ್ನು ಕೊಡಿರಿ. ಅವರು ಬರೆದಿರುವ ಪ್ರತಿಸರಿಯಾದ ಉತ್ತರಕ್ಕೆ 10 ಅಂಕಗಳನ್ನು ಕೊಡಿರಿ, ಇಲ್ಲವಾದರೆ ಅವರು ಬರೆದಿರುವ ಅಂಶಗಳು ತಕ್ಕ ಮಟ್ಟಿಗೆ ಸರಿಯಾಗಿದ್ದರೆ ಉತ್ತೀರ್ಣದ ಅಂಕಗಳನ್ನು ಕೊಡಿರಿ. 25-34 ಅಂಕಗಳು ಉತ್ತೀರ್ಣ. "ಅತ್ಯುತ್ತಮ"ದ ಅಂಕಗಳು 35-40.

# ಹಳೇ ಒಡಂಬಡಿಕೆ

## ಭಾಗ 1: ಪಂಚಕಾಂಡ (ಅಥವಾ ಮೋಶೆಯ ಐದು ಪುಸ್ತಕಗಳು):

ಇಸ್ರಾಯೇಲ್ ಜನರಿಂದ ಕರೆಯಲ್ಪಡುತ್ತಿದ್ದ "ಧರ್ಮಶಾಸ್ತ್ರವು" ಸತ್ಯವೇದದಲ್ಲಿರುವ ಮೊದಲ ಐದು ಪುಸ್ತಕಗಳಾಗಿವೆ. ಪಂಚಕಾಂಡವೆಂದರೆ "ಐದು ಸುರುಳಿಗಳಾಗಿವೆ". ಅದು ಕಥೆಗಳು, ಧರ್ಮಶಾಸ್ತ್ರ, ಧಾರ್ಮಿಕ ಆಚರಣೆಗೆ ಮತ್ತು ಬಲಿದಾನಕ್ಕಿರುವ ನಿಯಮಗಳು, ಸಂಭಾಷಣೆಗಳು, ಸಂದೇಶಗಳನ್ನು ಮತ್ತು ವಂಶಾವಳಿಗಳ ಪಟ್ಟಿಗಳಂತಹ ಅನೇಕ ವಿಧವಾದ ಸಾಹಿತ್ಯಗಳನ್ನು ಒಳಗೊಂಡಿದ್ದರೂ ಸಹ ಒಂದೇ ಪುಸ್ತಕವಾಗಿ ಪರಿಗಣಿಸಲ್ಪಟ್ಟಿದೆ.

ಪಂಚಕಾಂಡದಾದ್ಯಂತ ಇರುವ ಒಂದೇ ಒಂದು ಮುಖ್ಯಾಂಶವೆಂದರೆ, ಅದು ದೇವರ ಚಿತ್ತಕ್ಕೆ ವಿಧೇಯರಾಗುವ ಸಮಾಜ ಎಂಬ ಅಂಶವಾಗಿದೆ.

ಆದಿಕಾಂಡದ ಮೊದಲ 11 ಅಧ್ಯಾಯಗಳು ಅಂತರ್ ರಾಷ್ಟ್ರೀಯ ದೃಷ್ಟಿಕೋನವನ್ನು ಹೊಂದಿವೆ. ಆದರೆ ಆದಿಕಾಂಡ 12 ನೇ ಅಧ್ಯಾಯದಿಂದ ಅಬ್ರಹಾಮನ ಕರೆಯುವಿಕೆಯಿಂದ (ಬಹುಶಃ ಯೇಸು ಕ್ರಿಸ್ತನ ಜನನಕ್ಕಿಂತ 2000 ವರ್ಷಗಳ ಮುಂಚೆ) ಮೋಶೆಯ ಮರಣದವರೆಗೂ (ಸುಮಾರು ಕ್ರಿ.ಪೂ. 1400 ವರ್ಷಗಳು) ದೇವಜನರ ಕುರಿತ ಕಥೆಯನ್ನೊಳಗೊಂಡಿದೆ.

## ಆದಿಕಾಂಡ

ಪುಸ್ತಕದ ಹೆಸರೇ ಅದು ಯಾವುದರ ಕುರಿತಾಗಿದೆ ಎಂಬ ಅಂಶವನ್ನು ನಗಮೆ ಪ್ರಕಟಿಸುತ್ತದೆ – ಅದು ಎಲ್ಲದರ ಪ್ರಾರಂಭದ ಕುರಿತ ಪುಸ್ತಕವಾಗಿದೆ. ಅದು ದೇವರು ಹೇಗೆ ಈ ಪ್ರಪಂಚವನ್ನು ಸೃಷ್ಟಿಸಿದನು ಎಂಬುದರ ಕುರಿತು ಹೇಳುತ್ತದೆ, ಮತ್ತು ಇದು ಪುರುಷ ಮತ್ತು ಸ್ತ್ರೀಯು ಹೇಗೆ ಸೃಷ್ಟಿಸಲ್ಪಟ್ಟು ಅವರು ದೇವರಿಗೆ ಹೇಗೆ ಅವಿಧೇಯರಾದರು ಎಂಬುದನ್ನು ಹೇಳುತ್ತದೆ, ಅದೇ ಪಾಪದ ಮತ್ತು ಶ್ರಮೆಯ ಪ್ರಾರಂಭವಾಗಿತ್ತು. ನಂತರದಲ್ಲಿ ನಾವು ನೋಹನ ಮತ್ತು ಜಲಪ್ರಳಯ ಮತ್ತು ಬಾಬೆಲ್ ಗೋಪುರದ ಕುರಿತು ಓದುತ್ತೇವೆ. ಈ ಮೊದಲ ವಿಭಾಗದಲ್ಲಿ ಪುಸ್ತಕದ ದೃಷ್ಟಿಕೋನವು ಮನುಷ್ಯನಾಗಿದ್ದಾನೆ (ಅಧ್ಯಾಯ 1-11).

ನಂತರದಲ್ಲಿ ಇಸ್ರಾಯೇಲ್ ಜನರ ಪಿತೃಗಳ ಕುರಿತಾದ ಕಥೆಯು ಅವರ ಉಗಮನವನ್ನು ತಿಳಿಸುತ್ತದೆ, ಯೆಹೂದ್ಯ ಜನರ ತಂದೆಯನ್ನು ಕಂಡುಕೊಳ್ಳುವುದು (ಅಧ್ಯಾಯ 12-50). ಮೊದಲನೇಯ ಪಿತೃ ಅಬ್ರಹಾಮನಾಗಿದ್ದಾನೆ, ಈತನು ದೇವರಿಗೆ ವಿಧೇಯನಾದನು ಮತ್ತು ದೇವರಲ್ಲಿ ಭರವಸೆ ಇಟ್ಟನು. ಹಾಗಾಗಿ ದೇವರು ಇಸ್ರಾಯೇಲ್ ದೇಶವನ್ನು ಸ್ಥಾಪಿಸುವುದಕ್ಕಾಗಿ ಈತನನ್ನು ಆರಿಸಿಕೊಂಡನು. ನಂತರದಲ್ಲಿ ನಾವು ಈತನ ಮಗನಾದ ಇಸಾಕ ಮತ್ತು ಮೊಮ್ಮಗನಾದ ಯಾಕೋಬನ (ಇಸ್ರಾಯೇಲನು ಎಂದು ಕರೆಯಲ್ಪಡುತ್ತಾನೆ) ಕುರಿತು ಓದಬಹುದು. ಯಾಕೋಬನು 12 ಜನ ಮಕ್ಕಳನ್ನು ಹೊಂದಿದ್ದನು, ಈ ಮಕ್ಕಳೇ ಮುಂದೆ ಇಸ್ರಾಯೇಲರ 12 ಕುಲಗಳಾಗುತ್ತಾರೆ. ಆತನ ಮಗನಲ್ಲಿ ಒಬ್ಬನಾದ ಯೋಸೇಫನು ತನ್ನ ಅಣ್ಣರಿಂದ ಗುಲಾಮನಾಗಿ ಐಗುಪ್ತಕ್ಕೆ ಮಾರಲ್ಪಟ್ಟವನ ಕಥೆಯು ತಿಳಿಸಲ್ಪಟ್ಟಿದೆ. ನಂತರದಲ್ಲಿ ಆತನ ಹಿಡೀ ಕುಟುಂಬವು ಐಗುಪ್ತದಲ್ಲಿ ಆತನೊಂದಿಗೆ ಸೇರಿಕೊಳ್ಳುತ್ತಾರೆ. ಪುಸ್ತಕದಾದ್ಯಂತಹ ದೇವರು ಕಾರ್ಯಪ್ರವೃತ್ತನಾಗಿದ್ದಾನೆ; ಪಾಪ ಮಾಡಿದವರನ್ನು ಆತನು

ನ್ಯಾಯ ತೀರಿಸಿ ಅವರಿಗೆ ಶಿಕ್ಷೆಯನ್ನು ವಿಧಿಸುತ್ತಾನೆ. ಆತನು ತನ್ನ ಜನರನ್ನು ಸಂರಕ್ಷಿಸುತ್ತಾನೆ ಮತ್ತು ಮಾರ್ಗದರ್ಶಿಸುತ್ತಾನೆ ಮತ್ತು ಆತನು ಅವರ ಇತಿಹಾಸವನ್ನೆ ರೂಪಿಸುತ್ತಾನೆ.

1:1-2:3 ರಲ್ಲಿನ ಪೀಠಿಕೆಯಲ್ಲಿ ಕಂಡುಬರುವ ಆದಿಕಾಂಡ ಪುಸ್ತಕವನ್ನು ಸಾಹಿತ್ಯದ ದೃಷ್ಟಿಕೋನದಲ್ಲಿ 10 ಭಾಗಗಳಾಗಿ ವಿಂಗಡಿಸಬಹುದು. ಈ 10 ಭಾಗಗಳಲ್ಲಿನ ಪ್ರತಿಯೊಂದು ಭಾಗಗಳು ಮೂಲ ಸಾಹಿತ್ಯದಲ್ಲಿ ಒಂದೇ ಇಬ್ರಿಯ ಪದದಿಂದ ಪ್ರಾರಂಭಗೊಳ್ಳುತ್ತವೆ. ಈ ಪದದ ಅರ್ಥವೇನಂದರೆ "ನಿರಂತರದ ಕಥೆ" ಎಂದರ್ಥ, ಮತ್ತು ಇಬ್ರಿಯ ಪಠ್ಯದಲ್ಲಿ 10 ಸಾರಿ ಉಪಯೋಗಿಸಲ್ಪಟ್ಟಿದೆ (2:4, 5:1, 6:9, 10:1, 11:27, 25:12, 25:19, 36:1 ಮತ್ತು 37:2) ಹಾಗಾಗಿ ಆದಿಕಾಂಡ ಪುಸ್ತಕವು ಓದುಗರಿಗೆ ನಿರಂತರವಾಗಿ ಪೂರ್ತಿ ಪುಸ್ತಕವನ್ನು ಓದಿ ನಂತರದಲ್ಲಿ ಸತ್ಯವೇದದ ಎಲ್ಲಾ ಭಾಗವನ್ನು ಓದಲಿಕ್ಕೆ ಪ್ರೋತ್ಸಾಹಿಸುತ್ತದೆ. ಈ ಒಂದು ಮಾರ್ಗವಾಗಿ ಆದಿಕಾಂಡವು ಸತ್ಯವೇದದ ಪೀಠಿಕೆ ಭಾಗವಾಗಿದೆ.

ಆದಿಕಾಂಡವನ್ನು ಈ ರೀತಿಯಾಗಿ ರಚಿಸಬಹುದು:

1. ಸೃಷ್ಟಿ ಮತ್ತು ಬಿಳುವಿಕೆ (ಅಧ್ಯಾಯ 1-3)
2. ನೋಹ ಮತ್ತು ಜಲಪ್ರಳಯ (ಅಧ್ಯಾಯ 7-9)
3. ಬಾಬೆಲ್ ಗೋಪುರ (ಅಧ್ಯಾಯ 11)
4. ಅಬ್ರಹಾಮನ ಕುರಿತಾದ ಕಥೆ (ಅಧ್ಯಾಯ 12-25)
5. ಇಸಾಕನ ಕುರಿತಾದ ಕಥೆ (ಅಧ್ಯಾಯ 21, 22, 24, 26, 27, 28)
6. ಯಾಕೋಬನ ಕುರಿತಾದ ಕಥೆ (ಇಸ್ರಾಯೇಲ್) (ಅಧ್ಯಾಯ 25, 27-35, 48, 49)
7. ಯೋಸೇಫನ ಕುರಿತಾದ ಕಥೆ (ಅಧ್ಯಾಯ 37-50)

## ವಿಮೋಚನಕಾಂಡ

ಮೋಶೆಯ ಉಳಿದ 4 ಪುಸ್ತಕಗಳಲ್ಲಿ ಮೋಶೆಯು ಪ್ರಮುಖ ವ್ಯಕ್ತಿಯಾಗಿದ್ದಾನೆ. ವಿಮೋಚನಕಾಂಡದ ಪ್ರಾರಂಭದಲ್ಲಿ ಇಸ್ರಾಯೇಲರು ಐಗುಪ್ತ್ಯರ ಗುಲಾಮರಾಗಿದ್ದರು. ನಂತರದಲ್ಲಿ ಹೇಗೆ ಮೋಶೆಯು ತಾನು ಕೊಲ್ಲಲ್ಪಡುವುದರಿಂದ ಪರೋಹನ ಕುಮಾರಿಯಿಂದ ರಕ್ಷಿಸಲ್ಪಟ್ಟು ಅರಮನೆಯ ಅಂಗಳಕ್ಕೆ ಪ್ರವೇಶಿಸಿ, ಆತನು 40 ವರ್ಷಗಳ ಕಾಲ ರಾಜಕುಮಾರನಾಗಿ ಹೇಗೆ ಜೀವಿಸಿದನೆಂಬುದರ ಕುರಿತು ನಾವು ಓದುತ್ತೇವೆ. ಆದರೆ ನಂತರದಲ್ಲಿ ಐಗುಪ್ತದ ಅಧಿಕಾರಿಯು ಗುಲಾಮರಾಗಿದ್ದ ತನ್ನ ಜನರ ಮೇಲೆ ದಬ್ಬಾಳಿಕೆ ಮಾಡುತ್ತಿರುವುದನ್ನು ನೋಡಿ, ಆ ಅಧಿಕಾರಿಯನ್ನು ಕೊಂದ ನಿಮಿತ್ತದಿಂದ, ಐಗುಪ್ತದಿಂದ ಓಡಿ ಹೋಗಲು ಒತ್ತಾಯಿಸಲ್ಪಟ್ಟನು. ಇದು ಆತನ ಉಳಿದ 40 ವರ್ಷಗಳ ಜೀವಿತದ ಪ್ರಾರಂಭವಾಗಿದೆ. ಈಗ ಮೋಶೆಯು ದೇಶಭ್ರಷ್ಟನಾಗಿ ಮಿದ್ಯಾನ್ಯರ ದೇಶದಲ್ಲಿದ್ದನು.

ಈ 40 ವರ್ಷಗಳ ಕೊನೆಯಲ್ಲಿ ದೇವರು ಐಗುಪ್ತ ದೇಶದಲ್ಲಿ ಬಂಧನಕ್ಕೊಳಗಾಗಿದ್ದ ಇಸ್ರಾಯೇಲ್ ಜನರನ್ನು ಬಿಡಿಸಿ ಅವರನ್ನು ವಾಗ್ದಾನದ ದೇಶವಾಧ ಕಾನಾನ್ ದೇಶಕ್ಕೆ ನಡೆಸಲು ಮುಳ್ಳಿನ ಪೊದೆಯೊಳಗೆ ಉರಿಯುವ ಬೆಂಕಿಯ ಮೂಲಕ ಮೋಶೆಯೊಂದಿಗೆ ಮಾತನಾಡಿ ಕರೆದನು. ಕೆಲವು ಭಿನ್ನಾಭಿಪ್ರಾಯದ ನಂತರದಲ್ಲಿ ಮೋಶೆ ಮತ್ತು ಆತನ ಅಣ್ಣನಾದ ಆರೋನನು ಇಸ್ರಾಯೇಲ್ ಜನರ ನಾಯಕರಾದರು. ಕೊನೆಯಲ್ಲಿ 10 ಉಪದ್ರವಗಳ ನಂತರವೇ ಫರೋಹನು ಇಸ್ರಾಯೇಲ್

ಜನರು ಐಗುಪ್ತವನ್ನು ಬಿಟ್ಟುಹೋಗುವಂತೆ ಅಪ್ಪಣೆಕೊಟ್ಟನು. ಐಗುಪ್ತದಿಂದ ಬಿಡುಗಡೆಯಾದ ಈ ಸಂಗತಿಯನ್ನೇ ಪುಸ್ತಕಕ್ಕೆ ಹೆಸರನ್ನಾಗಿ ನೀಡಲಾಯಿತು. ಆದರೆ ಅವರ ಅಪನಂಬಿಕೆಯ ಕಾರಣದಿಂದ ಅವರ ಯಾತ್ರೆಯು 40 ವರ್ಷಕ್ಕೆ ಕೊನೆಗೊಂಡಿತು.

ವಿಮೋಚನಕಾಂಡ ಪುಸ್ತಕದ ಎರಡನೇ ಭಾಗವು (ಅಧ್ಯಾಯ 19-24) ಅರಣ್ಯದಲ್ಲಿ ಇಸ್ರಾಯೇಲ್ ಜನರ ಯಾತ್ರೆಯ ಪ್ರಾರಂಭದಲ್ಲಿನ ದೇವರು ಸಿನಾಯ್ ಪರ್ವತದಲ್ಲಿ ತನ್ನನ್ನು ಪ್ರಕಟಿಸಿಕೊಂಡಿದ್ದರ ಕುರಿತು ಇದೆ. ಇಲ್ಲಿ ದೇವರು ಇಸ್ರಾಯೇಲ್ ಜನರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ಮೋಶೆಯ ಮೂಲಕ ಅವರಿಗೆ ಧರ್ಮಶಾಸ್ತ್ರವನ್ನು ನೀಡಿದನು. ಮೋಶೆಯು ಸಿನಾಯ್ ಪರ್ವತದಲ್ಲಿ ದೇವರೊಂದಿಗಿರುವಾಗ, ಜನರು ದೇವರ ವಿರುದ್ಧವಾಗಿ ತಿರುಗಿಕೊಂಡು ಅವರು ಬಂಗಾರದ ಬಸವನ ಮಾಡಿಕೊಂಡು ಆರಾಧಿಸಿದರು (ಅಧ್ಯಾಯ 32). ದೇವರು ಇಸ್ರಾಯೇಲ್ ಜನರಿಗೆ ಕೊಟ್ಟ ನಿಬಂಧನೆಯು ಅವರು ಅರಣ್ಯದಲ್ಲಿರುವಾಗಲೂ ಮತ್ತು ವಾಗ್ದಾನ ದೇಶಕ್ಕೆ ಹೋದಾಗಲೂ ಅದನ್ನು ಪಾಲಿಸಬೇಕೆಂದು ಕೊಟ್ಟನು. ಆ ನಿಬಂಧನೆಗಳು ದಶಾಜ್ಞೆಗಳಲ್ಲಿ ಸಂಕ್ಷಿಪ್ತವಾಗಿ ಹೇಳಲಾಗಿದೆ (ಅಧ್ಯಾಯ 20). ಅವುಗಳು ಜನರು ತಮ್ಮ ಸಮುದಾಯದೊಂದಿಗೆ ಹೇಗೆ ಕೂಡಿ ಬಾಳಬೇಕು ಮತ್ತು ದೇವರೊಂದಿಗೆ ಅವರು ಹೇಗೆ ಸಂಪರ್ಕದಲ್ಲಿರಬೇಕೆಂಬುದರ ಕುರಿತಾಗಿವೆ.

ನಂತರದಲ್ಲಿ ದೇವರು ತನ್ನ ಗುಡಾರವನ್ನು ಕಟ್ಟಬೇಕೆಂಬುದರ ಕುರಿತ ಮಾಹಿತಿಯ ವಿವರವನ್ನು ತಿಳಿಸುತ್ತಾನೆ (ಅಧ್ಯಾಯ 25 ಮತ್ತು ನಂತರದ ಅಧ್ಯಾಯಗಳು). ದೇವಗುಡಾರವು ಭಾರವಿಲ್ಲದೆ ಸಾಗಿಸುವಂತಹ ದೇವಾಲಯವಾಗಿತ್ತು, ಅಲ್ಲಿ ಜನರು ತಮ್ಮ ಬಲಿಧಾನಗಳಿಂದ ದೇವರನ್ನು ಆರಾಧಿಸುತ್ತಿದ್ದರು. ಹೊಸದಾಗಿ ಕಟ್ಟಲ್ಪಟ್ಟ ದೇವಗುಡಾರದಲ್ಲಿ ದೇವರ ಮಹಿಮೆಯು ತುಂಬಿಕೊಳ್ಳುವುದರಿಂದ ಪುಸ್ತಕವು ಕೊನೆಗೊಳ್ಳುತ್ತದೆ.

ವಿಮೋಚನಕಾಂಡವನ್ನು ಈ ರೀತಿಯಾಗಿ ರಚಿಸಬಹುದು:

1. ದೇವರು ಇಸ್ರಾಯೇಲ್ ಜನರನ್ನು ಐಗುಪ್ತದಲ್ಲಿನ ಅವರ ಬಂಧನದಿಂದ ಬಿಡುಗಡೆ ಮಾಡಿದನು (ಅಧ್ಯಾಯ 1 ರಿಂದ 18 ರವರೆಗೆ).
2. ದೇವರು ಇಸ್ರಾಯೇಲ್ ಜನರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ಅವರಿಗೆ ತನ್ನ ಧರ್ಮಶಾಸ್ತ್ರವನ್ನು ನೀಡುವುದರ ಮೂಲಕ ಪ್ರವೇಶಿಸುತ್ತಾನೆ (ಅಧ್ಯಾಯ 19-24).
3. ದೇವರು ತನ್ನ ಜನರು ತನಗಾಗಿ ಒಂದು ಗುಡಾರವನ್ನು ಕಟ್ಟಬೇಕೆಂಬ ಮಾಹಿತಿಯನ್ನು ನೀಡಿದನು ಮತ್ತು ಅದನ್ನು ತನ್ನ ಮಹಿಮೆಯಿಂದ ತುಂಬಿಸಿದನು (ಅಧ್ಯಾಯ 25-40).

## ಯಾಜಕಕಾಂಡ

ಸತ್ಯವೇದದ ಎಲ್ಲಾ ಪುಸ್ತಕಗಳಲ್ಲಿ ಈ ಪುಸ್ತಕವನ್ನು ಅರ್ಥೈಸಿಕೊಳ್ಳುವುದು ಕಠಿಣವಾಗಿದೆ, ಯಾಕಂದರೆ ಅದರಲ್ಲಿ ಕಂಡುಬರುವ ವಿವರವುಳ್ಳ ಮಾಹಿತಿಯ ನಿಮಿತ್ತದಿಂದ. ಪುಸ್ತಕದ ಹೆಸರು ಲೇವಿಯ ಮಕ್ಕಳನ್ನು ಸೂಚಿಸುವಂತಹದ್ದಾಗಿದೆ, ಅವರು ದೇವಗುಡಾರದಲ್ಲಿ ಯಾಜಕರಾಗಿ ದೇವರ ಸೇವೆಯನ್ನು ಮಾಡುತ್ತಿದ್ದರು. ಪುಸ್ತಕವು ಅವರ ಸೇವೆಯ ಕುರಿತ ಎಲ್ಲಾ

ನಿಯಮಗಳಿಂದಲೂ ಮತ್ತು ಕಾಯಿದೆಗಳಿಂದಲೂ ತುಂಬಿದೆ. ಮತ್ತು ನಾವು ಇಸ್ರಾಯೇಲ್ ದೇಶದವರು ಪರಿಶುದ್ಧರಾಗಿಯೂ ಮತ್ತು ಪವಿತ್ರರಾಗಿಯೂ ಇರಬೇಕಾದ ನಿಯಮಗಳನ್ನು ಸಹ ಕಾಣಬಹುದು.

ಯಾಜಕಕಾಂಡ ಪುಸ್ತಕವು ವಿಮೋಚನಕಾಂಡ 19:6 ರಲ್ಲಿ 'ದೇವರು ಇಸ್ರಾಯೇಲ್ಯರಿಗೆ' "ನೀವು ನನಗೆ ಯಾಜಕರಾಜ್ಯವೂ ಪರಿಶುದ್ಧಜನವೂ ಆಗಿರುವಿರಿ" ಎಂದು ಹೇಳಿರುವ ಮಾತಿನ ನಿರೂಪಣೆಯಾಗಿದೆ.

ಇಸ್ರಾಯೇಲ್ ಜನರು ಭೂಮಿಯ ಮೇಲಿರುವ ಎಲ್ಲಾ ಜನಾಂಗದವರಿಗೆ ಜೀವಂತ ದೇವರ ಕುರಿತಾಗಿ ಸಾಕ್ಷಿಕರಿಸಲು ನೇಮಿಸಲ್ಪಟ್ಟಿದ್ದಾರೆ. ಯಾಜಕಕಾಂಡ ಪುಸ್ತಕವು ಈ ಕಾರ್ಯದ ದೃಷ್ಟಿ ಮತ್ತು ಚೌಕಟ್ಟನ್ನು ರೂಪಿಸುತ್ತದೆ. ಈ ಕಾರ್ಯದ ಚೌಕಟ್ಟು ಪವಿತ್ರ ನಿಯಮಗಳಲ್ಲಿ ಮತ್ತು ಪರಿಶುದ್ಧ ಕಟ್ಟಳೆಗಳಲ್ಲಿ ವಿವರಿಸಲಾಗಿದೆ (ಅಧ್ಯಾಯ 11-27). ಅದರ ದೃಷ್ಟಿಕೋನವು ದೋಷಪರಿಹಾರಕವಾದ ಮಹಾದಿನದಂದು ಕಂಡುಬರುತ್ತದೆ, ಆ ದಿನದಂದು ಜನರ ಪಾಪಪರಿಹಾರಕ್ಕಾಗಿ ಬಲಿಧಾನಗಳನ್ನು ಪ್ರತಿ ವರುಷ ಅರ್ಪಿಸುತ್ತಾ ಆಚರಿಸಲಾಗುತ್ತಿತ್ತು (ಅಧ್ಯಾಯ 16).

ಯಾಜಕಕಾಂಡದಲ್ಲಿರುವ ನಿಯಮಾವಳಿಗಳನ್ನು ಈ ರೀತಿಯಾಗಿ ವಿಂಗಡಿಸಬಹುದು:

1. ಅರ್ಪಣೆ ಅಥವಾ ಬಲಿಧಾನಗಳು (ಅಧ್ಯಾಯ 1-7)
2. ಯಾಜಕನ ಸೇವೆ (ಅಧ್ಯಾಯ 8-10)
3. ಪ್ರತಿನಿತ್ಯದ ಜೀವಿತದಲ್ಲಿರುವ ಪವಿತ್ರತೆಯ ನಿಯಮಾವಳಿಗಳು (ಅಧ್ಯಾಯ 11-15)
4. ಪವಿತ್ರತೆ, ಪ್ರತಿವರ್ಷದ ಹಬ್ಬಗಳು, ಆಶೀರ್ವಾದ ಮತ್ತು ಶಾಪ (ಅಧ್ಯಾಯ 17-27)

## ಅರಣ್ಯಕಾಂಡ

ಆಂಗ್ಲಭಾಷೆಯ "ಅಂಕಿಗಳು" ಎಂಬ ಹೆಸರು ಜನರನ್ನು ಎಣಿಸುವುದಾಗಿದೆ (ಜನಗಣತಿ), ಪುಸ್ತಕದ ಪ್ರಾರಂಭದಲ್ಲೂ ಹಾಗೆಯೇ ಕೊನೆಯಲ್ಲೂ.

ಇಸ್ರಾಯೇಲ್ ಜನರು ಸಿನಾಯ್ ಪರ್ವತದ ಅರಣ್ಯ ಪ್ರದೇಶದಿಂದ ಮೋವಾಬಿಗೆ ಪ್ರಯಾಣಿಸಿದ 40 ವರ್ಷಗಳನ್ನು (38 ವರ್ಷಗಳನ್ನು) ಸೂಚಿಸುವಂತಹದ್ದು ಕನ್ನಡ ಭಾಷೆಯಲ್ಲಿನ ಪುಸ್ತಕದ ಹೆಸರಾಗಿದೆ. ಇಸ್ರಾಯೇಲ್ ಜನರು ಐಗುಪ್ತವನ್ನು ಬಿಟ್ಟುಹೋದ ಎರಡು ವರ್ಷಗಳ ನಂತರ ಕಥೆಯು ಪ್ರಾರಂಭಗೊಳ್ಳುತ್ತದೆ ಮತ್ತು ದೇವರು ವಾಗ್ದಾನ ಮಾಡಿದ ದೇಶವಾದ ಕಾನಾನಿಗೆ ಪ್ರವೇಶಿಸುವುದಕ್ಕಿಂತ ಮೊದಲು ಕಥೆಯು ಕೊನೆಗೊಳ್ಳುತ್ತದೆ.

ಇಸ್ರಾಯೇಲ್ ಜನರು ತೋರಿಸಿದ ಅಪನಂಬಿಕೆಯ ನಿಮಿತ್ತ ಅವರು ದೀರ್ಘಕಾಲದ ಪ್ರಯಾಣದಲ್ಲಿ ಸಾಗಬೇಕಾಯಿತು. ಯೆಹೋಶುವ ಮತ್ತು ಕಾಲೇಬರು ವಾಗ್ದಾನದ ದೇಶವನ್ನು ಸಂಚರಿಸಿ ಅದು ಫಲವತ್ತತೆಯಿಂದಲೂ ಮತ್ತು ಸಮೃದ್ಧಿಯಿಂದಲೂ ಕೂಡಿರುವುದನ್ನು ನೋಡಿಕೊಂಡು ಬಂದು ಜನರು ಅದನ್ನು ಪ್ರವೇಶಿಸುವಂತೆ ಪ್ರೋತ್ಸಾಯಿಸಿದರು. ಆದರೆ ಜನರು ಇವರ ಸಲಹೆಗಳನ್ನು ಪಾಲಿಸುವುದಕ್ಕೆ ಬದಲಾಗಿ ಉಳಿದ 10 ಜನರ ಸಲಹೆಗಳನ್ನು ಪಾಲಿಸಿದ್ದರಿಂದ ಅವರು ದೇವರ ವಿರುದ್ಧ ದಂಗೆ ಎದ್ದರು. ಅರಣ್ಯಕಾಂಡವು ಜನರ ಅಸಮಧಾನ ಮತ್ತು ಗೊಣಗುಟ್ಟುವುದರ ಕುರಿತ ದುಃಖಕರವಾದ ಕಥೆಯಾಗಿದೆ. ಅವರು ಕಠಿಣ ಪರಿಸ್ಥಿತಿಯನ್ನು ಹಾದುಹೋಗುವ ಪ್ರತಿಸಾರಿಯೂ ದೇವರ ಮತ್ತು ಅವರ ನಾಯಕನಾದ ಮೋಶೆಯ ವಿರುದ್ಧ ದಂಗೆ ಏಳುತ್ತಿದ್ದರು. ಜನರ ಅವಿಧೇಯತ್ವದ ಮಧ್ಯದಲ್ಲೂ ದೇವರು ತನ್ನ ಜನರನ್ನು ಸಂರಕ್ಷಿಸಿದನು.

ಆದರೆ ಐಗುಪ್ತದಿಂದ ಪ್ರಯಾಣಿಸಿದವರಲ್ಲಿ ಕಾಲೇಬ್ ಯೆಹೋಶುವರಿಬ್ಬರು ಮಾತ್ರ ದೇವರು ವಾಗ್ದಾನ ಮಾಡಿದ ದೇಶವನ್ನು ಪ್ರವೇಶಿಸಿದರು.

ಅರಣದಲ್ಲಿನ ಈ ದೀರ್ಘಕಾಲದ ಪ್ರಯಾಣದಲ್ಲಿ ಚಿರಪರಿಚಿತವಾದ ಅನೇಕ ಘಟನೆಗಳು ನಡೆದವು. ಆರೋನನ ಕೋಲು ಚಿಗುರಿದ್ದು (ಅಧ್ಯಾಯ 17), ತಾಮ್ರದ ಸರ್ಪ (ಅಧ್ಯಾಯ 21) ಮತ್ತು ಬಿಳಾಮನ ಕತ್ತೆ (ಅಧ್ಯಾಯ 22).

ಅರಣ್ಯಕಾಂಡ ಪುಸ್ತಕದ ಪಠ್ಯವನ್ನು ಈ ರೀತಿಯಾಗಿ ವಿಂಗಡಿಸಬಹುದು:

1. ಸಿನಾಯ್ ಪರ್ವತದಲ್ಲಿ ಇಸ್ರಾಯೇಲ್ ಜನರು (1:1-10:10)
2. ಕಾದೇಶಿನಲ್ಲಿ ಇಸ್ರಾಯೇಲ್ ಜನರು (10:11- 20:13)
3. ಕಾದೇಶಿನಿಂದ ಮೋವಾಬ್ ಬೈಲಿನ ಕಡೆ ಇಸ್ರಾಯೇಲ್ ಜನರು ಪ್ರಯಾಣಿಸಿದ್ದು (20:14-22:1)
4. ಮೋವಾಬಿನ ಬೈಲಿನಲ್ಲಿ ಇಸ್ರಾಯೇಲ್ ಜನರು (22:2-36:13)

ಪುಸ್ತಕವನ್ನು ನಾವು ಜನರ ಎರಡು ಸಂತತಿಗಳಲ್ಲಿ ಈ ರೀತಿಯಾಗಿ ವಿಂಗಡಿಸಬಹುದು.

1. ದೇವರ ವಾಗ್ದಾನಗಳಲ್ಲಿ ನಂಬಿಕೆಯನ್ನು ಇಡಲಿಕ್ಕೆ ಮನಸ್ಸುಮಾಡದ, ಹಳೇಯ ಸಂತತಿಯ ಅಂತ್ಯ (ಅಧ್ಯಾಯ 1-25)
2. ವಾಗ್ದಾನದ ದೇಶವನ್ನು ಪ್ರವೇಶಿಸಲಿಕ್ಕಿರುವ ಹೊಸ ಸಂತತಿಯ ಉಗಮ (ಅಧ್ಯಾಯ 26-36).

# ಧರ್ಮೋಪದೇಶಕಾಂಡ

ಅರಣ್ಯದಲ್ಲಿ ಅವರು ಮಾಡಿದ ಪ್ರಯಾಣವು ಅಂತ್ಯವಾಗುವಾಗ, ಈ ಪುಸ್ತಕವು ಪ್ರಾರಂಭಗೊಳ್ಳುತ್ತದೆ. ಈಗ ಇಸ್ರಾಯೇಲ್ ಜನರು ಮೋವಾಬ್ ಬೈಲಿನ ಪೂರ್ವಭಾಗದಲ್ಲಿನ ಯೊರ್ದನ್ ಹೊಳೆಯ ಆಚೆಯಲ್ಲಿದ್ದಾರೆ. ಈ ಪುಸ್ತಕವು ವಾಗ್ದಾನ ದೇಶವನ್ನು ಪ್ರವೇಶಿಸಲಿಕ್ಕಿರುವ ಜನರನ್ನು ಉದ್ದೇಶಿಸಿ ಮೋಶೆಯು ಮಾಡಿದ ಉಪನ್ಯಾಸಗಳಿಂದ ಕೂಡಿದೆ. ಮೋಶೆಯು ಹೊಸಸಂತತಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದಾನೆ, ಮತ್ತು ಆತನು ಭೂತಕಾಲವನ್ನು ಮತ್ತು ಭವಿಷ್ಯತ್ ಕಾಲವನ್ನು ಸಹ ನೋಡುತ್ತಿದ್ದಾನೆ.

ಪುಸ್ತಕವನ್ನು ಮೂರು ಉಪನ್ಯಾಸವನ್ನಾಗಿ ಈ ರೀತಿಯಾಗಿ ವಿಂಗಡಿಸಬಹುದು:

1. ಮೋಶೆಯ ಮೊದಲ ಉಪನ್ಯಾಸ (1:1-4:43)
2. ಮೋಶೆಯ ಎರಡನೇ ಉಪನ್ಯಾಸ (4:44-28:68)
3. ಮೋಶೆಯ ಮೂರನೇಯ ಉಪನ್ಯಾಸ (ಅಧ್ಯಾಯ 29-39) ಮೋಶೆಯ ಮರಣ (ಅಧ್ಯಾಯ 29-33)

ಮೋಶೆಯು ದಶಾಜ್ಞೆಗಳನ್ನು ಪುನರಾವರ್ತಿಸುತ್ತಾ ಹಿಂದೆ ನೋಡುತ್ತಿದ್ದಾನೆ (ಅಧ್ಯಾಯ 5). ಸತ್ಯವೇದದಲ್ಲಿ ದೇವರಿಂದ ಹೇಳಲ್ಪಟ್ಟ ಈ ಸಾಮಾನ್ಯ ಅಂಶವು ತಿಳಿಸಲ್ಪಟ್ಟಿದ್ದು ಎರಡನೇಯ ಸಾರಿಯಾಗಿದೆ. ಅದಕ್ಕಾಗಿಯೇ ಈ ಪುಸ್ತಕವನ್ನು ಧರ್ಮೋಪದೇಶಕಾಂಡ ಎಂದು ಆಂಗ್ಲ ಭಾಷೆಯಲ್ಲಿ (ಗ್ರೀಕ್ ಭಾಷೆಯಲ್ಲಿ "ಎರಡನೇಯ ವಿಧಿನಿಬಂಧನೆಗಳು") ಕರೆಯಲಾಗಿದೆ. ಮೋಶೆಯು ನೂತನ ಸಂತತಿಯವರು ದೇವರ ಒಡಂಬಡಿಕೆಗೆ ನಂಬಿಗಸ್ಥರಾಗಿರಬೇಕೆಂದು

ಉಪದೇಶಿಸುತ್ತಿದ್ದಾನೆ. ಇದರಿಂದ ಅವರು ಆಶೀರ್ವಾದದ ಜೀವಿತವನ್ನು ಆಯ್ಕೆ ಮಾಡಿಕೊಳ್ಳುವಂತವರಾಗಿದ್ದಾರೆ (ಅಧ್ಯಾಯ 27-28, 30:19). ಈಗ ಮೋಶೆಯು ತನ್ನ ಉತ್ತರಾಧಿಕಾರಿಯನ್ನಾಗಿ ಯೆಹೋಶುವನನ್ನು ನೇಮಿಸುತ್ತಿದ್ದಾನೆ.

ಹಿಡೀ ಧರ್ಮೋಪದೇಶಕಾಂಡ ಪುಸ್ತಕದ ರಚನೆಯು ಇತಿಹಾಸದ ಅವಧಿಯಲ್ಲಿ ಮಹಾರಾಜನು ತನ್ನ ಅಧೀನ ಅರಸರೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ನೆನಪಿಸುತ್ತದೆ. ಇಂತಹ ವಿಧವಾದ ಒಡಂಬಡಿಕೆಯನ್ನು ಪುರಾತತ್ವಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ. ಅವುಗಳು ನಾಲ್ಕು ವಿಭಾಗಗಳನ್ನು ಒಳಗೊಂಡಿವೆ ಮತ್ತು ಈ ನಾಲ್ಕು ವಿಭಾಗಗಳನ್ನು ನಾವು ಧರ್ಮೋಪದೇಶಕಾಂಡದಲ್ಲಿ ಕಾಣಬಹುದಾಗಿದೆ:

1. ಐತಿಹಾಸಿಕ ಪೀಠಿಕೆ (ಅಧ್ಯಾಯಗಳು 1-3)
2. ಪರಿಸ್ಥಿತಿಗಳು (ಅಧ್ಯಾಯಗಳು 4-26)
3. ದಾಖಲೆಗಳು (ಅಧ್ಯಾಯ 27)
4. ಆಶೀರ್ವಾದಗಳು ಮತ್ತು ಶಾಪಗಳು (ಅಧ್ಯಾಯ 28)

ಪುಸ್ತಕದ ಪ್ರಮುಖ ಅಂಶವೇನಂದರೆ ದೇವರು ತನ್ನ ಜನರನ್ನು ಸಂರಕ್ಷಿಸಿ ಆಶೀರ್ವದಿಸಿದ್ದಾನೆ. ಹಾಗಾಗಿ ಜನರು ಆತನನ್ನು ಯಾವಾಗಲೂ ಇದನ್ನು ನೆನಪುಮಾಡಿಕೊಳ್ಳುತ್ತಾ ಆತನನ್ನು ಪ್ರೀತಿಸಿ ಸೇವಿಸುವವರಾಗಿರಬೇಕೆಂಬುದೇ. ಯೇಸು ಹೇಳಿದ್ದ ಮುಖ್ಯವಾದ ಆಜ್ಞೆಯು ಈ ಪುಸ್ತಕದಿಂದಲೇ ಬಂದದ್ದು "ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ ಪೂರ್ಣಪ್ರಾಣದಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು". ಪುಸ್ತಕದ ಕೊನೆಯಲ್ಲಿ ಯೆಹೋಶುವನಿಗೆ ಹೇಳಿದ ಮಾತುಗಳನ್ನು ಆತನ ಬೀಳ್ಕೊಡಿಗೆಯ ಪದ್ಯವನ್ನು ಕಾಣಬಹುದು (ಅಧ್ಯಾಯಗಳು 31-34). ಹೀಗೆ ಮೋಶೆಯ ಐದು ಪುಸ್ತಕಗಳು ಮುಕ್ತಾಯಗೊಳ್ಳುತ್ತವೆ. ಆದರೆ ಇದೇ ಸಮಯದಲ್ಲಿ ನಿರೀಕ್ಷೆ ಮತ್ತು ಭವಿಷ್ಯದ ಪ್ರಾರಂಭವಾಗಿದೆ. ಇಸ್ರಾಯೇಲ್ ಜನರಿಗೆ ಈಗ ಏನು ಸಂಭವಿಸಲಿಕ್ಕಿದೆ?

## ಪಂಚಕಾಂಡದ ಪ್ರಶ್ನೆಗಳು

1. ಸತ್ಯವೇದದ ಮೊದಲ ಐದು ಪುಸ್ತಕಗಳನ್ನು ಇಸ್ರಾಯೇಲ್ ಜನರು ಏನೆಂದು ಕರೆದರು?
2. 'ಪಂಚಕಾಂಡ' ಹೆಸರಿನ ಅರ್ಥವೇನು?
3. ಈ ಐದು ಪುಸ್ತಕಗಳಿಗೆ ಯಾಕೆ ಕನ್ನಡದ ಹೆಸರುಗಳು ಕೊಡಲ್ಪಟ್ಟಿವೆ ಎಂಬುದನ್ನು ವಿವರಿಸಿರಿ. ಆಲೋಚಿಸಿರಿ ಮತ್ತು ಚರ್ಚಿಸಿರಿ.
4. ಆಂಗ್ಲ ಭಾಷೆಯಲ್ಲಿ ಅವುಗಳ ಹೆಸರುಗಳೇನು? ಈ ಹೆಸರುಗಳನ್ನು ವಿವರಿಸಿರಿ.
5. ಅಬ್ರಹಾಮನ ಕರೆಯುವಿಕೆ ಮತ್ತು ಮೋಶೆಯ ಮರಣಗಳ ಮಧ್ಯದಲ್ಲಿರುವ ಅಂದಾಜು ವರ್ಷಗಳೆಷ್ಟು?
6. ಪಂಚಕಾಂಡದಾದ್ಯಂತ ಇರುವ ಪ್ರಮುಖ ಅಂಶವೇನು? ಆಲೋಚಿಸಿ ಮತ್ತು ಚರ್ಚಿಸಿರಿ.
7. ಯಾವ ಪುಸ್ತಕಗಳಲ್ಲಿ ಈ ಕೆಳಗಿನ ಘಟನೆಗಳ ಕುರಿತು ಓದುತ್ತೇವೆ ತಿಳಿಸಿರಿ?

   ಅ. ಜಲಪ್ರಳಯ

   ಆ. ತಾಮ್ರದ ಸರ್ಪ

ಇ. ದಶಾಜ್ಞೆಗಳು

ಈ. ಬಾಬೆಲ್ ಗೋಪುರ

ಉ. ದೋಷಪರಿಹಾರಕ ದಿನ

ಊ. ಬಂಗಾರದ ಬಸವ

ಎ. ಅಬ್ರಹಾಮನು

ಏ. ದೇವಗುಡಾರವನ್ನು ಹೇಗೆ ಮಾಡುವುದು

ಐ. ಯೋಸೇಫನು

8. ಹಳೇ ಒಡಂಬಡಿಕೆಯ ಈ ಪುಸ್ತಕಗಳಿಂದ ಐದು ಪ್ರಶ್ನೆಗಳನ್ನು ಬರೆಯಿರಿ. ಅವುಗಳಿಗೆ ಉತ್ತರವನ್ನು ಬರೆಯುವಂತೆ ನಿಮ್ಮ ಸ್ನೇಹಿತನಲ್ಲಿ ಕೇಳಿಕೊಳ್ಳಿರಿ. ಕೊನೆಯಲ್ಲಿ ಅವರ ಉತ್ತರಕ್ಕೆ ಅಂಕಗಳನ್ನು ಕೊಡಿರಿ. ಪ್ರತಿಯೊಂದು ಸರಿಯಾದ ಉತ್ತರಗಳಿಗೆ 10 ಅಂಕಗಳನ್ನು; ಇಲ್ಲವಾದರೆ ಅದು ಸರಿಯಾದ ಉತ್ತರಕ್ಕೆ ಹತ್ತಿರವಿರುವ ಅಂಶವಾಗಿದ್ದರೆ ಯೋಗ್ಯವಾದ ಅಂಕವನ್ನು ಕೊಡಿರಿ. ಉತ್ತೀರ್ಣಕ್ಕೆ 25-34 ಅಂಕಗಳನ್ನು ಅತ್ಯುತ್ತಮಕ್ಕೆ 35-50 ಅಂಕಗಳನ್ನು ನೀಡಿರಿ.

# ಭಾಗ 2: ಐತಿಹಾಸಿಕ (ಚಾರಿತ್ರಿಕ) ಪುಸ್ತಕಗಳು

ಹಳೇ ಒಡಂಬಡಿಕೆಯ ಈ ವಿಭಾಗವು ಯೆಹೋಶುವನಿಂದ ಎಸ್ತೇರ್ ವರೆಗಿನ ಪುಸ್ತಕಗಳನ್ನು ಒಳಗೊಂಡಿದೆ (12 ಪುಸ್ತಕಗಳು). ವಾಗ್ದಾನದ ದೇಶವನ್ನು ಸ್ವಾಧೀನ ಮಾಡಿಕೊಂಡಂದಿನಿಂದ (ಸುಮಾರು ಕ್ರಿ.ಪೂ. 1400) ಬಾಬೆಲಿನ ಅವರ ಸೆರೆಯಿಂದ ಬಿಡುಗಡೆ ಮತ್ತು ಯೆರೂಸಲೇಮಿನಲ್ಲಿ ದೇವಾಲಯ ಮತ್ತು ಪಟ್ಟಣದ ಸುತ್ತ ಗೋಡೆಯನ್ನು ಕಟ್ಟುವವರೆಗಿನ (ಸುಮಾರು ಕ್ರಿ.ಪೂ. 440) ಇಸ್ರಾಯೇಲ್ ಜನರ ಐತಿಹಾಸಿಕ ಸಮಯವನ್ನು ಇದು ಒಳಗೊಂಡಿದೆ. ಇಲ್ಲಿ ಪುಸ್ತಕಗಳ ಎರಡು ಸರಣಿಗಳಿವೆ ಎಂಬುದಾಗಿ ಈ ಹಿಂದೆ ನಾವು ನೋಡಿದ್ದೇವೆ. ಮೊದಲ ಸರಣಿಯು ಯೆಹೋಶುವ, ನ್ಯಾಯಸ್ಥಾಪಕರು, ಒಂದು ಮತ್ತು ಎರಡನೇ ಸಮುವೇಲ ಮತ್ತು ಒಂದು ಮತ್ತು ಎರಡನೇ ಅರಸುಗಳು ಮತ್ತು ರೂತಳ ಕುರಿತ ಸ್ವತಂತ್ರ ಕಥೆ. ಎರಡನೇ ಸರಣಿಯು ಒಂದು ಮತ್ತು ಎರಡು ಪೂರ್ವಕಾಲವೃತ್ತಾಂತ, ಎಜ್ರ ಮತ್ತು ನೆಹೆಮೀಯ ಮತ್ತು ಎಸ್ತೇರಳ ಕುರಿತ ಸ್ವತಂತ್ರ ಕಥೆಯನ್ನು ಒಳಗೊಂಡಿದೆ. ಈ ಪುಸ್ತಕಗಳು ಬರೀ ಇಸ್ರಾಯೇಲ್ ಜನರ ಇತಿಹಾಸ (ಚರಿತ್ರೆ) ವನ್ನು ವಿವರಿಸಲು ಬರೆಯಲ್ಪಟ್ಟಿಲ್ಲ, ಬದಲಾಗಿ ದೇವರ ಯೋಜನೆ ಮತ್ತು ಸಂದೇಶಗಳು ಆ ರಾಷ್ಟ್ರದ (ಜನಾಂಗದ) ಜೀವಿತದಲ್ಲಿ ಹೇಗೆ ಒಟ್ಟಾಗಿ ಸೇರಿಸುತ್ತವೆ ಎಂಬುದನ್ನು ತೋರಿಸಲು ಬರೆಯಲ್ಪಟ್ಟಿವೆ.

## ಯೆಹೋಶುವನು

ಯೆಹೋಶುವನ ಪುಸ್ತಕವು ಧರ್ಮೋಪದೇಶಕಾಂಡದ ಮುಕ್ತಾಯದಿಂದ ಪ್ರಾರಂಭವಾಗುತ್ತದೆ. ಯೆಹೋಶುವನು ಜನರ ನಾಯಕನಾದನು. ಈಗ ಆತನು ಇಸ್ರಾಯೇಲ್ ಜನರನ್ನು ಕೊಂಡೊಯ್ದು ಅಲ್ಲಿರುವ ಕೆಲ ಜನಾಂಗಗಳನ್ನು ಜಯಿಸಿ ಇಸ್ರಾಯೇಲ್ ಕುಲಗಳಿಗೆ ಭೂಮಿಯನ್ನು ಹಂಚಿಕೊಡುತ್ತಾನೆ.

ಈ ಪುಸ್ತಕದಲ್ಲಿ ಕೆಲ ಜನಪ್ರಿಯ ಕಥೆಗಳನ್ನು ಕಾಣಬಹುದು: ಯೊರ್ದನ್ ಹೊಳೆಯನ್ನು ದಾಟುವ ಕುರಿತ ಕಥೆ (ಅಧ್ಯಾಯ 3-4), ಯೆರಿಕೋ ಗೋಡೆ ಬೀಳುವ ಕುರಿತ ಕಥೆ (ಅಧ್ಯಾಯ 6), ಅಜಾಲೋನಿನ ತಗ್ಗಿನಲ್ಲಿ ಜನರು ಕಾದಾಡುತ್ತಿರುವಾಗ ಸೂರ್ಯನು ನಿಂತುಬಿಡುವ ಕುರಿತ ಕಥೆ (ಅಧ್ಯಾಯ 10), ಪುಸ್ತಕ ಕೊನೆಯಲ್ಲಿ ಯಾವ ದೇವರನ್ನು ಹಿಂಬಾಲಿಸಲು ಬಯಸುತ್ತೀರೋ ಅದನ್ನು ಆರಿಸಿಕೊಳ್ಳಿರೆಂದು ಯೆಹೋಶುವನು ಜನರನ್ನು ಕೇಳುವ ಕುರಿತ ಕಥೆ (ಅಧ್ಯಾಯ 24). ಆದರೆ ಯೆಹೋಶುವನು ಈ ನಿರ್ಧಾರವನ್ನು ಈಗಾಗಲೇ ಮಾಡಿಕೊಂಡಿದ್ದನು, "*ನಾನೂ ನನ್ನ ಮನೆಯವರೂ ಯೆಹೋವನನ್ನೇ ಸೇವಿಸುವೆವು*" (24:15). ದೇವರು ಮತ್ತು ಜನರ ನಡುವಿನ ಒಡಂಬಡಿಕೆಯು ನವೀಕರಣಗೊಂಡಿದೆ. ಯೆಹೋಶುವನು ವಾಗ್ದಾತ್ತ ದೇಶದಲ್ಲಿ ಸಮಾಧಿ ಹೊಂದಿದನು.

ಯೆಹೋಶುವ ಪುಸ್ತಕದ 24 ಅಧ್ಯಾಯಗಳು ಈ ರೀತಿಯ ಸ್ಪಷ್ಟವಾದ ರಚನೆ ಹೊಂದಿವೆ:

8. ದೇಶವನ್ನು ಸ್ವಾಧೀನ ಮಾಡಿಕೊಂಡಿದ್ದು (ಅಧ್ಯಾಯ 1-12)
9. ದೇಶವು ಇಸ್ರಾಯೇಲ್ ಕುಲಗಳ ನಡುವೆ ಹಂಚಿಕೆಯಾದದ್ದು (ಅಧ್ಯಾಯ 13-24)

## ನ್ಯಾಯಸ್ಥಾಪಕರು

ನ್ಯಾಯಸ್ಥಾಪಕರ ಪುಸ್ತಕವು ರಾಜ್ಯವನ್ನು ಸ್ಥಾಪಿಸುವುದಕ್ಕಿಂತ ಸ್ವಲ್ಪ ಮುಂಚಿನ ಸಮಯದವರೆಗೆ (ಕ್ರಿ.ಪೂ. 1400 ಮತ್ತು ಕ್ರಿ.ಪೂ. 1050) ಇಸ್ರಾಯೇಲ್ಯರು ಕಾನಾನನ್ನು ಜಯಿಸಿದ ನಂತರ ಶಾಸನ ರಹಿತ ಶತಮಾನಗಳಿಂದ ಕಥೆಗಳ ಒಂದು ಸಂಗ್ರಹವನ್ನು ಒಳಗೊಂಡಿದೆ. ತಮ್ಮ ಹೊಸ ದೇಶದಲ್ಲಿ ನೆಲೆಗೊಂಡ ಸ್ವಲ್ಪ ಸಮಯದಲ್ಲಿಯೇ ಇಸ್ರಾಯೇಲ್ ಜನರು ದೇವರಿಂದ ದೂರವಾಗಲು ತೊಡಗಿದರು. ಇದರ ಪರಿಣಾಮವಾಗಿ ಅವರು ಇತರ ಜನಾಂಗಗಳಿಂದ ತುಳಿತಕ್ಕೊಳಗಾದರು. ಆ ನಿಮಿತ್ತ ಅವರು ದೇವರೆಡೆಗೆ ಹಿಂತಿರುಗಿ ಬಿಡುಗಡೆಗಾಗಿ ಆತನನ್ನು ಬೇಡಿಕೊಂಡರು. ಅಪಾಯದಿಂದ ಪಾರಾದ ಕೂಡಲೇ ಪುನಃ ದೇವರಿಂದ ದೂರವಾದರು. ಈ ಒಂದು ಸಂಗತಿಯು ಪುನಃ ಪುನಃ ಹೇಗೆ ಪುನರಾವರ್ತನೆಯಾಯಿತೆಂಬುದನ್ನು ಈ ಪುಸ್ತಕ ತೋರಿಸುತ್ತದೆ.

ಈ ಅವಧಿಯಲ್ಲಿ ದೇವರಲ್ಲಿನ ಅವರ ಸಾಮಾನ್ಯ ನಂಬಿಕೆ ಮಾತ್ರ ಕುಲಗಳನ್ನು ಒಟ್ಟಾಗಿ ಇರಿಸಿತ್ತು. ಅವರು ಸ್ಥಳೀಯ ವಿಗ್ರಹಗಳನ್ನು ಆರಾಧಿಸಲು ಪ್ರಾರಂಭಿಸಿದ ಕೂಡಲೇ ಅವರು ವಿಂಗಡಿಸಲ್ಪಟ್ಟರು. ಅವರು ಬಲಹೀನರಾಗಿ ಸುಲಭವಾಗಿ ತಮ್ಮ ವೈರಿಗಳಿಂದ ಸೋಲಿಸಲ್ಪಟ್ಟರು. ಆದರೆ ಇಸ್ರಾಯೇಲ್ಯರು ದೇವರಿಗೆ ಅಪನಂಬಿಗಸ್ತರಾದಂತೆ, ದೇವರೆಡೆಗೆ ಅವರು ತಿರುಗಿದ ಕೂಡಲೇ ಅವರ ಪರವಾಗಿ ಮಧ್ಯ ಪ್ರವೇಶಿಸಲು ಸದಾ ಸಿದ್ಧನಾಗಿರುವನು.

ನ್ಯಾಯಸ್ಥಾಪಕರುಗಳು ಇಸ್ರಾಯೇಲಿನಲ್ಲಿನ ಸ್ಥಳೀಯ ಮುಖಂಡರುಗಳಾಗಿದ್ದು, ಸಾಮಾನ್ಯವಾಗಿ ಜನರನ್ನು ತಮ್ಮ ವೈರಿಗಳಿಂದ ಬಿಡಸಲು ದೇವರಿಂದ ಕಳಿಸಲ್ಪಟ್ಟ ಸೇನಾನಾಯಕರುಗಳಾಗಿದ್ದಾರೆ. ಅವರಲ್ಲಿ ಕೆಲವರೆಂದರೆ ಉದಾ: ದೆಬೋರಾ (ಅಧ್ಯಾಯ 4-5) ಗಿದ್ಯೋನ (ಅಧ್ಯಾಯ 6-8) ಸಂಸೋನ (ಅಧ್ಯಾಯ 13-16) ಇವರು ಹಳೇ ಒಡಂಬಡಿಕೆಯಲ್ಲಿನ ಕೆಲ ಜನಪ್ರಿಯ ವ್ಯಕ್ತಿಗಳಾಗಿದ್ದಾರೆ.

ಈ ಪುಸ್ತಕದ ರಚನೆಯು ಮೇಲೆ ತಿಳಿಸಿದ ವಿಧಾನವನ್ನಾಧರಿಸಿದೆ. ಅಧ್ಯಾಯ 1-6 ಇದನ್ನು ಪುನಃ ಪುನಃ ಮರಳಿಕಳಿಸುತ್ತದೆ. ಮುಕ್ತಾಯದ 17-21 ಅಧ್ಯಾಯಗಳು ಇಸ್ರಾಯೇಲ್ ಜನರು ಈ ಸಮಯದಲ್ಲಿ ದೇವರಿಂದ ದೂರವಾದಾಗ ಆದ ಧಾರ್ಮಿಕ ಮತ್ತು ನೈತಿಕ ಅವ್ಯವಸ್ಥೆಗಳ ಕೆಲವು ಕಂತುಗಳನ್ನು ವಿವರಿಸುತ್ತದೆ.

## ರೂತಳು

ಕೇವಲ ನಾಲ್ಕು ಅಧ್ಯಾಯಗಳ ಈ ಸಣ್ಣ ಪುಸ್ತಕವು ಒಂದು ಪ್ರಸಿದ್ಧ ಕಥೆಯನ್ನು ಒಳಗೊಂಡಿದೆ. ಇದು ನ್ಯಾಯಸ್ಥಾಪಕರ ಹಿಂಸಾ ಅವಧಿಯಲ್ಲಿ ನಡೆದ ಒಂದು ಶಾಂತಿಯುತವಾದ ಒಂದು ಕಥೆಯಾಗಿದೆ. ಈ ಪುಸ್ತಕದ ಮುಖ್ಯ ವ್ಯಕ್ತಿ ರೂತಳು. ಈಕೆಯೊಬ್ಬ ಮೋವಾಬ್ಯ ಸ್ತ್ರೀಯಾಗಿದ್ದು, ತನ್ನ ದೇಶದಲ್ಲಿ ನೆಲೆಗೊಂಡ ಇಸ್ರಾಯೇಲ್ ಕುಟುಂಬಕ್ಕೆ ಮದುವೆಯಾಗಿ ಹೋಗುವ ಮೂಲಕ ಈಕೆ ಇಸ್ರಾಯೇಲ್ ದೇವರನ್ನು ತಿಳಿದುಕೊಳ್ಳುತ್ತಾಳೆ. ಅವರ ಗಂಡಂದಿರ ಸಾವಿನ ನಂತರ ರೂತಳ ಅತ್ತೆಯಾದ ನೊವೊಮಿ ಇಸ್ರಾಯೇಲಿಗೆ ಹಿಂತಿರುಗಲು ಬಯಸುತ್ತಾಳೆ. ರೂತಳು ಆಕೆಗೆ ಅನಿರೀಕ್ಷಿತ ನಿಷ್ಠೆಯನ್ನು ತೋರಿಸಿ, ಆಕೆಯೊಂದಿಗೆ ಇಸ್ರಾಯೇಲಿಗೆ ತಾನೂ ಬರುತ್ತೇನೆಂದು ಒತ್ತಾಯಿಸುತ್ತಾಳೆ. ಅವಳು ಆಕೆಗೆ "*ನಿನ್ನ ಜನರೇ ನನ್ನ ಜನರು, ನಿನ್ನ ದೇವರೇ ನನ್ನ ದೇವರು*" (1:16) ಎಂದು ಹೇಳುತ್ತಾಳೆ. ಇಸ್ರಾಯೇಲಿನಲ್ಲಿ ತನ್ನ ಸತ್ತ ಗಂಡನ ಸಂಬಂಧಿಯಾಗಿರುವ ಬೋವಜನಲ್ಲಿ ಹೊಸ ಗಂಡನನ್ನು ಕಂಡುಕೊಳ್ಳುತ್ತಾಳೆ. ಹೀಗೆ ಆಕೆ ಅರಸನಾದ ದಾವೀದ ಮತ್ತು ಯೇಸುವಿನ

ಪೂರ್ವಜಳಾಗುತ್ತಾಳೆ. ದೇವರು ಕೇವಲ ಯೆಹೂದ್ಯರಿಗೆ ಮಾತ್ರವಲ್ಲದೆ ಅನ್ಯರಿಗೆ ಸಹ ದೇವರಾಗಿದ್ದಾನೆ. ಇದನ್ನು ನಾವು ರೂತಳ ಪುಸ್ತಕದಿಂದ ಕಲಿಯಬಹುದು.

# 1 ಸಮುವೇಲನು

ಪ್ರಸಿದ್ಧ ಜರ್ಮನ್ ಸುಧಾರಕನಾದ ಮಾರ್ಟಿನ್ ಲೂಥರನು ಈ ಪುಸ್ತಕಕ್ಕೆ ಈ ಪುಸ್ತಕ ಹೆಸರನ್ನು ಕೊಟ್ಟಿದವನಾಗಿದ್ದಾನೆ. ಇದಕ್ಕಿಂತ ಮೊದಲು ಸಮುವೇಲನ ಎರಡು ಪುಸ್ತಕಗಳನ್ನು "ಅರಸರ ಮೊದಲ ಮತ್ತು ಎರಡನೇ ಪುಸ್ತಕ" ಎಂದು ಕರೆಯಲ್ಪಟ್ಟಿತ್ತು ಮತ್ತು ಮುಂದಿನ ಎರಡು ಪುಸ್ತಕಗಳನ್ನು "ಅರಸರ ಮೂರು ಮತ್ತು ನಾಲ್ಕನೇ ಪುಸ್ತಕವೆಂದು" ಕರೆಯಲ್ಪಟ್ಟಿತ್ತು. ಇಬ್ರಿಯ ಸತ್ಯವೇದದಲ್ಲಿ ಒಂದು ಮತ್ತು ಎರಡನೇ ಸಮುವೇಲ ಪುಸ್ತಕವು ಒಂದೇ ಪುಸ್ತಕವಾಗಿದೆ. ಇದರ ಘಟನೆಗಳು ಕ್ರಿ.ಪೂ. 1075 – ಕ್ರಿ.ಪೂ. 975 ರಲ್ಲಿ ನಡೆದವುಗಳಾಗಿವೆ.

ಈ ಪುಸ್ತಕದ ಆರಂಭದಲ್ಲಿ ಕೊನೆಯ ನ್ಯಾಯಸ್ಥಾಪಕ ಸಹ ಆಗಿರುವ ಪ್ರವಾದಿಯಾದ ಸಮುವೇಲನು ಮುಖ್ಯ ವ್ಯಕ್ತಿಯಾಗಿದ್ದಾನೆ. ಈತನ ಮೂಲಕ ಇಸ್ರಾಯೇಲಿನಲ್ಲಿ ದೇವರ ವಾಕ್ಯವು ಪುನಃ ಪರಿಚಿತವಾಗುತ್ತದೆ. ಅಲ್ಲದೆ ಈತನ ಮೂಲಕವೇ ಇಸ್ರಾಯೇಲಿನಲ್ಲಿ ರಾಜ್ಯವು ಪರಿಚಯಿಸಲ್ಪಡುತ್ತದೆ. ಸಮುವೇಲನು ಮೊದಲು ಸೌಲನನ್ನು (ಅಧ್ಯಾಯ 9-10) ಮತ್ತು ನಂತರ ದಾವೀದನನ್ನು (ಅಧ್ಯಾಯ 16) ಇಸ್ರಾಯೇಲಿನ ಅರಸರಾಗಿ ಅಭಿಷೇಕಿಸುತ್ತಾನೆ. ಸೌಲನು ಕ್ರಮೇಣ ದೇವರಲ್ಲಿನ ನಂಬಿಕೆಯಿಂದ ದೂರವಾಗುತ್ತಾನೆ. ಈತನು ದಾವೀದನ ಮೇಲೆ ಹೊಟ್ಟೆಕಿಚ್ಚು ಪಟ್ಟು ಆತನನ್ನು ಹಿಂಸಿಸುತ್ತಾನೆ. ಯಾಕೆಂದರೆ ದೇವರು ತನ್ನ ಸ್ಥಾನದಲ್ಲಿ ಅರಸನಾಗುವುದಕ್ಕೆ ದಾವೀದನನ್ನು ಆರಿಸಿಕೊಂಡಿದ್ದಾನೆಂದು ತಿಳಿದುಕೊಳ್ಳುತ್ತಾನೆ.

ಸಮುವೇಲನ ಮೊದಲ ಪುಸ್ತಕವನ್ನು ಸಮುವೇಲ ಮತ್ತು ಸೌಲನ ಜೀವಿತಗಳಿಂದ ಈ ರೀತಿಯಾಗಿ ರಚನೆ ಮಾಡಬಹುದು:

1. ಸಮುವೇಲನ ಜೀವನ, ಒಬ್ಬ ಪ್ರವಾದಿ, ನ್ಯಾಯಸ್ಥಾಪಕ ಮತ್ತು ಯಾಜಕನಾಗಿ (ಅಧ್ಯಾಯ 1-7)
2. ಇಸ್ರಾಯೇಲಿನ ಮೊದಲ ಅರಸನಾದ ಸೌಲನ ಕುರಿತ ಕಥೆ (ಅಧ್ಯಾಯ 8-15)
3. ಸೌಲ ಮತ್ತು ದಾವೀದನ ನಡುವಿನ ಸಂಬಂಧ (ಅಧ್ಯಾಯ 16-30)
4. ಸೌಲ ಮತ್ತು ಆತನ ಮಕ್ಕಳ ದುರಂತಮಯ ಸಾವು (ಅಧ್ಯಾಯ 31)

# 2 ಸಮುವೇಲನು

ಈ ಪುಸ್ತಕವು ಸೌಲನ ಮರಣದ ನಂತರ ಪ್ರಾರಂಭವಾಗುತ್ತದೆ. ಈ ದಾವೀದನು ಸಿಂಹಾಸನವನ್ನೇರಿ ಆಳಲು ಪ್ರಾರಂಭಿಸುವನು. ಮೊದಲು ಆತನು ಕೇವಲ ದಕ್ಷಿಣದಲ್ಲಿನ ಯೆಹೂದದ ಮೇಲೆ ಮಾತ್ರ (ಅಧ್ಯಾಯ 1-4) ಅನಂತರ ಇಡೀ ಇಸ್ರಾಯೇಲ್ ರಾಷ್ಟ್ರದ ಮೇಲೆ ಅರಸನಾಗುತ್ತಾನೆ. ದಾವೀದನು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿ ಒಬ್ಬ ಮಹಾ ಆಡಳಿತಗಾರನಾಗುತ್ತಾನೆಂಬುದನ್ನು ನಾವು ಓದುತ್ತೇವೆ. ಆತನು ದೇವರಲ್ಲಿನ ನಂಬಿಕೆಯಲ್ಲಿ ಆಳವಾಗಿ ಬೇರೂರುತ್ತಾನೆ ಮತ್ತು ಜನರೊಂದಿಗೆ ತುಂಬಾ ಜನಪ್ರಿಯನಾಗುತ್ತಾನೆ. ಆದರೆ ಕೆಲಸಮಯ ಆತನು ನಿರ್ದಯಿಯಾಗುತ್ತಾನೆ ಮತ್ತು ತನ್ನದೇ

ಆದ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಾನೆ. ಉದಾಹರಣೆಗೆ ತನ್ನ ಸೇನಾನಿಯೊಬ್ಬನ ಹೆಂಡತಿಯನ್ನು ಮದುವೆಯಾಗಲು ಆತನನ್ನು ಕೊಲ್ಲಿಸುತ್ತಾನೆ (ಅಧ್ಯಾಯ 11).

ಈ ಪುಸ್ತಕವನ್ನು ಈ ರೀತಿಯಾಗಿ ರಚನೆ ಮಾಡಬಹುದು:

1. ದಾವೀದನ ಆಳ್ವಿಕೆಯು ಯಶಸ್ವಿಯಾಗಿರುತ್ತದೆ ಮತ್ತು ಪರಿಣಾಮವಾಗಿ ರಾಷ್ಟ್ರೀಯ ವಿಸ್ತರಣೆ (ಅಧ್ಯಾಯ 1-10)
2. ಅರಸನಾದ ದಾವೀದನ ಆಳ್ವಿಕೆಯಲ್ಲಿನ ಕಷ್ಟ ಮತ್ತು ಸಮಸ್ಯೆಗಳು (ಅಧ್ಯಾಯ 11-24)

# 1 ಅರಸುಗಳು

ಇಬ್ರಿಯ ಸತ್ಯವೇದದಲ್ಲಿ ಒಂದು ಮತ್ತು ಎರಡು ಅರಸುಗಳು ಒಂದೇ ಪುಸ್ತಕವಾಗಿದೆ. ಇದು ಕ್ರಿ.ಪೂ. 970 ರಲ್ಲಿ ದಾವೀದನ ಮರಣದಿಂದ ಕ್ರಿ.ಪೂ. 587 ರಲ್ಲಿನ ಯೆರೂಸಲೇಮಿನ ನಾಶನದವರೆಗೆ ಇಸ್ರಾಯೇಲಿನ 400 ವರ್ಷಗಳ ಇತಿಹಾಸವನ್ನು ವರ್ಣಿಸುತ್ತದೆ. ಈ ಪುಸ್ತಕದಲ್ಲಿ ಇಸ್ರಾಯೇಲ್ ರಾಜರುಗಳು ದೇವರೆಡೆಗಿನ ತಮ್ಮ ನಂಬಿಗಸ್ತಿಕೆಯಿಂದಲೇ ಅಳೆಯಲ್ಪಟ್ಟಿದ್ದಾರೆ. ಒಬ್ಬ ದುಷ್ಟ ಅರಸನು ಅನ್ಯದೇವರುಗಳನ್ನು ಪೂಜಿಸುವ ಅರಸನಾಗಿದ್ದಾನೆ. ಅರಸರುಗಳು ದೇವರಿಗೆ ನಂಬಿಗಸ್ತರಾಗಿರುವಾಗ ದೇಶವು ಯಶಸ್ವಿಯಾಗುತ್ತದೆ. ಅರಸರು ಬೇರೆ ದೇವರುಗಳೆಡೆಗೆ ತಿರುಗಿದಾಗ ಅವರು ವಿಫಲರಾಗುವರು. ಈ ಗುಣಮಟ್ಟದಿಂದ ಉತ್ತರ ರಾಜ್ಯದ ಎಲ್ಲಾ ರಾಜರುಗಳು ಕೆಟ್ಟ ಆಡಳಿತಗಾರರಾಗಿದ್ದಾರೆ. ಆದರೆ ದಕ್ಷಿಣ ರಾಜ್ಯದ ಕೆಲ ಮಂದಿ ಅರಸರುಗಳು ಒಳ್ಳೆಯ ಆಳ್ವಿಕೆ ನಡೆಸುವವರಾಗಿದ್ದಾರೆ.

ಇಸ್ರಾಯೇಲಿನ ಮೂರನೇ ಅರಸನಾದ ಸೊಲೊಮೋನನು ಅರಸರ ಪುಸ್ತಕದ ಮೊದಲ ಭಾಗದ ಮುಖ್ಯ ವ್ಯಕ್ತಿಯಾಗಿದ್ದಾನೆ (ಅಧ್ಯಾಯ 1-11). ಆತನ ಆಳಿಕೆಯು (ಸುಮಾರು ಕ್ರಿ.ಪೂ. 970 – 930) ವೈಭವಯುತವಾಗಿದ್ದು, ಸ್ವತಃ ಆತನು ಜ್ಞಾನದಿಂದ ತುಂಬಿದವನಾಗಿದ್ದನು. ಅಲ್ಲದೆ ಆತನು ಯೆರೂಸಲೇಮಿನಲ್ಲಿ ದೇವಾಲಯವನ್ನು ಕಟ್ಟುತ್ತಾನೆ. ಆದರೆ ಈ ಸುಂದರ ಚಿತ್ರಣವು ಯಾವುದೇ ಅಸ್ಪಷ್ಟತೆಯಿಲ್ಲದೆ ಇಲ್ಲ. ಸೊಲೊಮೋನನು ಹೇಗೆ ಆತ್ಮೀಕ ಅವನತಿಗೆ ಹೋದನು (ತನ್ನ ಪತ್ನಿಯರು ಮತ್ತು ಉಪಪತ್ನಿಯರಿಂದ) ಮತ್ತು ಆತನ ಅತಿಯಾದ ತೆರಿಗೆಯಿಂದ ದೇಶವು ಹೇಗೆ ಬಾಧೆಪಡುತ್ತದೆಂಬುದನ್ನು ನಾವು ಓದುತ್ತೇವೆ.

ಪುಸ್ತಕದ ಎರಡನೇ ಭಾಗವು (ಅಧ್ಯಾಯ 12-22) ಸೊಲೊಮೋನನ ನಂತರ ದೇಶವು ಹೇಗೆ ಉತ್ತರ ರಾಜ್ಯ (ಇಸ್ರಾಯೇಲ್) ಮತ್ತು ದಕ್ಷಿಣ ರಾಜ್ಯವಾಗಿ (ಯೆಹೂದ) ವಿಭಾಗಿಸಲ್ಪಡುತ್ತದೆಂಬುದನ್ನು ವಿವರಿಸುತ್ತದೆ. ಈಗ ಕಥೆಯು ಅರಸರುಗಳಿಗಿಂತ ಪ್ರವಾದಿಗಳ ಮೇಲೆ ಹೆಚ್ಚಾಗಿ ಗಮನ ಹರಿಸುತ್ತದೆ. ದೇವರನ್ನು ಹಿಂಬಾಲಿಸದ ಅನೇಕ ರಾಜರುಗಳ ಮೇಲೆ ಪ್ರವಾದಿಗಳು ನ್ಯಾಯತೀರ್ಪನ್ನು ಸಾರುತ್ತಾರೆ. ಅಲ್ಲದೆ ಅವರು ಈ ಹಿಂದೆ ಜನರು ದೇವರಿಂದ ದೂರವಾಗಿ, ವಿಗ್ರಹಾರಾಧನೆಯೆಡೆಗೆ ತಿರುಗಿದಾಗ ದೇವರ ಬಗ್ಗೆ ಧೈರ್ಯವಾಗಿ ಸಾರಿದರು. ಈ ಪ್ರವಾದಿಗಳಲ್ಲಿ ಎಲೀಯನು ಪ್ರಮುಖನಾಗಿದ್ದಾನೆ. ಬಾಳನ ಪ್ರವಾದಿಯೊಂದಿಗಿನ ಈತನ ಸ್ಪರ್ಧೆಯನ್ನು ಅಧ್ಯಾಯ 18 ರಲ್ಲಿ ನಾವು ಕಾಣಬಹುದು.

ಒಂದನೇ ಅರಸರನ್ನು ಈ ರೀತಿಯಾಗಿ ರಚನೆ ಮಾಡಬಹುದು:

1. ಸೊಲೊಮೋನನ ಆಳ್ವಿಕೆ (ಅಧ್ಯಾಯ 1-11)

2. ಇಸ್ರಾಯೇಲ್ ಮತ್ತು ಯೆಹೂದದಲ್ಲಿ ಕೆಲ ಅರಸರು ಸೊಲೊಮೋನನ ಉತ್ತರಾಧಿಕಾರಿಗಳಾಗುವುದು (ಅಧ್ಯಾಯ 12-16)
3. ಎಲೀಯನ ಸೇವೆ (ಅಧ್ಯಾಯ 17-22)

## 2 ಅರಸುಗಳು

ಈ ಪುಸ್ತಕವು ಮೊದಲ ಅರಸುಗಳ ಮುಕ್ತಾಯದೊಂದ ಮುಂದುವರಿಯುತ್ತದೆ. ಎರಡನೇ ಅಧ್ಯಾಯದಲ್ಲಿ ಎಲೀಯನು ಪರಲೋಕಕ್ಕೆ ಏರಿಹೋಗುವ ಕುರಿತ ಜನಪ್ರಿಯ ಕಥೆಯನ್ನು ನಾವು ಕಾಣುತ್ತೇವೆ (12:1-18). ಅನಂತರ ಈತನ ಉತ್ತರಾಧಿಕಾರಿಯಾದ ಎಲೀಷನು ಉತ್ತರದ ಇಸ್ರಾಯೇಲ್ ಮತ್ತು ದಕ್ಷಿಣದ ಯೆಹೂದದಲ್ಲಿನ ಅರಸುಗಳಿಗೆ ಪ್ರವಾದಿಸುವವನಾಗುತ್ತಾನೆ. ಈತನ ಬೋಧನೆಗಿಂತ ಈತನ ಅದ್ಭುತಗಳೇ (ಸುಮಾರು 18) ವಿವರಿಸಲ್ಪಟ್ಟಿವೆ. ಎಲ್ಲಾ ಎಚ್ಚರಿಕೆಗಳ ಹೊರತಾಗಿಯೂ ಇಸ್ರಾಯೇಲ್ ಮತ್ತು ಯೆಹೂದದಲ್ಲಿನ ಅರಸರುಗಳು ದುಷ್ಟರಾಗಿ ಮುಂದುವರೆಯುತ್ತಾರೆ. ಇದರ ಪರಿಣಾಮವಾಗಿ ಕ್ರಿ.ಪೂ. 722 ರಲ್ಲಿ ಉತ್ತರ ರಾಜ್ಯ (ಇಸ್ರಾಯೇಲ್) ಅಶ್ಶೂರ್ಯರ ವಶವಾದರೆ, ದಕ್ಷಿಣ ರಾಜ್ಯ (ಯೆಹೂದ) ಕ್ರಿ.ಪೂ. 587 ರಲ್ಲಿ ಬಾಬಿಲೋನಿಯನ್ನರ ವಶವಾಗುತ್ತದೆ. ಅದರೊಂದಿಗೆ ಈ ಪುಸ್ತಕವು ಮುಕ್ತಾಯವಾಗುತ್ತದೆ.

ಯೆರೂಸಲೇಮಿನ ಪತನ ಮತ್ತು ಅನೇಕ ಇಸ್ರಾಯೇಲ್ಯರು ಸೆರೆಯಾಗಿ ಹೋದದ್ದು ಇಸ್ರಾಯೇಲ್ ಇತಿಹಾಸದಲ್ಲಿ ಒಂದು ನಿರ್ಣಾಯಕ ತಿರುವಾಗುತ್ತದೆ. ಈ ನಾಲ್ಕು ಐತಿಹಾಸಿಕ ಪುಸ್ತಕಗಳಿಗೆ (ಒಂದು ಮತ್ತು ಎರಡು ಸಮುವೇಲ, ಒಂದು ಮತ್ತು ಎರಡು ಅರಸುಗಳು) ಸಂಬೋಧಿಸುವ ಒಂದು ನಿರ್ಣಾಯಕ ಪ್ರಶ್ನೆಯಿದೆ. ಆ ಪ್ರಶ್ನೆಯು “ಇಸ್ರಾಯೇಲ್ ಜನರಿಗೆ ಯಾಕೆ ಈ ಬಾಧೆ ಸಂಭವಿಸಿತು?” ಮತ್ತು ಈ ಉತ್ತರವನ್ನು ಅವರು ಕೊಡುತ್ತಾರೆ, “ಜನರು ಪ್ರವಾದಿಗಳ ಎಚ್ಚರಿಕೆಗಳಿಗೆ ಕಿವಿಗೊಡದೆ ದೇವರೊಂದಿಗಿನ ತಮ್ಮ ಒಡಂಬಡಿಕೆಯಿಂದ ದೂರವಾದಾಗ ಅವರು ಕೇವಲ ಈ ಬಾಧೆಯನ್ನು ಮಾತ್ರ ಎದರುನೋಡಬೇಕಾಯಿತು”.

ಎರಡು ಅರಸರನ್ನ ಈ ರೀತಿ ರಚನೆ ಮಾಡಬಹುದು:

1. ಎಲೀಷನ ಸೇವೆ ಮತ್ತು ಅದ್ಭುತಗಳು (ಅಧ್ಯಾಯ 1-10)
2. ಉತ್ತರ ರಾಜ್ಯ ಇಸ್ರಾಯೇಲಿನ ಅವನತಿ ಮತ್ತು ನಾಶನ (ಅಧ್ಯಾಯ 11-17)
3. ದಕ್ಷಿಣ ರಾಜ್ಯವಾದ ಯೆಹೂದದ ಅವನತಿ, ಯೆರೂಸಲೇಮಿನ ದೇವಾಲಯದ ನಾಶನ ಮತ್ತು ಜನರು ಸೆರೆಗೆ ಗಡಿಪಾರಾದದ್ದು (ಅಧ್ಯಾಯ 18-25).

## 1 ಪೂರ್ವಕಾಲವೃತ್ತಾಂತ

ಮೊದಲನೆಯದಾಗಿ ಒಂದು ಮತ್ತು ಎರಡು ಪೂರ್ವಕಾಲವೃತ್ತಾಂತಗಳು ಹೆಚ್ಚು ನೀರಸ ರೀತಿಯಲ್ಲಿ ಹಿಂದಿನ ನಾಲ್ಕು ಪುಸ್ತಕಗಳ (1 ಮತ್ತು 2 ಸಮುವೇಲ, 1 ಮತ್ತು 2 ಅರಸುಗಳು) ವಿಷಯಾಂಶಗಳನ್ನು ಪುನರಾವರ್ತಿಸುವುದನ್ನು ನಾವು

ಮನಗಾಣಬಹುದು. ಇದರ ಹಿನ್ನಲೆಯು ಗ್ರಂಥಕರ್ತನು ಈ ಉಳಿದ ಪುಸ್ತಕಗಳನ್ನು ಈಗಾಗಲೇ ಬಲ್ಲ ಜನರಿಗೆ ಇಸ್ರಾಯೇಲ್ಯರ ಚರಿತ್ರೆಯನ್ನು ಪುನಃ ಹೇಳುತ್ತಾನೆ. ಆತನು ಈ ರೀತಿ ಹೇಳಲು ಎರಡು ಕಾರಣಗಳಿವೆ:

1. ಬಾಧೆಗಳ ಹೊರತಾಗಿಯೂ ದೇವರು ತನ್ನ ಜನರನ್ನು ನೋಡಿಕೊಳ್ಳುವ / ಕಾಳಜಿ ವಹಿಸಲು ತನ್ನ ವಾಗ್ದಾನವನ್ನು ಕಾದುಕೊಂಡಿದ್ದನು ಎಂಬುದನ್ನು ಆತನು ತೋರಿಸಲು ಬಯಸುತ್ತಾನೆ. ದಾವೀದ, ಸೊಲೊಮೋನ, ಯೆಹೋಷಾಫಾಟ, ಹಿಜ್ಕೀಯ ಮತ್ತು ಯೋಷೀಯರ ಉತ್ತಮ ಆಡಳಿತದ ಅವಧಿಯಲ್ಲಿನ ದೇಶದ ಯಶಸ್ಸನ್ನು ಆತನು ಒತ್ತಿ ಹೇಳುತ್ತಾನೆ.
2. ಆತನು ಯೆರೂಸಲೇಮಿನಲ್ಲಿನ ದೇವಾಲಯದ ಉಗಮವನ್ನು ವಿವರಿಸಲು, ಯಾಜಕರು ಮತ್ತು ಲೇವಿಯರ ಕರ್ತವ್ಯಗಳನ್ನು ತೋರಿಸಲು ಮತ್ತು ನಂತರದಲ್ಲಿ ಸೊಲೊಮೋನನಿಂದ ಕಟ್ಟಲ್ಪಟ್ಟರೂ ಮೂಲತಃ ದಾವೀದನು ಹೇಗೆ ದೇವಾಲಯಕ್ಕೆ ಅಡಿಪಾಯವನ್ನು ಹಾಕಿದನೆಂಬುದನ್ನು ವಿವರಿಸಲು ಬಯಸುತ್ತಾನೆ. ಬಹುಶಃ ಯೆರೂಸಲೇಮಿನಲ್ಲಿ ದೇವಾಲಯವನ್ನು ತಿರುಗಿ ಕಟ್ಟಲು ಇಸ್ರಾಯೇಲ್ಯರು ಸೆರೆಯಿಂದ ಹಿಂತಿರುಗುತ್ತಿರುವುದನ್ನು ಗ್ರಂಥಕರ್ತನು ಮನಸ್ಸಿನಲ್ಲಿಟ್ಟುಕೊಂಡಿರಬಹುದು. ಅವರು ತಮ್ಮ ಹಿಂತಿನ ಇತಿಹಾಸವನ್ನು ತಿಳಿದುಕೊಂಡಿರಬೇಕು. ದೇವರಿಗೆ ನಂಬಿಗಸ್ತರಾಗಿರುವುದೇ ರಾಷ್ಟ್ರದ ಯಶಸ್ಸಿನ ಸ್ಥಿತಿಗೆ ಕಾರಣವೆಂಬುದನ್ನು ಗ್ರಂಥಕರ್ತನು ಸೂಚಿಸುತ್ತಾನೆ.

ಇಬ್ರಿಯ ಸತ್ಯವೇದದಲ್ಲಿ ಪೂರ್ವಕಾಲವೃತ್ತಾಂತದ ಎರಡೂ ಪುಸ್ತಕಗಳು ಸೇರಿ ಒಂದೇ ಆಗಿದೆ. ಮೊದಲನೇ ವೃತ್ತಾಂತವು ಸೃಷ್ಟಿಯಿಂದ ಪ್ರಾರಂಭವಾಗುತ್ತದೆ. ಆದಾಮನಿಂದ ಅರಸನಾದ ಸೌಲನವರೆಗಿನ ಅವಧಿಯ ಪಟ್ಟಿಯು ಮುಖ್ಯವಾಗಿ ವಂಶಾವಳಿಗಳ ರೂಪದಲ್ಲಿದೆ. ಇದಕ್ಕೆ ಯಾವುದೇ ಕಾರಣವಿಲ್ಲ: ಈ ಪುಸ್ತಕಗಳು ಬಾಬಿಲೋನಿನ ಸೆರೆಯ ನಂತರ ಬರೆಯಲ್ಪಟ್ಟಿವೆ ಮತ್ತು ಹಿಂತಿರುಗಿದ ಜನರು ತಮ್ಮ ಮೂಲ ಮತ್ತು ತಮ್ಮ ಕುಟುಂಬದ ಇತಿಹಾಸ / ಚರಿತ್ರೆಗಳ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳಬೇಕಿತ್ತು.

ವಂಶಾವಳಿಗಳ ನಂತರ ಕಥೆಯು ಅರಸನಾದ ದಾವೀದ ಮತ್ತು ಯೆರೂಸಲೇಮಿನಲ್ಲಿ ದೇವಾಲಯವನ್ನು ಕಟ್ಟುವುದಕ್ಕಾಗಿನ ಆತನ ಸಿದ್ಧತೆಗಳ ಮೇಲೆ ಕೇಂದ್ರಿತವಾಗುತ್ತದೆ. ಇಲ್ಲಿ ದಾವೀದನು ಒಂದು ಮತ್ತು ಎರಡನೇ ಸಮುವೇಲದಲ್ಲಿರುವುದಕ್ಕಿಂತ ಹೆಚ್ಚು ಸಕಾರಾತ್ಮಕವಾಗಿ ಚಿತ್ರಿಸಲ್ಪಟ್ಟಿದ್ದಾನೆ. ಉದಾಹರಣಗೆ ಬತ್ಸೆಬಳೊಂದಿಗಿನ ಆತನ ವ್ಯಭಿಚಾರವೇ ಇದರಲ್ಲಿ ತಿಳಿಸಲ್ಪಟ್ಟಿಲ್ಲ.

ಒಂದನೇ ಪೂರ್ವಕಾಲವೃತ್ತಾಂತವು ಎರಡು ಮುಖ್ಯ ಭಾಗಗಳನ್ನು ಒಳಗೊಂಡಿದೆ:

1. ವಂಶಾವಳಿಗಳು (ಅಧ್ಯಾಯ 1-9)
2. ಅರಸನಾದ ದಾವೀದನ ಜೀವಿತದ ಪಟ್ಟಿ (ಅಧ್ಯಾಯ 10-29)

# 2 ಪೂರ್ವಕಾಲವೃತ್ತಾಂತ

ಈ ಪುಸ್ತಕದ ಮೊದಲ ಭಾಗವು (ಅಧ್ಯಾಯ 1-9) ಹೇಗೆ ಸೊಲೊಮೋನನು ಯೆರೂಸಲೇಮಿನಲ್ಲಿ ಮೊದಲ ದೇವಾಲಯವನ್ನು ಕಟ್ಟಿ, ಅರ್ಪಿಸುತ್ತಾನೆಂಬುದರ ಒಂದು ವೈಭವಯು ಪಟ್ಟಿಯನ್ನು ಕೊಡುತ್ತದೆ. ಒಂದು ಮತ್ತು 2 ನೇ ಪೂರ್ವಕಾಲವೃತ್ತಾಂತದಲ್ಲಿ ದೇವಾಲಯವು ಒಂದು ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ಅವರು ಇಸ್ರಾಯೇಲ್ ಜನರ

ಇತಿಹಾಸವನ್ನು ವಿವರಿಸಿದಂತೆ ಅವರು ರಾಜಕೀಯಕ್ಕಿಂತ ಹೆಚ್ಚಾಗಿ ಧಾರ್ಮಿಕ ವಿಷಯಗಳ ಮೇಲೆ ಹೆಚ್ಚು ಒತ್ತು ನೀಡಿದರು ಎಂಬುದನ್ನು ಇದು ತೋರಿಸುತ್ತದೆ. ಪಟ್ಟಿಗಳಲ್ಲಿ ಪ್ರವಾದಿಗಳ ಬದಲು ಯಾಜಕರುಗಳಿಗೆ ಪ್ರಮುಖ ಸ್ಥಾನ ಕೊಡಲಾಗಿದೆ.

## ಎಜ್ರನು

ಈ ಪುಸ್ತಕವು ಎರಡನೇ ಪೂರ್ವಕಾಲವೃತ್ತಾಂತ ಮುಕ್ತಾಯವಾದಲ್ಲಿನ ಕಥೆಯನ್ನು ಮುಂದುವರೆಸುತ್ತದೆ. ಆದರೆ ಇದು ಒಂದು ನಿರಂತರವಾದ ಐತಿಹಾಸಿಕ ಪಟ್ಟಿಯನ್ನು ಪ್ರಸ್ತುತಪಡಿಸುತ್ತದೆ. ಬದಲಾಗಿ ಇದು ಸುಮಾರು ಕ್ರಿ.ಪೂ 538 – 457 ರ ಅವಧಿಯಲ್ಲಿನ ಅವಶ್ಯಕ ಘಟನೆಗಳನ್ನು ಮಾತ್ರ ತಿಳಿಸುತ್ತದೆ. ಕೆಲ ಪತ್ಯವು ಲೇಖಕನಾದ ಎಜ್ರನಿಂದ ಬರೆಯಲ್ಪಟ್ಟಿದೆ.

ಮೊದಲ ಆರು ಅಧ್ಯಾಯಗಳು ಕ್ರಿ.ಪೂ. 538 ರಲ್ಲಿ ಬಾಬಿಲೋನಿನಿಂದ ಯೆರೂಸಲೇಮಿಗೆ ಸೆರೆಯಾಳುಗಳು ಹಿಂತಿರುಗುವಿಕೆಯ ಕುರಿತದ್ದಾಗಿದೆ. ಯಾಜಕನಾದ ಯೆಶೂವನು ಯಜ್ಞವನ್ನರ್ಪಿಸಲು ಬೇಕಾದ ವೇದಿಯನ್ನು ಕಟ್ಟಲು ಸಿದ್ಧತೆ ಮಾಡುತ್ತಾನೆ. ಅನಂತರ ಜೆರುಬ್ಬಾಬೆಲನು ಯೆರೂಸಲೇಮಿನಲ್ಲಿ ದೇವಾಲಯವನ್ನು ಮರುಸ್ಥಾಪಿಸುವ ಕಾರ್ಯಕ್ಕೆ ಚಾಲನೆ ನೀಡುತ್ತಾನೆ. ಆದರೆ ಕಟ್ಟುವ ಕಾರ್ಯವು ತೀರಾ ನಿಧಾನಗತಿಯಲ್ಲಿ ಸಾಗುತ್ತದೆ. ಕಟ್ಟುವ ಕಾರ್ಯದಲ್ಲಿ ಪ್ರವಾದಿಗಳಾದ ಹಗ್ಗಾಯ ಮತ್ತು ಜೆಕರ್ಯರು ಜನರನ್ನು ಉತ್ತೇಜಿಸಿದಾಗ ಅವರು ಕ್ರಿ.ಪೂ. 516 ರಲ್ಲಿ ದೇವಾಲಯವನ್ನು ಪೂರ್ಣಗೊಳಿಸುತ್ತಾರೆ.

ಉಳಿದ ನಾಲ್ಕು ಅಧ್ಯಾಯಗಳು (7-10) ಸುಮಾರು 60 ವರ್ಷಗಳ ನಂತರದ ಕಥೆಯನ್ನು ಮುಂದುವರಿಸುತ್ತವೆ ಮತ್ತು ಎಜ್ರ ಮತ್ತು ಐತಿಹಾಸಿಕ ಘಟನೆಗಳಲ್ಲಿನ ಆತನ ಪಾತ್ರದ ಬಗ್ಗೆ ನಮಗೆ ತಿಳಿಸುತ್ತವೆ. 7:1 ರಲ್ಲಿ ಸಮಯದ ಅಂತರವು ತೋರಿಸಲ್ಪಟ್ಟಿದೆ. ಇದು “ಇದಾದ ಮೇಲೆ” ಎಂಬಲ್ಲಿಂದ ಪ್ರಾರಂಭವಾಗುತ್ತದೆ. ಸೆರೆಯಾಳು ಹಿಂತಿರುಗುವಾಗ ಎರಡನೇ ತಂಡದಲ್ಲಿ ಎಜ್ರನು ನಾಯಕನಾಗಿರುತ್ತಾನೆ. ಯೆರೂಸಲೇಮನ್ನು ತಲುಪಿದ ತರುವಾಗ ಎಜ್ರನು ದೇವಾಲಯದ ಧರ್ಮಾಚರಣೆಯ / ಸುಧಾರಣೆಯ ಕಾರ್ಯಗಳನ್ನಲ್ಲದೆ ಜನರ ಆತ್ಮೀಕ ಜೀವನದಲ್ಲೂ ಸುಧಾರಣೆಯನ್ನು ತರುತ್ತಾನೆ.

## ನೆಹೆಮೀಯನು

ಎಜ್ರನ ಪುಸ್ತಕದಲ್ಲಿನ ಮುಖ್ಯ ಘಟನೆಯು ಯೆರೂಸಲೇಮಿನ ದೇವಾಲಯವನ್ನು ತಿರುಗಿ ಕಟ್ಟುವುದಾಗಿತ್ತು. ನೆಹೆಮೀಯ ಪುಸ್ತಕದಲ್ಲಿನ ಮುಖ್ಯ ಘಟನೆಯು ಯೆರೂಸಲೇಮ್ ಪಟ್ಟಣದ ಗೋಡೆಯನ್ನು ತಿರುಗಿ ಕಟ್ಟುವುದಾಗಿದೆ. ಇಲ್ಲಿ ನಾವು ಕ್ರಿ.ಪೂ. 445 ರಲ್ಲಿ ಬಾಬಿಲೋನಿನಿಂದ 3 ನೇ ತಂಡವಾಗಿ ಸೆರೆಯಾಳುಗಳು ಹಿಂತಿರುಗಿ ಬರುವುದನ್ನು ಕಾಣುತ್ತೇವೆ. ಈ ಪುಸ್ತಕವು ತಾನು ಅನುಭವಿಸಿದ (ಕಂಡ) ಘಟನೆಗಳ ಒಂದು ಮರುಸಂಗ್ರಹವಾಗಿ ಆತನಿಂದ ಬರೆಯಲ್ಪಟ್ಟಿದೆ.

ಎರಡನೇ ಭಾಗದಲ್ಲಿ (ಅಧ್ಯಾಯ 8-12) ಎರಡನೇ ಸುಧಾರಣೆಯ (ಧರ್ಮಸಂಸ್ಥಾಪನೆ) ಕುರಿತ ಪಟ್ಟಿಯನ್ನು ನಾವು ಕಾಣುತ್ತೇವೆ. ಪುನಃ ಎಜ್ರನು ಮುಖ್ಯ ವ್ಯಕ್ತಿಯಾಗುತ್ತಾನೆ. ಆತನು ಜನರಿಗೆ ಧರ್ಮಶಾಸ್ತ್ರವನ್ನು ಓದಿ ಹೇಳುತ್ತಾನೆ. ಇದರ ಪರಿಣಾಮವಾಗಿ ಅವರು ತಮ್ಮ ಪಾಪಗಳನ್ನು ದೇವರಿಗೆ ಅರಿಕೆ ಮಾಡಿ ಆತನೆಡೆಗೆ ತಿರುಗಿಕೊಳ್ಳುತ್ತಾರೆ. ಅಧ್ಯಾಯ 9 ರಲ್ಲಿ ಸತ್ಯವೇದದಲ್ಲಿಯೇ ಒಂದು ಉದ್ದವಾದ ಪ್ರಾರ್ಥನೆಯನ್ನು ನಾವು ಕಾಣುತ್ತೇವೆ.

# ಎಸ್ತೇರಳು

ಹಳೇ ಒಡಂಬಡಿಕೆಯ ಕೊನೆಯ ಐತಿಹಾಸಿಕ (ಚಾರಿತ್ರಿಕ) ಪುಸ್ತಕವು ಕ್ರಿ.ಪೂ. ಐದನೇ ಶತಮಾನದ ಆರಂಭದಲ್ಲಿ ಪರ್ಷಿಯನ್ ಸಾಮ್ರಾಜ್ಯದಿಂದ ಕಂಡುಬಂದ ಒಂದು ಸ್ವತಂತ್ರ ಕಥೆಯಾಗಿದೆ. ಎಸ್ತೇರಳು ಒಬ್ಬ ಯೆಹೂದಿ ಸ್ತ್ರೀಯಾಗಿದ್ದು ಅನಂತರ ಪರ್ಷಿಯಾದ ರಾಣಿಯಾಗುತ್ತಾಳೆ. ಈ ಕಥೆಯು ಓದಲು ಉತ್ಸಾಹಭರಿತವೂ ಮತ್ತು ಸುಲಭವೂ ಆಗಿದೆ. ಇದರಲ್ಲಿ ಆಕೆಯು ತನ್ನ ಜನರಾದ ಯೆಹೂದ್ಯರನ್ನು ನಾಶನದಿಂದ ಸಂರಕ್ಷಿಸುತ್ತಾಳೆ. ಸಾಮ್ರಾಜ್ಯದಲ್ಲಿ ಸರದಾರರಲ್ಲಿ ಉನ್ನತ ಸ್ಥಾನದಲ್ಲಿರುವ ಹಾಮಾನನಿಗೆ ಸಾಷ್ಟಾಂಗ ನಮಸ್ಕಾರ ಮಾಡಲು ಎಸ್ತೇರಳ ಚಿಕ್ಕಪ್ಪನಾದ ಮೊರ್ದೆಕೈ ತಿರಸ್ಕರಿಸುತ್ತಾನೆ. ಇದರಿಂದ ಹಾಮಾನನು ಕುಪಿತನಾಗುತ್ತಾನೆ ಮತ್ತು ಎಲ್ಲಾ ಯೆಹೂದ್ಯರನ್ನು ಸಂಹರಿಸಲು ರಾಜನಿಂದ ಅಪ್ಪಣೆ ಕೇಳುತ್ತಾನೆ.

ರಾಣಿಯಾದ ಎಸ್ತೇರಳು ತನ್ನ ಪ್ರಾಣವನ್ನು ಮುಡಿಪಾಗಿಟ್ಟು ರಾಜನ ಮುಂದೆ ಬಂದು ತನ್ನ ಜನರನ್ನು ರಕ್ಷಿಸಬೇಕೆಂದು ಆತನ ಬಳಿ ಮನವಿ ಮಾಡಿಕೊಳ್ಳುತ್ತಾಳೆ. ಈ ಕಥೆಯು ಯೆಹೂದಿ ಜನರ ರಕ್ಷಣೆಯ ಜ್ಞಾಪಾರ್ಥಕವಾಗಿ ಆಚರಿಸಲಾದ ಯೆಹೂದ್ಯರ ಪೂರೀಮ್ ಹಬ್ಬದ ಪ್ರಾರಂಭವನ್ನು ವಿವರಿಸುತ್ತದೆ.

ಎಸ್ತೇರ್ ಪುಸ್ತಕವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು:

1. ಎಸ್ತೇರಳು ಪರ್ಷಿಯಾದ ರಾಣಿಯಾದದ್ದು (ಅಧ್ಯಾಯ 1-2)
2. ಯೆಹೂದ್ಯರನ್ನು ಅಳಸಿಹಾಕಲು ಹಾಮಾನನು ಉಪಾಯ ಮಾಡಿದ್ದು (ಅಧ್ಯಾಯ 3-5)
3. ಮೊರ್ದೆಕೈ ಮತ್ತು ಯೆಹೂದ್ಯರು ಸಂರಕ್ಷಿಸಲ್ಪಟ್ಟದ್ದು, ಆದರೆ ಹಾಮಾನನು ತನ್ನ ಪ್ರಾಣವನ್ನು ಕಳಕೊಳ್ಳುತ್ತಾನೆ (ಅಧ್ಯಾಯ 6-10)

## ಹಳೇ ಒಡಂಬಡಿಕೆಯ 12 ಚಾರಿತ್ರಿಕ / ಐತಿಹಾಸಿಕ ಪುಸ್ತಕಗಳ ಪ್ರಶ್ನೆಗಳು

1. ಹಳೇ ಒಡಂಬಡಿಕೆಯ ಚಾರಿತ್ರಿಕ ಪುಸ್ತಕಗಳಾವುವು?
2. ಈ ಹನ್ನೆರಡು ಪುಸ್ತಕಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು:
    - ಚಾರಿತ್ರಿಕ ಪುಸ್ತಕಗಳ ಮೊದಲ ಸರಣಿ. ಅವು ಯಾವುವು?
    - ಚಾರಿತ್ರಿಕ ಪುಸ್ತಕಗಳ ಎರಡನೇ ಸರಣಿ. ಅವು ಯಾವುವು?
3. ಈ ಚಾರಿತ್ರಿಕ ಪುಸ್ತಕಗಳ ಈ ಎರಡು ಸರಣಿಗಳ ನಡುವಿನ ವ್ಯತ್ಯಾಸಗಳೇನು? ಉತ್ತರಿಸುವ ಮೊದಲು ಯೋಚಿಸಿ ಮತ್ತು ಚರ್ಚಿಸಿರಿ.
4. ಇಸ್ರಾಯೇಲ್ ಜನರ ಇತಿಹಾಸದಲ್ಲಿ ಕೆಳಕಂಡ ವ್ಯಕ್ತಿಗಳು ವಹಿಸಿದ ಪಾತ್ರವೇನು?

    ಅ) ಯೆಹೋಶುವನು

    ಆ) ಸಮುವೇಲ

    ಇ) ದಾವೀದ

    ಈ) ಸೊಲೊಮೋನ

    ಉ) ಎಜ್ರ

5. ರೂತಳ ಪುಸ್ತಕದಲ್ಲಿನ ಕಥೆ ಯಾವುದು? ಇಸ್ರಾಯೇಲ್ ಇತಿಹಾಸದ ಯಾವ ಅವಧಿಯಲ್ಲಿ ಇದು ನಡೆಯಿತು? ನಿಮ್ಮ ಗುಂಪಿನ ಇತರರೊಂದಿಗೆ ಈ ಕಥೆ ಹೇಳಿರಿ.

6. ಎಸ್ತೇರಳ ಪುಸ್ತಕದಲ್ಲಿನ ಕಥೆ ಯಾವುದು? ಇಸ್ರಾಯೇಲ್ ಇತಿಹಾಸದ ಯಾವ ಅವಧಿಯಲ್ಲಿ ಇದು ಸಂಭವಿಸಿತು? ನಿಮ್ಮ ಗುಂಪಿನ ಇತರರೊಂದಿಗೆ ಈ ಕಥೆ ಹೇಳಿರಿ.

7. ಇಸ್ರಾಯೇಲ್ ಇತಿಹಾಸ / ಚರಿತ್ರೆಯ ಕೆಲ ಪ್ರಾಮುಖ್ಯ ಕಾಲಗಳು ಇಂತಿವೆ. ಹಾಗಾದರೆ ಆಗ ಏನಾಯಿತು?

   ಅ) ಸುಮಾರು ಕ್ರಿ.ಪೂ. 1400

   ಆ) ಸುಮಾರು ಕ್ರಿ.ಪೂ. 1000

   ಇ) ಕ್ರಿ.ಪೂ. 722

   ಈ) ಕ್ರಿ.ಪೂ. 587

   ಉ) ಕ್ರಿ.ಪೂ. 538

   ಊ) ಕ್ರಿ.ಪೂ. 516

8. ಯಾವ ಚಾರಿತ್ರಿಕ ಪುಸ್ತಕದಲ್ಲಿ ಕೆಳಕಂಡ ವ್ಯಕ್ತಿಗಳ ಬಗ್ಗೆ ನಾವು ಓದಬಹುದು?

   ಅ) ದೆಬೋರ

   ಆ) ಬೋವಜ

   ಇ) ಎಲೀಯ

   ಈ) ಎಲೀಷ

   ಉ) ಅರಸನಾದ ದಾವೀದ

   ಊ) ಅರಸನಾದ ಸೊಲೊಮೋನ

   ಋ) ಎಜ್ರ

   ಎ) ಮೊರ್ದೆಕೈ

9. ಹಳೇ ಒಡಂಬಡಿಕೆಯ ಈ ವಿಭಾಗದಲ್ಲಿ 12 ಪುಸ್ತಕಗಳ ಬಗ್ಗೆ 10 ಪ್ರಶ್ನೆಗಳನ್ನು ಬರೆಯಿರಿ. ಅನಂತರ ಉತ್ತರಿಸಲು ನಿಮ್ಮ ಸ್ನೇಹಿತರೊಬ್ಬರನ್ನು ಕೇಳಿಕೊಳ್ಳಿರಿ. ಅಂತಿಮವಾಗಿ ಪ್ರತಿ ಸರಿಯಾದ ಉತ್ತರಕ್ಕೆ 10 ಅಂಕಗಳನ್ನು ಕೊಡಿರಿ. ಉತ್ತರವು ಭಾಗಶಃ ಸರಿಯಾಗಿದ್ದರೆ ಕಡಿಮೆ ಅಂಕ ಕೊಡಿರಿ. 50-69 ಅಂಕಗಳಿಗೆ ಉತ್ತೀರ್ಣತೆ ಕೊಡಿರಿ. 70-100 ಅಂಕಗಳಿಗೆ ಉನ್ನತ ಶ್ರೇಣಿ ಕೊಡಿರಿ.

# ಭಾಗ 3: ಪದ್ಯರೂಪಿ ಮತ್ತು ಜ್ಞಾನದ ಪುಸ್ತಕಗಳು

ಈ ವಿಭಾಗದಲ್ಲಿ ಪದ್ಯರೂಪಿ ಮತ್ತು ಜ್ಞಾನದ ಪುಸ್ತಕಗಳೆಂಬ ಐದು ಪುಸ್ತಕಗಳಿವೆ. ಅವು ವಿವಿಧ ಪಠ್ಯಗಳನ್ನೊಳಗೊಂಡಿವೆ: ತಾತ್ವಿಕ ಚರ್ಚೆಗಳು, ಜ್ಞಾನೋಕ್ತಿಗಳು, ನೀತಿ / ನಡತೆಯ ನಿಯಮಗಳು, ಪ್ರೇಮ ಕಾವ್ಯ, ಸಂಗೀತ / ಹಾಡುಗಳು, ಸ್ತುತಿ ಮತ್ತು ಪ್ರಾರ್ಥನೆಗಳು. ಕೆಲವೊಂದು ಪಠ್ಯಗಳು ದೈನಂದಿನ ಜೀವನ ಮತ್ತು ಒಳ್ಳೆಯ ನಡತೆಯ ಕುರಿತಾಗಿವೆ: ಸದ್ಗುಣಗಳನ್ನು ಹೊಗಳಲಾಗಿದೆ ಮತ್ತು ದುರ್ಗುಣಗಳನ್ನು ನಿಂದಿಸಲಾಗಿದೆ. ಹೆಚ್ಚಿನ ಸಲಹೆಯೆಲ್ಲಾ ಸಾಮಾನ್ಯ ಜ್ಞಾನ ಮತ್ತು ಅನುಭವದ ಮೇಲೆ (ಜ್ಞಾನೋಕ್ತಿ) ಆಧರಿತಗೊಂಡಿದೆ. ಉಳಿದ ಪಠ್ಯಗಳು ನೀತಿವಂತನ ಬಾಧೆಯಂತಹ (ಯೋಬ) ಆಳವಾದ ವಿಷಯಗಳೊಂದಿಗೆ ವ್ಯವಹರಿಸುವುದಾಗಿದೆ. ಇನ್ನುಳಿದವುಗಳು ಸಂರಕ್ಷಣೆಗಾಗಿನ ಪ್ರಾರ್ಥನೆಗಳು, ಸ್ತೋತ್ರ ಮತ್ತು ಕೃತಜ್ಞತಾ ಗೀತೆಗಳಾಗಿವೆ (ಕೀರ್ತನೆಗಳು).

ಇಬ್ರಿಯ ಪದ್ಯವು / ಕಾವ್ಯವು ಹೆಚ್ಚಾಗಿ ರೂಪಾಲಂಕಾರ ಮತ್ತು ಸಮಾನಾಂತರತೆಗಳನ್ನುಪಯೋಗಿಸುತ್ತದೆ:

1. **ರೂಪಾಲಂಕಾರಗಳು** ಮತ್ತು ಇತರೆ ಶಬ್ದಾಲಂಕಾರಗಳು. ಓದುಗರಾದ ನಾವು ಕೆಲವು ಹೇಳಿಕೆಗಳನ್ನು ಅಕ್ಷರಶಃವಾಗಿ ತೆಗೆದುಕೊಳ್ಳದೇ ಇರುವುದು ಪ್ರಾಮುಖ್ಯವಾದುದ್ದಾಗಿದೆ. ಇದಕ್ಕೆ ಮೂರು ಉದಾಹರಣೆಗಳು ಇಂತಿವೆ:

   ಕೀರ್ತನೆ 98:8

   "*ನದಿಗಳು ಚಪ್ಪಾಳೆ ಹೊಡೆಯಲಿ,*
   *ಪರ್ವತಗಳೆಲ್ಲಾ ಉತ್ಸಾಹಧ್ವನಿಮಾಡಲಿ*".

   ಜ್ಞಾನೋಕ್ತಿ 9:1-12

   "*ಜ್ಞಾನವೆಂಬಾಕೆಯು ತನ್ನ ಮನೆಯನ್ನು ಕಟ್ಟಿಕೊಂಡಿದ್ದಾಳೆ*
   *ಪಶುಗಳನ್ನು ಕೊಯಿಸಿ (ದಾನದ್ರವ್ಯಗಳೊಡನೆ) ದ್ರಾಕ್ಷಾರಸವನ್ನು ಬೆರಸಿ*
   *ಔತಣವನ್ನು ಸಿದ್ಧಪಡಿಸಿದ್ದಾಳೆ*".

   ಪ್ರಸಂಗಿ 11:1

   "*ನಿನ್ನ ಆಹಾರವನ್ನು ನೀರಿನ ಮೇಲೆ ಚೆಲ್ಲು,*
   *ಬಹು ದಿನದ ಮೇಲೆ ಅದು ನಿನಗೆ ಸಿಕ್ಕುವುದು*".

   **ಅಭ್ಯಾಸ**: ಈ ಮೂರು ರೂಪಾಲಂಕಾರಗಳ ಅರ್ಥವನ್ನು ವಿವರಿಸಿರಿ. ನಿಮ್ಮ ಗುಂಪಿನಲ್ಲಿನ ಇತರ ವ್ಯಕ್ತಿಗಳೊಂದಿಗೆ ನಿಮ್ಮ ಉತ್ತರಗಳನ್ನು ಚರ್ಚಿಸಿರಿ.

2. **ಸಮಾನಾಂತರತೆ**: ಹಳೇ ಒಡಂಬಡಿಕೆಯ ಹೆಚ್ಚಿನ ಪದ್ಯರೂಪಿ ಮತ್ತು ಜ್ಞಾನದ ಪಠ್ಯಗಳು ವಿವಿಧವಾದ ಸಮಾನಾಂತರತೆಯ ರೂಪಗಳಲ್ಲಿ ಜೋಡಿಸಲ್ಪಟ್ಟಿವೆ. ಹೆಚ್ಚು ಸಾಮಾನ್ಯವಾದ ರೂಪವನ್ನು ಸಮಾನಾರ್ಥಕ ಸಮಾನಾಂತರತೆ ಎಂದು ಕರೆಯಲಾಗಿದೆ. ಇದರರ್ಥವು ಒಂದು ವಿಚಾರವು ಅದೇ ವಚನದಲ್ಲಿ ಎರಡು ಬಾರಿ ಆದರೆ ಎರಡನೇ ಸಾಲಿನಲ್ಲಿ ಬೇರೆ ಪದಗಳೊಂದಿಗೆ ಕಂಡುಬರುವುದಾಗಿದೆ. ಇದು ಎರಡನೇ ಸಾಲು ಮೊದಲ ಸಾಲನ್ನು ಪ್ರತಿಧ್ವನಿಸುವಂತಿರುತ್ತದೆ. ಈ ಸಾಲುಗಳಿಗೆ ನಾವು ಎರಡು ಅರ್ಥಗಳನ್ನು ಕೊಟ್ಟು ಓದಲು ಪ್ರಯತ್ನಿಸಬಾರದು.

   ಕೀರ್ತನೆ 54:2 ರಿಂದ ಒಂದು ಉದಾಹರಣೆಯು ಇಂತಿದೆ:

*"ದೇವರೇ ನನ್ನ ಪ್ರಾರ್ಥನೆಯನ್ನು ಲಾಲಿಸು,*

*ನನ್ನ ಮಾತುಗಳಿಗೆ ಕಿವಿಗೊಡು".*

ಅಭ್ಯಾಸ 1: ಯಾವ ವಿಧದಲ್ಲಿ ಈ ಎರಡು ಸಾಲುಗಳು ಒಂದೇ ಅಂಶದ ಬಗ್ಗೆ ಹೇಳುತ್ತವೆಂಬುದನ್ನು ನಿಮ್ಮ ಗುಂಪಿನಲ್ಲಿ ಉಳಿದ ವ್ಯಕ್ತಿಗಳಿಗೆ ವಿವರಿಸಿರಿ.

ಅಭ್ಯಾಸ 2: 10 ಬೇರೆ ಬೇರೆ ಕೀರ್ತನೆಗಳಿಂದ ಸಮಾನಾಂತರತೆಯ ಕನಿಷ್ಠ ಹತ್ತು ಉದಾಹರಣೆಗಳನ್ನು ಕಂಡುಹಿಡಿಹಿರಿ.ಅವನ್ನು ಅಭ್ಯಾಸಿಸಿರಿ ಮತ್ತು ಒಂದೇ ವಿಚಾರವು ಎರಡು ವಿಭಿನ್ನ ರೀತಿಯನ್ನು ಹೇಗೆ ತಿಳಿಸಲ್ಪಟ್ಟಿದೆ ಎಂಬುದನ್ನು ವಿವರಿಸಿರಿ. ನೀವು ಕಂಡುಕೊಂಡದ್ದನ್ನು ಒಬ್ಬ ಸ್ನೇಹಿತರೊಂದಿಗೆ ಚರ್ಚಿಸಿರಿ.

## ಯೋಬನು

ಈ ಪುಸ್ತಕವು ಪದ್ಯರೂಪದಲ್ಲಿ ಜ್ಞಾನಸಾಹಿತ್ಯದ ಒಂದು ಉದಾಹರಣೆ (ಮಾದರಿ) ಯಾಗಿದೆ. ಪದ್ಯರೂಪಿ ಭಾಷೆಯನ್ನುಪಯೋಗಿಸುವುದರ ಮೂಲಕ ಇದು ಒಬ್ಬ ನೀತಿವಂತನ ಬಾಧೆಪಡುವ ಸಮಸ್ಯೆಯೊಂದಿಗೆ ಇದು ವ್ಯವಹರಿಸುತ್ತದೆ. ಈ ಕಥೆಯು ಪೂರ್ವಜರ/ಪಿತೃಗಳ ಕಾಲದಲ್ಲಿ ಸಂಭವಿಸಿರುವುದಾಗಿದೆ, ಆದರೆ ಬಹುಶಃ ಪುಸ್ತಕವನ್ನು ನಂತರದಲ್ಲಿ ಬರೆದಿರಬಹುದು. ಯೋಬನು ಒಬ್ಬ ಒಳ್ಳೆಯ ವ್ಯಕ್ತಿಯಾಗಿದ್ದು ಪೂರ್ಣವಾಗಿ ದುರಂತಕ್ಕೊಳಗಾಗುತ್ತಾನೆ.

ಈ ಪುಸ್ತಕವು ಪೀಠಿಕೆಯೊಂದಿಗೆ ಪ್ರಾರಂಭವಾಗುತ್ತೆ (ಅಧ್ಯಾಯ 1-2), ಇಲ್ಲಿ ದೇವರು ಮತ್ತು ಸೈತಾನನ ನಡುವಿನ ಸಂಭಾಷಣೆಯ ಪರಿಣಾಮವಾಗಿ ಸೈತಾನನ ಮೂಲಕ ಯೋಬನು ಎಲ್ಲಾ ರೀತಿಯ ಬಾಧೆಗಳಿಗೆ ಒಳಗಾಗುತ್ತಾನೆ. ಆತನು ತನ್ನ ಎಲ್ಲಾ ಮಕ್ಕಳು ಮತ್ತು ಆಸ್ತಿಯನ್ನೆಲ್ಲಾ ಕಳಕೊಳ್ಳುತ್ತಾನೆ. ಅಲ್ಲದೆ ತಾನು ಸಹ ಭಯಂಕರವಾದ ಬಾಧೆಗೆ ಗುರಿಯಾಗುತ್ತಾನೆ. ಯೋಬನ ಪರೀಕ್ಷಿಸುವ ಉದ್ದೇಶವು ನಿಜವಾಗಲೂ ಆತನ ಜೀವಿತವು ದೇವರ ಚಿತ್ತದ ಮೇಲೆ ಸ್ಥಾಪಿಸಲ್ಪಟ್ಟಿದೆಯಾ ಅಥವಾ ಬರೀ ಭಕ್ತಿಯ ವೇಷವನ್ನಷ್ಟೇ ಆತನು ಹಾಕಿಕೊಂಡಿರುವನೋ ಎಂಬುದನ್ನು ಕಂಡುಕೊಳ್ಳುವುದಾಗಿದೆ.

ನಂತರ ಯೋಬನನ್ನು ಸಂತೈಸಲು ಯಾಕೆ ಆತನು ಬಾಧೆ ಪಡುತ್ತಾನೆ ಎಂಬುದಕ್ಕೆ ತಮ್ಮ ವಿವರಣೆಯನ್ನು ನೀಡಲು ಬಂದ ತನ್ನ ಸ್ನೇಹಿತರು ಮತ್ತು ಯೋಬನ ನಡುವೆ ಸಂಭಾಷಣೆ ಕಂಡುಬರುತ್ತದೆ (ಅಧ್ಯಾಯ 3-37). ಯೋಬನು ಪಾಪ ಮಾಡಿರಬೇಕು, ಆ ಬಾಧೆಯು ಪಾಪಕ್ಕಾಗಿ ಆತನಿಗೆ ಬಂದ ಶಿಕ್ಷೆ ಎಂಬುದಾಗಿ ಅವರು ಹೇಳುತ್ತಾರೆ. ಆದರೆ ಒಬ್ಬ ಒಳ್ಳೆಯ ವ್ಯಕ್ತಿಗೆ ಈ ರೀತಿ ಬಾಧೆ ಪಡಲು ದೇವರು ಹೇಗೆ ಅನುಮತಿಸಿದನೆಂಬುದನ್ನು ಆತನು ಅರ್ಥೈಸಿಕೊಳ್ಳಲಾಗಲಿಲ್ಲ.

ಕೊನೆಯ ಅಧ್ಯಾಯಗಳಲ್ಲಿ (38-42) ದೇವರು ಯೋಬನೊಂದಿಗೆ ಮಾತನಾಡಿ, ಆತನಿಗೆ ತನ್ನನ್ನೆ ಪ್ರಕಟಿಸಿಕೊಳ್ಳುತ್ತಾನೆ. ಈವರೆಗೂ ದೇವರನ್ನು ಪ್ರಶ್ನಿಸುತ್ತಾ ಬಂದ ಯೋಬನಿಗೆ ಹೇಳಲು ಈಗ ಏನೂ ಇರುವುದಿಲ್ಲ. ದೇವರ ಅತ್ಯುನ್ನತವಾದ ಸೃಷ್ಟಿಯ ಎದರು ಯೋಬನು ಮೌನವಾಗುತ್ತಾನೆ. ಆತನು ತನ್ನನ್ನು ತಗ್ಗಿಸಿಕೊಂಡು, ದೇವರಿಗೆ ಅಧೀನನಾಗಿ ದೇವರಲ್ಲಿ ಸಾಂತ್ವಾನ ಮತ್ತು ವಿಶ್ರಾಂತಿಯನ್ನು ಕಂಡುಕೊಳ್ಳುತ್ತಾನೆ. ಪುಸ್ತಕದ ಕೊನೆಯಲ್ಲಿ ಯೋಬನ ಸ್ನೇಹಿತರು ಪ್ರಸ್ತಾಪಿಸಿದ ವಿವರಣೆಯನ್ನು ದೇವರು ಖಂಡಿಸುತ್ತಾನೆ (42:7-17). ಹಿನ್ನುಡಿಯಲ್ಲಿ ದೇವರು ಯೋಬನಿಗೆ ಎಲ್ಲವನ್ನೂ ಮರಳಿಕೊಡುತ್ತಾನೆ.

## ಕೀರ್ತನೆಗಳು

ಇದು ಸತ್ಯವೇದದ ಸ್ತುತಿ (ಹಾಡಿನ) ಪುಸ್ತಕವಾಗಿದೆ. ಇದನ್ನು "ಐದು ಪುಸ್ತಕಗಳಾಗಿ" ವಿಂಗಡಿಸಲಾಗಿದೆ (1-41, 42-72, 73-89, 90-106, 107-150). ಇದರ ಕಾರಣವು ಯೆಹೂದಿ ಸಭಾಮಂದಿರದ ಸೇವೆಯಲ್ಲಿ ಇದನ್ನು ಸ್ತೋತ್ರಗ್ರಂಥವಾಗಿ ಉಪಯೋಗಿಸಲಾಗುತ್ತಿತ್ತು, ಮತ್ತು ಐದು ಪುಸ್ತಕಗಳು "ಮೋಶೆಯ ಐದು ಪುಸ್ತಕಗಳಾದ" ಪಂಚಕಾಂಡವನ್ನು ಪ್ರತಿಬಿಂಬಿಸುತ್ತವೆ.

ಕೀರ್ತನೆಗಳ ಪುಸ್ತಕವು ಸ್ತೋತ್ರ, ಪ್ರಾರ್ಥನೆ ಮತ್ತು ಹಾಡುಗಳ ಒಂದು ಸಂಗ್ರಹವಾಗಿದೆ. ದೀರ್ಘವಾದ ಕಾಲಾವಧಿಯಲ್ಲಿ ವಿವಿಧ ಗ್ರಂಥಕರ್ತರಿಂದ ಅವು ಬರೆಯಲ್ಪಟ್ಟಿವೆ. ಅರಸನಾದ ದಾವೀದನ ಕಾಲಾವಧಿಯಲ್ಲೇ ಕೀರ್ತನೆಗಳ ಒಂದು ಸಂಗ್ರಹವಿದ್ದಿರಬೇಕು. ತದನಂತರದಲ್ಲಿ (ಬಾಬಿಲೋನಿನ ಸೆರೆಯಿಂದ ಹಿಂದಿರುಗುವವರೆಗೆ) ಇನ್ನೂ ಅನೇಕ ಕೀರ್ತನೆಗಳನ್ನು ಈ ಸಂಗ್ರಹಕ್ಕೆ ಸೇರಿಸಲಾಯಿತು. ಯೆಹೂದಿ ಸಂಪ್ರದಾಯದ ಪ್ರಕಾರ ಎಜ್ರನು ಪುಸ್ತಕದ ಕೊನೆಯ ಆವೃತ್ತಿಯನ್ನು ರೂಪಿಸಿದವನಾಗಿರುತ್ತಾನೆ. ಯೆಹೂದಿ ಸಭಾಮಂದಿರದ ಸೇವೆಗಳಲ್ಲಿ ಕೀರ್ತನೆಗಳನ್ನು ಓದಿ, ಹಾಡಿ, ಪಠಿಸಲಾಗುತ್ತಿತ್ತು.

ಈ ಪುಸ್ತಕದಲ್ಲಿ ವಿವಿಧ ಬಗೆಯ ಕೀರ್ತನೆಗಳಿವೆ. ದೇವರ ಸಹಾಯ ಮತ್ತು ರಕ್ಷಣೆಯನ್ನು ಬೇಡಿಕೊಳ್ಳುವ ಪ್ರಾರ್ಥನೆಗಳಿವೆ. ದೇವರನ್ನು ಆರಾಧಿಸುವ ಮತ್ತು ಸ್ತುತಿಸುವ ಹಾಡುಗಳಿವೆ. ಕ್ಷಮಾಪಣೆಗಾಗಿ ದೇವರಿಗೆ ಮೊರೆಯಿಡುವ ಕೂಗುಗಳಿವೆ. ದೇವರ ಒಳ್ಳೆತನಕ್ಕಾಗಿ ಆತನಿಗೆ ಮಾಡುವ ಕೃತಜ್ಞತಾಸ್ತುತಿಗಳಿವೆ. ವೈರಿಗಳನ್ನು ಶಿಕ್ಷಿಸಬೇಕೆಂದು ದೇವರಿಗೆ ಮಾಡುವ ಮನವಿಗಳಿವೆ. ವೈಯಕ್ತಿಕ ಭಾವನೆಗಳು ವ್ಯಕ್ತವಾಗುವ ಹೇಳಿಕೆಗಳಿವೆ. ಇಸ್ರಾಯೇಲ್ ರಾಷ್ಟ್ರಕ್ಕಾಗಿನ ಪ್ರಾರ್ಥನೆಗಳಿವೆ. ಒಂದು ಸಾಮಾನ್ಯವಾದ ವಿಷಯವಸ್ತುವು ತನ್ನ ಸೃಷ್ಟಿಯಲ್ಲಿ ವ್ಯಕ್ತವಾದ ದೇವರ ಹಿರಿಮೆ ಮತ್ತು ಇಸ್ರಾಯೇಲ್ ಜನರಿಗಾಗಿನ ಆತನ ಪ್ರೀತಿಯ ಕಾಳಜಿಯಾಗಿದೆ.

ಕೀರ್ತನೆಗಳು ಎಲ್ಲಾ ರೀತಿಯ ಮಾನುಷಿಕ ಭಾವನೆ ಮತ್ತು ಅನುಭವಗಳನ್ನು ವ್ಯಕ್ತಪಡಿಸುತ್ತವೆ. ಆ ಒಂದು ಕಾರಣದಿಂದ ಇತಿಹಾಸದುದ್ದಕ್ಕೂ ಅವು ಅನೇಕ ಜನರಿಂದ ಓದಲ್ಪಟ್ಟಿವೆ ಮತ್ತು ಪ್ರೀತಿಸಲ್ಪಟ್ಟಿವೆ. ಇನ್ನೊಂದು ಕಾರಣವು ಅವು ದೇವರಲ್ಲಿ ಆಳವಾದ ನಂಬಿಕೆ ಮತ್ತು ಬಲವಾದ ವಿಶ್ವಾಸವನ್ನು ವ್ಯಕ್ತಪಡಿಸುವುದಾಗಿದೆ.

ಕೀರ್ತನೆ ಮತ್ತು ಯೆಶಾಯ ಹೊಸ ಒಡಂಬಡಿಕೆಯಲ್ಲಿ ಹೆಚ್ಚಾಗಿ ಪ್ರಸ್ತಾಪಿಸಲಾದ ಹಳೇ ಒಡಂಬಡಿಕೆಯ ಪುಸ್ತಕಗಳಾಗಿವೆ. ಇದಕ್ಕೆ ಕಾರಣ ಇವು ಮೆಸ್ಸೀಯನ ಕುರಿತು ಅನೇಕ ಪ್ರವಾದನೆಗಳನ್ನು ಒಳಗೊಂಡಿರುವುದಾಗಿದೆ.

## ಜ್ಞಾನೋಕ್ತಿಗಳು

ಈ ಪುಸ್ತಕವು ಒಬ್ಬ ಯೌವನಸ್ಥನು ಒಂದು ಒಳ್ಳೆಯ ಮತ್ತು ಭಕ್ತಿಯುತ ಜೀವಿತವನ್ನು ನಡೆಸಲು ಆತನಿಗೆ ಸಹಾಯಿಸುವ ಉದ್ದೇಶ ಹೊಂದಿರುವ ಜ್ಞಾನೋಕ್ತಿಗಳನ್ನು ಒಳಗೊಂಡಿವೆ. ಇದು ಸ್ತುತಿಯ ವಿಭಾಗದಿಂದ ಪ್ರಾರಂಭವಾಗಿ ಜ್ಞಾನದ ಆಶೀರ್ವಾದಗಳವರೆಗೆ ಸಾಗುತ್ತದೆ (ಅಧ್ಯಾಯ 1-9).

ಆನಂತರ ಜ್ಞಾನೋಕ್ತಿಗಳ 6 ಸಂಗ್ರಹಗಳು ಕಂಡುಬರುತ್ತವೆ:

1. ಸೊಲೊಮೋನನ ಜ್ಞಾನೋಕ್ತಿಗಳು (10:1-22:16)

2. ಜ್ಞಾನಿಗಳ ಮೂವತ್ತು ನುಡಿಗಳು (12:17-24:22)
3. ಜ್ಞಾನಿಗಳ ಹೆಚ್ಚುವರಿ ನುಡಿಗಳು (24:23-24)
4. ಹಿಜ್ಕೀಯನು ಸಂಗ್ರಹಿಸಿದ ಸೊಲೊಮೋನನ ಜ್ಞಾನೋಕ್ತಿಗಳು (ಅಧ್ಯಾಯ 25-29)
5. ಆಗೂರನ ಮಾತುಗಳು (ಅಧ್ಯಾಯ 30)
6. ಅರಸನಾದ ಲೆಮೂವೇಲನ ನುಡಿಗಳು (31:1-9)

ಗುಣವತಿಯಾದ ಸತಿಯ ವರ್ಣನೆಯೊಂದಿಗೆ ಪುಸ್ತಕವು ಮುಕ್ತಾಯವಾಗುತ್ತದೆ. ಜ್ಞಾನೋಕ್ತಿಯು ಯಾವುದು ಸರಿ, ಯಾವುದು ತಪ್ಪೆಂಬುದನ್ನು ವಿವರಿಸುತ್ತದೆ. ಅವು ಯೆಹೋವನ ಭಯವೇ ಜ್ಞಾನದ ಮೂಲವೆಂಬ ಒಳನೋಟದ ಮೇಲೆ ಆಧರಿತಗೊಂಡಿವೆ. ಹಾಗೆಯೇ ಜೀವನದ ಎಲ್ಲ ಕ್ಷೇತ್ರಗಳಿವೆ: ವಿವಾಹ, ಮನೆ, ನ್ಯಾಯ, ನಿರ್ಧಾರ, ಮನುಷ್ಯರು ಮಾಡುವ, ಹೇಳುವ ಮತ್ತು ಯೋಚಿಸುವ ಎಲ್ಲ ಸಂಗತಿಗಳಿಗೆ ಅನ್ವಯವಾಗುತ್ತದೆ. ಈ ಜ್ಞಾನವನ್ನು ಜೀವಿಸಿದ ಅನುಭವದ ಮೂಲಕ ಮಾತ್ರ ಸಂಪಾದಿಸಬಹುದು.

ಜ್ಞಾನೋಕ್ತಿಗಳು ಜನರು ಮತ್ತು ವಿಭಿನ್ನ ಸನ್ನಿವೇಶಗಳಲ್ಲಿನ ಅವರ ನಡವಳಿಕೆಯ ಮೇಲಣ ಇಸ್ರಾಯೇಲ್ ಬೋಧಕರ ನಿರೀಕ್ಷಿಗಳನ್ನು ಪ್ರತಿಬಿಂಬಿಸುತ್ತವೆ. ಅವು ದೀನತೆ, ತಾಳ್ಮೆ, ಬಡವರಿಗಾಗಿನ ಕಾಳಜಿ, ಶ್ರಮಶೀಲತೆ, ಸ್ನೇಹಿತರಿಗೆ ನಿಷ್ಠೆ ಮತ್ತು ಕಟುಂಬ ಸದಸ್ಯರಿಗಾಗಿನ ಗೌರವದಂತಹ ವ್ಯಕ್ತಿಗತ ಗುಣಗಳನ್ನು ಒತ್ತಿ ಹೇಳುತ್ತವೆ. ಜೀವನದ ದೊಡ್ಡ ಪ್ರಶ್ನೆಗಳಿಗೆ ಅವು ಯಾವುದೇ ನಿರ್ಣಾಯಕ ಉತ್ತರಗಳನ್ನು ಕೊಡುವುದಿಲ್ಲ, ಆದರೆ ಅವು ನಮ್ಮ ದೈನಂದಿನ ಜೀವನದಲ್ಲಿ ನಮಗೆ ಎದುರಾಗುವ ಸಮಸ್ಯೆಗಳನ್ನು ನಾವು ಹೇಗೆ ಎದುರಿಸಬೇಕೆಂಬುದಕ್ಕೆ ವಾಸ್ತವಿಕ ಮತ್ತು ಪ್ರಾಯೋಗಿಕ ಉತ್ತರವನ್ನು ಒದಗಿಸಬಲ್ಲವು.

# ಪ್ರಸಂಗಿ

ಈ ಪುಸ್ತಕವು ಸಂಗೀತದ ಒಂದು ಭಾಗವೆಂಬಂತೆ ಸಂಯೋಜಿಸಲ್ಪಟ್ಟಿದ್ದು ಇದರಲ್ಲಿ ಒಂದೇ ವಿಷಯವಸ್ತುವು ಪುನಃ ಪುನಃ ಕಂಡುಬರುತ್ತದೆ. ಈ ವಿಷಯವಸ್ತು "ವ್ಯರ್ಥವೇ ವ್ಯರ್ಥ, ಸಮಸ್ತವೂ ವ್ಯರ್ಥ" ಎಂಬುದಾಗಿದೆ, ಮತ್ತು "ವ್ಯರ್ಥ" ಎಂಬ ಪದವು 12 ಅಧ್ಯಾಯಗಳಲ್ಲಿ ಸುಮಾರು 40 ಬಾರಿ ಕಂಡುಬರುತ್ತದೆ. ಈ ಮಾತು ಮನುಷ್ಯನು ತನ್ನ ಜೀವನದಲ್ಲಿ ಮಾಡುವುದೆಲ್ಲವೂ "ಗಾಳಿಯನ್ನು ಹಿಂದಟ್ಟುವ ಹಾಗೆ" ಎಂಬ ವಾಸ್ತವಾಂಶವನ್ನು ಸೂಚಿಸುತ್ತದೆ (ಈ ಮಾತು 9 ಬಾರಿ ಕಂಡುಬರುತ್ತದೆ). ಸನ್ನಿವೇಶವು ಹಿರಿಯ ಪ್ರಸಂಗಿ (ಬೋಧಕನು) ("ಪ್ರಸಂಗಿ ಅಂದರೆ ಬೋಧಕ/ಶಿಕ್ಷಕ) ಒಬ್ಬ ಕಿರಿಯ ವಿದ್ಯಾರ್ಥಿಗೆ ಜೀವನದ ಬಗ್ಗೆ ಮಾರ್ಗದರ್ಶಿಸುವುದಾಗಿದೆ. ಸ್ವತಃ ಬೋಧಕನೇ ಜೀವನದ ಅರ್ಥವನ್ನು ಹುಡುಕಿದ್ದಾನೆ ಮತ್ತು ಆತನಿಗೆ ಖಾಲಿ, ವ್ಯರ್ಥ ಅಥವಾ ನಿಷ್ಪ್ರಯೋಜನದ ಅನುಭವವಾಗಿದೆ. ಜ್ಞಾನದ ಮೂಲಕ ಜೀವನದ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾನೆ (ಅಧ್ಯಾಯ 1). ಅಲ್ಲದೆ ಸಂತೋಷ, ಸಂಪತ್ತು ಮತ್ತು ಶ್ರಮದ ಮೂಲಕ ಸಹ ಜೀವನದ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾನೆ (ಅಧ್ಯಾಯ 2). ಆದರೆ ಇವೆಲ್ಲವೂ ಆತನನ್ನು ಬರೀ ಗೊಂದಲ ಮತ್ತು ನಿರಾಶದಾಯಕನನ್ನಾಗಿ ಮಾಡಿದೆ.

ಈ ಎಲ್ಲಾ ಸಕಾರಾತ್ಮಕತೆಯ ಹೊರತಾಗಿಯೂ ಪ್ರಸಂಗಿಯು ಕೇವಲ ದೇವರೊಂದಿಗಿನ ಒಂದು ಜೀವಿತಕ್ಕೆ ಮಾತ್ರ ಅರ್ಥ ಮತ್ತು ಉದ್ದೇಶವಿದೆ ಎಂಬ ಒಂದು ನಿರ್ಣಾಯಕ್ಕೆ ಬಂದಿದ್ದಾನೆ. ಹೀಗೆ ಪ್ರಸಂಗಿಯು ಯೌವನಸ್ಥನಿಗೆ ಕೊಡುವ ಸಲಹೆಯು "ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಗೊಳ್ಳು" (12:13) ಎಂಬುದಾಗಿದೆ.

## ಪರಮಗೀತ

ಈ ಪುಸ್ತಕವು ಪ್ರೀತಿಯ ಕುರಿತಾಗಿನ ಕವನಗಳ ಒಂದು ಸಂಗ್ರಹವಾಗಿದೆ. ಇದರಲ್ಲಿನ ದೃಶ್ಯವು ಇಸ್ರಾಯೇಲಿನಲ್ಲಿನ ವಸಂತಕಾಲವಾಗಿದೆ. ಕವನಗಳು ಕಾಮ ಮತ್ತು ಮನುಷ್ಯನ ಪ್ರೇಮದ ಆನಂದದಿಂದ ತುಂಬಿಕೊಂಡಿವೆ. ಮುಕ್ಯವಾಗಿ ಅವು ಒಂದು ಗಂಡು ಮತ್ತು ಹೆಣ್ಣಿನ ನಡುವಿನ ಶಾರೀರಿಕ ಆಕರ್ಷಣೆಯ ಆನಂದವನ್ನು ವ್ಯಕ್ತಪಡಿಸುತ್ತವೆ. ಈ ರೀತಿಯಾಗಿ ಜ್ಞಾನವು ಒಂದು ಕಾಮುಕ ಪ್ರಣಯವನ್ನು ವರ್ಣಿಸುತ್ತದೆ. ಸತ್ಯವೇದವು ಜ್ಞಾನ ಮತ್ತು ಪ್ರೀತಿಯು ದೇವರ ವರವಾಗಿದ್ದು ಆ ವರವನ್ನು ಕೃತಜ್ಞತೆ ಮತ್ತು ಸಂಭ್ರಮದಿಂದ ಸ್ವೀಕರಿಸಬೇಕೆಂಬುದಾಗಿ ಸತ್ಯವೇದವು ಹೇಳುತ್ತದೆ.

ಇತಿಹಾಸದುದ್ದಕ್ಕೂ ಯೆಹೂದ್ಯರು ಮತ್ತು ಕ್ರೈಸ್ತರಿಬ್ಬರೂ ಈ ಪುಸ್ತಕವನ್ನು ಇಸ್ರಾಯೇಲ್ಯರಿಗಾಗಿನ ದೇವರ ಪ್ರೀತಿ ಅಥವಾ ಸಭೆಗಾಗಿನ ಕ್ರಿಸ್ತನ ಪ್ರೀತಿಯ ಒಂದು ಸಾಂಕೇತಿಕ ವರ್ಣನೆಯನ್ನಾಗಿ ವ್ಯಾಖ್ಯಾನಿಸಿದ್ದಾರೆ. ಆದರೆ ಈ ಪುಸ್ತಕದ ಪಠ್ಯದಲ್ಲೇಲ್ಲೂ ಅಥವಾ ಸತ್ಯವೇದದಲ್ಲಿ ಬೇರೆಲ್ಲಿ ಸಹ ಇಂತಹ ವ್ಯಾಖ್ಯಾನಕ್ಕೆ ಬೆಂಬಲ ಕೊಡುವುದಿಲ್ಲ.

## ಹಳೇ ಒಡಂಬಡಿಕೆಯ 5 ಪದ್ಯರೂಪಿ ಪುಸ್ತಕಗಳಿಗೆ ಪ್ರಶ್ನೆಗಳು

1. ಯಾಕೆ ಹಳೇ ಒಡಂಬಡಿಕೆಯ 5 ಪುಸ್ತಕಗಳನ್ನು "ಪದ್ಯರೂಪಿ ಪುಸ್ತಕಗಳೆಂದು" ಕರೆಯಲಾಗುತ್ತಿದೆ? ನಿಮ್ಮ ಗುಂಪಿನ ವ್ಯಕ್ತಿಯೊಂದಿಗೆ ಯೋಚಿಸಿ ಚರ್ಚಿಸಿರಿ.
2. ಯಾಕೆ ಹಳೇ ಒಡಂಬಡಿಕೆಯ ಈ 5 ಪುಸ್ತಕಗಳನ್ನು "ಜ್ಞಾನದ ಪುಸ್ತಕಗಳೆಂದು" ಕರೆಯಲಾಗುತ್ತಿದೆ? ನಿಮ್ಮ ಗುಂಪಿನಲ್ಲಿನ ವ್ಯಕ್ತಿಯೊಂದಿಗೆ ಯೋಚಿಸಿ ಚರ್ಚಿಸಿರಿ.
3. ಈ ಐದು ಪುಸ್ತಕಗಳಲ್ಲಿ ಮೂರನ್ನು ವಿಶ್ವಾಸಿಗಳು ಹೆಚ್ಚಾಗಿ ಓದುತ್ತಿಲ್ಲ.
   - ಆ ಪುಸ್ತಕಗಳು ಯಾವುವು?
   - ಯಾಕೆ ಅವು ಉಳಿದ ಎರಡರಷ್ಟು ಜನಪ್ರಿಯವಾಗಿಲ್ಲವೆಂಬುದನ್ನು ವಿವರಿಸಿರಿ. ಗುಂಪಿನಲ್ಲಿ ಇತರ ವ್ಯಕ್ತಿಯೊಂದಿಗೆ ಇದನ್ನು ಚರ್ಚಿಸಿರಿ.
4. "ಪರಮಗೀತ" ವನ್ನು ಅರ್ಥೈಸಿಕೊಳ್ಳುವ ಎರಡು ಮುಖ್ಯ ಬಗೆಗಳು ಯಾವುವು? ನಿಮ್ಮ ಗುಂಪಿನಲ್ಲಿ ಯೋಚಿಸಿ ಚರ್ಚಿಸಿರಿ.
5. ಈ ಎರಡು ಪ್ರಶ್ನೆಗಳಿಗೆ ಉತ್ತರಿಸಲು ನಿರ್ಧರಿಸುವುದಕ್ಕಿಂತ ಮೊದಲು ನಿಮ್ಮ ಗುಂಪಿನಲ್ಲಿನ ಇತರ ವ್ಯಕ್ತಿಯೊಂದಿಗೆ ಯೋಚಿಸಿ ಚರ್ಚಿಸಿರಿ:
   - ಜ್ಞಾನೋಕ್ತಿ ಪುಸ್ತಕದ ಉದ್ದೇಶದಲ್ಲಿನ ಮಿತಿಯೇನು?
   - ವಿಶ್ವಾಸಿಗಳಾಗಿ ನಮ್ಮ ಜೀವಿತವನ್ನು ಮುಖ್ಯವಾಗಿ ಜ್ಞಾನೋಕ್ತಿ ಪುಸ್ತಕದ ಜ್ಞಾನೋಕ್ತಿಗಳ ಮೇಲೆಯೇ ಆದರಿತಗೊಳ್ಳುವುದು ಯಾಕೆ ಅವಿವೇಕವೆನಿಸಬಹುದು?
6. ಕೀರ್ತನೆಗಳ ಪುಸ್ತಕದಲ್ಲಿ ಯಾವ ವಿಭಿನ್ನ ಬಗೆಯ ಕೀರ್ತನೆಗಳನ್ನು ನಾವು ಕಾಣುತ್ತೇವೆ? ನಿಮ್ಮ ಗುಂಪಿನವರೊಂದಿಗೆ ಯೋಚಿಸಿ ಚರ್ಚಿಸಿರಿ.
7. ಹಳೇ ಒಡಂಬಡಿಕೆಯ ಈ ವಿಭಾಗದಲ್ಲಿನ 5 ಪುಸ್ತಕಗಳ ಬಗ್ಗೆ ಐದು ಪ್ರಶ್ನೆಗಳನ್ನು ಬರೆಯಿರಿ. ಅನಂತರ ನಿಮ್ಮ ಸ್ನೇಹಿತರೊಬ್ಬರಿಗೆ ಉತ್ತರ ಬರೆಯಲು ಹೇಳಿರಿ. ಅಂತಿಮವಾಗಿ ಅವನ/ಅವಳ ಉತ್ತರಕ್ಕೆ ಅಂಕ ಕೊಡಿರಿ. ಪ್ರತಿ ಸರಿಯಾದ

ಉತ್ತರಕ್ಕೆ 10 ಅಂಕಗಳು. ಉತ್ತರವು ಭಾಗಶಃ ಸರಿಯಾಗಿದ್ದರೆ ಕಡಿಮೆ ಅಂಕ ಕೊಡಿರಿ. 25-34 ಅಂಕಗಳಿಗೆ ಉತ್ತೀರ್ಣನೆಂದು ಕೊಡಿರಿ. 35-50 ಅಂಕಗಳಿಗೆ ಉನ್ನತ ಶ್ರೇಣಿ ಕೊಡಿರಿ.

# ಭಾಗ 4: ಪ್ರವಾದಿಗಳ ಪುಸ್ತಕಗಳು

ಇವು ಯೆಶಾಯದಿಂದ ಮಲಾಕಿಯವರೆಗಿನ ಹಳೇ ಒಡಂಬಡಿಕೆಯ ಕೊನೆಯ 17 ಪುಸ್ತಕಗಳಾಗಿವೆ. ಅವುಗಳಿಗೆ 16 ಯೆಹೂದಿ ಪ್ರವಾದಿಗಳ ಹೆಸರನ್ನು ಕೊಡಲಾಗಿದೆ. ಪ್ರಲಾಪ ಪುಸ್ತಕವು ವಿಭಿನ್ನವಾದ ಪುಸ್ತಕವಾದರೂ ಈ ಗುಂಪಿನಲ್ಲಿಡಲಾಗಿದೆ. ಇದರಲ್ಲಿ ನಾಲ್ಕು ದೊಡ್ಡ ಪ್ರವಾದಿಗಳಿವೆ. ಈ ಪುಸ್ತಕಗಳು ದೊಡ್ಡದ್ದಾಗಿರುವುದರಿಂದ ಇವನ್ನು ಹೀಗೆ ಕರೆಯಲಾಗಿದೆ. ಕಡೆಯ 12 ಪ್ರವಾದಿಗಳನ್ನು "ಸಣ್ಣ" ಪ್ರವಾದಿಗಳೆಂಬುದಾಗಿ ಕರೆಯಲಾಗಿದೆ, ಯಾಕೆಂದರೆ ಇವು ಸಣ್ಣ ಪುಸ್ತಕಗಳಾಗಿವೆ.

ಇಸ್ರಾಯೇಲಿನ ಎರಡು ರಾಜ್ಯಗಳ ಸುವರ್ಣಯುಗದಿಂದ ಸೆರೆಯಿಂದ ಜನರು ಹಿಂದಿರುಗಿರುವ ಸುಮಾರು 300 ವರುಷಗಳ ಅವಧಿಯಲ್ಲಿ ಪ್ರವಾದನಾ ಪುಸ್ತಕಗಳನ್ನು ಬರೆದಿರಬಹುದು. ಅವುಗಳಲ್ಲಿ ಆಮೋಸ ಮತ್ತು ಹೋಶೇಯ ಮೊದಲಿನವುಗಳಾಗಿವೆ. ಅವರು ಕ್ರಿ.ಪೂ. ಎಂಟನೇ ಶತಮಾನದಲ್ಲಿ ಇಸ್ರಾಯೇಲಿನ ಉತ್ತರ ರಾಜ್ಯದಲ್ಲಿ ಸೇವೆ ಸಲ್ಲಿಸಿದರು. ಹೆಚ್ಚಿನ ಪ್ರವಾದಿಗಳು ಯೆಹೂದದ ದಕ್ಷಿಣ ಭಾಗದಲ್ಲಿ ಯೆಶಾಯ ಮತ್ತು ಮೀಕ ಸುಮಾರು ಕ್ರಿ.ಪೂ. 700 ರಲ್ಲಿ ಅಂದರೆ ಕ್ರಿ.ಪೂ. 587 ರಲ್ಲಿ ಯೆರೂಸಲೇಮಿನ ನಾಶನಕ್ಕಿಂತ ಮುಂಚೆ ನೂರು ವರ್ಷಗಳಿಗಿಂತ ಹೆಚ್ಚಿನ ಅವಧಿಯಲ್ಲಿ ತಮ್ಮ ಪ್ರವಾದನೆಗಳನ್ನು ನುಡಿದರು. ಜೆಕರ್ಯ ಮತ್ತು ಮಲಾಕಿ ಕ್ರಿ.ಪೂ. 538 ರಲ್ಲಿನ ಹಿಂತಿರುಗುವಿಕೆ ಮತ್ತು ನಂತರದ ಅವಧಿಯಲ್ಲಿ ಪ್ರವಾದಿಸಿದರು. ಕೆಲ ಪ್ರವಾದಿಗಳು ಬೇರೆ ಜನರಿಗೆ ಸಂದೇಶಗಳನ್ನು ಹೊಂದಿದ್ದರು. ಯೋನನು ಕ್ರಿ.ಪೂ. 612 ರಲ್ಲಿ ನಾಶವಾದ ಅಶ್ಶೂರ್ಯದ ರಾಜಧಾನಿಯಾದ ನಿನವೆಗೆ ಸಾರುವ ಒಂದು ವಿಶೇಷವಾದ ಕಾರ್ಯಭಾರವನ್ನು ದೇವರಿಂದ ಹೊಂದಿದ್ದನು. ದಾನಿಯೇಲನು ಬಾಬಿಲೋನಿನಲ್ಲಿ ಸೇವೆ ಸಲ್ಲಿಸಿದರೆ, ಯೆಹೆಜ್ಕೇಲನು ಆ ದೇಶದಲ್ಲಿನ ಯೆಹೂದಿ ಬಂಧಿತರಿಗೆ ಪ್ರವಾದಿಸಿದನು. ಓಬದ್ಯನು ಇಸ್ರಾಯೇಲಿನ ಹಳೆಯ ವೈರಿಯಾದ ಎದೋಮಿಗೆ ಪ್ರವಾದಿಸಿದನು.

ದೇವರಿಗೆ ತಮ್ಮ ಬೆನ್ನು ತಿರುಗಿಸಿ, ಆತನ ಧರ್ಮಶಾಸ್ತ್ರಕ್ಕೆ ಜನರು ಲಕ್ಷಕೊಡದೆ ಹೋದಾಗೆಲ್ಲ ಪ್ರವಾದಿಗಳು ಅವರಿಗೆ ಕೊನೆಯ ಎಚ್ಚರಿಕೆಯ ನುಡಿಯನ್ನು ಸಾರಿದರು. ಪರಕೀಯ ಅನ್ಯ ರಾಷ್ಟ್ರಗಳ ಮೂಲಕ ಬರಲಿರುವ ದೇವರ ದಂಡನೆಯನ್ನು ಅವರು ಮುಂತಿಳಿಸಿದರು. ಅವರು ಇಸ್ರಾಯೇಲ್ ಜನರನ್ನು ಪಾಶ್ಚಾತಾಪಪಟ್ಟು ತಮ್ಮ ಮಾರ್ಗಗಳನ್ನು ಬದಲಿಸಬೇಕೆಂದು ಆಹ್ವಾನಿಸಿದರು. ಆದರೆ ಇಸ್ರಾಯೇಲಿನ ಎರಡು ರಾಷ್ಟ್ರಗಳ ಮೇಲೆ ದೇವರ ದಂಡನೆ ಮತ್ತು ನಾಶನದ ನಂತರ ಪ್ರವಾದಿಗಳು ದೇವರ ನಿರಂತರವಾದ ಪ್ರೀತಿಯನ್ನು ಸಾರಿದರು. ಎಲ್ಲ ಪ್ರವಾದಿಗಳೂ ಸಹ ತಾವು ದೇವರಿಂದಲೇ ಸಂದೇಶಗಳನ್ನು ತರುತ್ತಿರುವೆವೆಂಬುದಾಗಿ ಮನವರಿಕೆ ಮಾಡಿಕೊಂಡಿದ್ದರು.

## ಯೆಶಾಯನು

ಪ್ರವಾದಿಯಾದ ಯೆಶಾಯನು ಕ್ರಿ.ಪೂ. ಎಂಟನೇ ಶತಮಾನದಲ್ಲಿ ಸೇವೆ ಸಲ್ಲಿಸಿದನು. ಆತನ ಪುಸ್ತಕವು ಹಳೇ ಒಡಂಬಡಿಕೆಯಲ್ಲೇ ಒಂದು ಭವ್ಯವಾದ ಪುಸ್ತಕವಾಗಿದೆ. ಇದು ತನ್ನ ಜನರಿಗಾಗಿನ ಒಂದು ಉನ್ನತ ಭವಿಷ್ಯಕ್ಕಾಗಿ ದೇವರ ಶಕ್ತಿ ಮತ್ತು ದೇವರ ವಿನ್ಯಾಸದ ಒಂದು ಅದ್ಭುತವಾದ ಸಂದೇಶವನ್ನು ಒಳಗೊಂಡಿದೆ. ಅಧ್ಯಾಯ 6 ರಲ್ಲಿ ಒಬ್ಬ ಪ್ರವಾದಿಯಾಗಲು ಯೆಶಾಯನ ಕರೆಯನ್ನು ತಿಳಿಸಲಾಗಿದೆ. ಆತನು 40 ವರುಷಗಳಿಗಿಂತ ಹೆಚ್ಚು ಕಾಲ ಯೆಹೂದದ ದಕ್ಷಿಣ ರಾಜ್ಯದಲ್ಲಿ ಸೇವೆ ಸಲ್ಲಿಸಿದನು.

ಈ ಪುಸ್ತಕವನ್ನು ಎರಡು ಮುಖ್ಯ ಭಾಗಗಳಾಗಿ ವಿಂಗಡಿಸಬಹುದು:

ಅಧ್ಯಾಯ 1-39 ನ್ನು ಕೆಲವೊಮ್ಮೆ "ನ್ಯಾಯತೀರ್ಪಿನ ಪುಸ್ತಕ" ವೆಂದು ಕರೆಯಲ್ಪಟ್ಟಿದೆ. ಇವು ಇತಿಹಾಸದಲ್ಲಿ ಆ ದಿನಗಳಲ್ಲಿ ಪ್ರಭಾವಶಾಲಿ ಸಾಮ್ರಾಜ್ಯವಾದ ಅಶ್ಶೂರ್ಯರಿಂದ ಬೆದರಿಕೆ ಹಾಕಲ್ಪಟ್ಟ ಇಸ್ರಾಯೇಲ್ ಮತ್ತು ಯೆಹೂದದ ಅರಸರುಗಳಿಗೆ ಯೆಶಾಯನು ಪ್ರಕಟಪಡಿಸಿದ ಪ್ರವಾದನಾ ಎಚ್ಚರಿಕೆಗಳನ್ನು ಒಳಗೊಂಡಿವೆ. ದೇವರ ಕೋಪಕ್ಕೆ ಗುರಿಯಾಗಿ ನಾಶವಾಗದಂತೆ ತಮ್ಮ ಪಾಪಗಳಿಗಾಗಿ ಮತ್ತು ದೇವರಿಗೆ ಮಾಡಿದ ಅವಿಧೇಯತೆಗಾಗಿ ಪಾಶ್ಚಾತ್ತಾಪಪಡಬೇಕೆಂದು ಆತನು ರಾಜರಿಗೆ ಪದೇ ಪದೇ ಒತ್ತಾಯಿಸುತ್ತಾನೆ. ಪ್ರವಾದಿಯು ಜನಾಂಗಗಳಿಗೆ ದೇವರ ಕಡೆಗೆ ತಿರುಗಿಕೊಂಡು ದೇಶದಲ್ಲಿ ನೀತಿ ಮತ್ತು ನ್ಯಾಯವನ್ನು ಮರುಸ್ಥಾಪಿಸಬೇಕೆಂದು ಕರೆಕೊಡುತ್ತಾನೆ. ಇಲ್ಲವಾದರೆ ಅವರು ನಾಶನಕ್ಕೆ ಗುರಿಯಾಗುವರು. ಆದರೆ ಪುಸ್ತಕದ ಈ ಭಾಗದಲ್ಲಿ ನಾವು ಅನೇಕ ವಾಗ್ದಾನಗಳನ್ನು ಸಹ ಕಾಣಬಹುದು: ತಮ್ಮ ಕಷ್ಟಗಳ ಮೂಲಕ ದೇವ ಜನರು ರಕ್ಷಿಸಲ್ಪಟ್ಟು ಸಮಾಧಾನ ಹೊಂದುವರು. ಅರಸನಾದ ದಾವೀದನ ಸಂತತಿಯು ದೇಶವನ್ನು ಆಳುವದು ಮತ್ತು ದೇವರ ಚಿತ್ತವನ್ನು ನೆರವೇರಿಸುವರು.

ಪುಸ್ತಕದ ಎರಡನೇ ಭಾಗವು (ಅಧ್ಯಾಯ 40-66) ಕೆಲವೊಮ್ಮೆ "ಆದರಣೆಯ ಪುಸ್ತಕ" ವೆಂಬುದಾಗಿ ಕರೆಯಲ್ಪಟ್ಟಿದೆ. ಇದು ಭವಿಷ್ಯದ ಬಗ್ಗೆ ಬಲವಾದ ಪ್ರಕಟಣೆಗಳನ್ನು ಒಳಗೊಂಡಿದೆ. ಬಾಬಿಲೋನಿನಲ್ಲಿನ ತಮ್ಮ ಸೆರೆಯ ವೇಳೆಯಲ್ಲಿನ ಕಷ್ಟಗಳ ಅವಧಿಯಲ್ಲಿ ಇಸ್ರಾಯೇಲ್ ಜನರಿಗೆ ಆದರಣೆಯನ್ನು ನುಡಿಯುತ್ತದೆ. ಜನರ ಕಷ್ಟದ ಸಮಯವು ತೀರುವುದು ಮತ್ತು ಅವರ ದ್ರೋಹಗಳು ಮನ್ನಿಸಲ್ಪಡುವವು. ಆದರೆ ಅಷ್ಟೇ ಅಲ್ಲ: ಇಡೀ ಜಗತ್ತಿನ ಭವಿಷ್ಯದ ಬಗ್ಗೆ ಮುನ್ನೋಟಗಳನ್ನು ಸಹ ನಾವು ಕಾಣುವೆವು – ಒಂದು ಸಮಯದಲ್ಲಿ ಎಲ್ಲವೂ ಪರಿಪೂರ್ಣವಾಗುವದು ಮತ್ತು ಆದಿಕಾಂಡ ಪುಸ್ತಕದಲ್ಲಿ ವರ್ಣಿಸಲಾದ ಏದೆನ್ ತೋಟದ ಕಥೆಯ ಸ್ವರ್ಗಮಯ ಸನ್ನಿವೇಶಕ್ಕೆ ಮರಳುವುದು.

ಸಾಮಾನ್ಯವಾಗಿ ಯೆಶಾಯನ ಪ್ರವಾದನೆಗಳನ್ನು ಹೊಸ ಒಡಂಬಡಿಕೆಯಲ್ಲಿ ಸೂಚಿಸಲಾಗಿದೆ. ಬರಲಿರುವ ಮೆಸ್ಸೀಯನ ಕುರಿತಾದ ಯೆಶಾಯನ ಪ್ರವಾದನೆಗಳಿಗೆ ಯೇಸುವು ಹೇಗೆ ಒಂದು ಅಂತಿಮ ನೆರವೇರಿಕೆಯಾಗಿದ್ದಾನೆಂಬುದನ್ನು ಅನೇಕ ಗ್ರಂಥಕರ್ತರುಗಳು ತೋರಿಸುತ್ತಾರೆ. ಹೀಗಾಗಿ ಕ್ರೈಸ್ತ ಸಭೆಯು ಕ್ರಿಸ್ ಮಸ್ (7:14-9:1-7), ಶುಭ ಶುಕ್ರವಾರ ಮತ್ತು ಈಸ್ಟರ್ (42:1-4, 49:1-6, 52:13-53:12), ಅಲ್ಲದೆ ಪಂಚಾಶತ್ತಮ (55:1) ಕುರಿತು ಯೆಶಾಯದಲ್ಲಿ ಮುಂತಿಳಿಸಿದ ಸಂಗತಿಗಳಿಂದ ಸಂದೇಶವನ್ನು ಕಂಡುಕೊಳ್ಳುತ್ತಾರೆ.

## ಯೆರೆಮೀಯನು

ಯೆರೂಸಲೇಮಿನ ಸಮೀಪದ ಪುರೋಹಿತ ಕುಟುಂಬದಿಂದ ಬಂದ ಯೆರೆಮೀಯನು ಕ್ರಿ.ಪೂ. ಏಳು ಮತ್ತು ಆರನೇ ಶತಮಾನದ ಅವಧಿಯಲ್ಲಿ ಸೇವೆ ಸಲ್ಲಿಸಿದನು. ಇದು ಯೆಶಾಯನ ನಂತರ ಸುಮಾರು 100 ವರ್ಷಗಳ ಅವಧಿಯಾಗಿದೆ. ಯೆರೆಮೀಯನ ಅವಧಿಯಲ್ಲಿ ಯೆಹೂದ ರಾಜ್ಯಕ್ಕೆ ಹೊಸ ಬೆದರಿಕೆಯಾದ ಅಶ್ಶೂರ್ಯ ಸಾಮ್ರಾಜ್ಯವು ಬಾಬಿಲೋನಿಯನ್ನರಿಂದ ಸೋತು ಹೋದರು. ಅರಸ ಮತ್ತು ಜನರು ದೇವರಿಂದ ಬಂದಂತ ತಮ್ಮ ಸಂದೇಶವನ್ನು ಎಂದಿಗೂ ಕೇಳದಂತಹಅನುಭವವನ್ನು ಎದುರಿಸಿದ ಹಳೇ ಒಡಂಬಡಿಕೆಯ ಪ್ರವಾದಿಗಳಿಗೆ ಈತನು ಸೇರಿದವನಾಗಿದ್ದಾನೆ. ಸಾಮಾನ್ಯವಾಗಿ ಯೆರೆಮೀಯನನ್ನು "ಗೋಳಾಡುವ ಪ್ರವಾದಿ" ಎಂದು ಕರೆಯಲಾಗಿದೆ. ಈತನು ಹಿಂಸೆಗೊಳಗಾದನು. ಈತನನ್ನು ದೇಶದ್ರೋಹಿಯೆಂದು ಕರೆಯಲಾಯಿತು. ಎಲ್ಲ ಬಗೆಯಿಂದಲೂ ಈತನನ್ನು ಹಿಂಸಿಸಲಾಯಿತು. ಈತನಿಗೆ ಯಾವುದೇ ಸ್ನೇಹಿತರಿರಲಿಲ್ಲ. ಆದರೆ ಇಷ್ಟೆಲ್ಲ ಕಷ್ಟಗಳ ಹೊರತಾಗಿಯೂ ಈತನು ಸುಮ್ಮನಿರಲಿಲ್ಲ.

ಈತನ ಸೇವೆ 40 ವರ್ಷಗಳವರೆಗೆ ಮುಂದುವರೆಯಿತು. ಇದೊಂದು ಹೋರಾಟದ ಮತ್ತು ಕಷ್ಟಕರ ಸಮಯವಾಗಿತ್ತು. ಆ ವೇಳೆ ಅಶ್ಶೂರ್ಯ , ಬಾಬಿಲೋನು ಮತ್ತು ಐಗುಪ್ತದ ನಡುವೆ ನಿರಂತರ ಯುದ್ಧ ನಡೆಯುತ್ತಿತ್ತು. ಇದು ಯೆಹೂದವನ್ನೊಳಗೊಂಡು ಅನೇಕ ಸಣ್ಣ ದೇಶಗಳ ಮೇಲೆ ಗಂಭೀರ ಪರಿಣಾಮ ಬೀರಿ ಅವನ್ನು ನಾಶ ಮಾಡಿತು. ಬಾಬಿಲೋನಿನ ಅರಸನಾದ ನೆಬೂಕದ್ನೆಚ್ಚರನು ಕ್ರಿ.ಪೂ. 605 ರಲ್ಲಿ ಯೆರೂಸಲೇಮಿಗೆ ಮುತ್ತಿಗೆ ಹಾಕಿದನು, ಕ್ರಿ.ಪೂ. 597 ರಲ್ಲಿ ಪುನಃ ಆಕ್ರಮಣ ಮಾಡಿದನು ಮತ್ತು ಕ್ರಿ.ಪೂ. 587 ರಲ್ಲಿ ಅಂತಿಮವಾಗಿ ಅದನ್ನು ನಾಶ ಮಾಡಿದನು. ಯೆರೆಮೀಯನು ಈ ವರ್ಷಗಳಲ್ಲಿ ಯೆಹೂದದಲ್ಲಿನ ರಾಜಕೀಯ ಬೆಳವಣಿಗೆಗಳಲ್ಲಿ ವೈಯಕ್ತಿಕವಾಗಿ ಪಾಲ್ಗೊಂಡನು. ಈತನನ್ನು ಬಾಬಿಲೋನಿಗೆ ಕೊಂಡೊಯ್ಯಲಿಲ್ಲ ಆದರೆ ಐಗುಪ್ತಕ್ಕೆ ಓಡಿ ಹೋದನು. ಯೆಹೂದಿ ಸಂಪ್ರದಾಯದ ಪ್ರಕಾರ ಈತನು ಇಲ್ಲಿಯೇ ಕಲ್ಲೆಸೆದು ಕೊಲ್ಲಲ್ಪಟ್ಟನು.

ಯೆಶಾಯನಂತೆಯೇ ತನ್ನ ಸಂದೇಶಗಳ ಮೂಲಕ ಯೆರೆಮೀಯನು ಸಹ ಭವಿಷ್ಯವನ್ನು ನೋಡುವವನಾಗಿದ್ದಾನೆ. ಈತನು ಹೊಸ ಒಡಂಬಡಿಕೆಯನ್ನು ಸ್ಪಷ್ಟವಾದ ರೀತಿಯಲ್ಲಿ ನುಡಿಯುವ ಹಳೇ ಒಡಂಬಡಿಕೆಯ ಮೊದಲ ಪ್ರವಾದಿಯಾಗಿದ್ದಾನೆ (31). ಕರ್ತನ ಭೋಜನವನ್ನು ಆಚರಿಸುವಾಗ ಯೇಸುವು ಈ ಹೇಳಿಕೆಯನ್ನು ಸೂಚಿಸಿ ಹೇಳುತ್ತಾನೆ: “ಈ ಪಾತ್ರೆಯು ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ” (ಲೂಕ 22:20).

ಸತ್ಯವೇದದಲ್ಲಿ ಬಹು ದೀರ್ಘ ಪುಸ್ತಕವಾಗಿರುವ ಯೆರೆಮೀಯ ಪುಸ್ತಕವನ್ನು ಈ ರೀತಿಯಾಗಿ ರಚನೆ ಮಾಡಬಹುದು:

1. ಪ್ರವಾದಿಯ ಕರೆ (ಅಧ್ಯಾಯ 1)
2. ಯೆಹೂದಕ್ಕೆ ಎಚ್ಚರಿಕೆ ಮತ್ತು ಬುದ್ಧಿವಾದ (ಅಧ್ಯಾಯ 2-35)
3. ಪ್ರವಾದಿಯ ಬಾಧೆ ಮತ್ತು ಹಿಂಸೆ (ಅಧ್ಯಾಯ 36-38)
4. ಯೆರೂಸಲೇಮಿನ ನಾಶನ ಮತ್ತು ಅನಂತರದ ಸಂಭವಗಳು (ಅಧ್ಯಾಯ 39-45)
5. ರಾಷ್ಟ್ರಗಳ ಮೇಲಣ ನ್ಯಾಯತೀರ್ಪು (ಅಧ್ಯಾಯ 46-51)
6. ಐತಿಹಾಸಿಕ ಅನುಬಂಧ (ಅಧ್ಯಾಯ 52)

## ಪ್ರಲಾಪಗಳು

ಈ ಪುಸ್ತಕವು ಯೆರೆಮೀಯನಿಂದ ಬರೆಯಲ್ಪಟ್ಟಿವೆ ಎಂಬುದಾಗಿ ಸಂಪ್ರದಾಯಗಳು ಹೇಳುವ ಐದು ಸ್ವತಂತ್ರ ಹಾಡುಗಳನ್ನು ಒಳಗೊಂಡಿದೆ. ಆ ನಿಮಿತ್ತ ಇದರ ಗ್ರಂಥಕರ್ತನು ಅನಾಮಿಕನಾದರೂ ಸಹ ನಿಮ್ಮ ಕನ್ನಡ ಸತ್ಯವೇದಗಳಲ್ಲಿ ಇದಕ್ಕೆ ಯೆರಿಮೀಯನ ಹೆಸರು ಸೇರಿಸಲ್ಪಟ್ಟಿರುವುದನ್ನು ಕಾಣಬಹುದು. ಯೆರೆಮೀಯನ ಮತ್ತು ಪ್ರಲಾಪಗಳ ಪುಸ್ತಕಗಳ ನಡುವೆ ಅನೇಕ ಸಮಾನತೆಗಳಿವೆ. ಎರಡೂ ಪುಸ್ತಕಗಳಲ್ಲಿನ ಜನರಿಗಾಗಿನ ದುಃಖ ಮತ್ತು ಕಾಳಜಿ ಒಂದೇ ಆಗಿದೆ.

ಈ ಹಾಡುಗಳ ಸನ್ನಿವೇಶವು ಯೆಹೂದ ರಾಜ್ಯವು ಬಾಬಿಲೋನಿನ ವಶವಾಗಿರುವುದಾಗಿದೆ. ಅವು ದೇವರು ತಮ್ಮನ್ನು ವೈರಿಗಳ ಕೈಗೆ ಒಪ್ಪಿಸಿದ್ದಾನೆಂದು ನಂಬಿರುವ ಜನರ ದುಃಖ ಮತ್ತು ವ್ಯಥೆಯನ್ನು ತಿಳಿಸುತ್ತವೆ. ಪ್ರತಿ ಹಾಡು ಸಹ ಒಂದೊಂದು ಪಾಪದರಿಕೆಯನ್ನು ಸಹ ಒಳಗೊಂಡಿದೆ. ಆದರೆ ಭವಿಷ್ಯಕ್ಕಾಗಿ ನಿರೀಕ್ಷೆಯನ್ನು ಕೊಡುವ ವಾಗ್ದಾನಗಳನ್ನು ಸಹ ನಾವು

ಕಾಣಬಹುದು. ಮೊದಲು ಕ್ರಿ.ಪೂ. 587 ರಲ್ಲಿ ಬಾಬಿಲೋನಿನವರಿಂದ ಮತ್ತು ಕ್ರಿ.ಶ. 70 ರಲ್ಲಿ ರೋಮನ್ನರಿಂದ ಯೆರೂಸಲೇಮಿನ ದೇವಾಲಯದ ನಾಶನವನ್ನು ಯೆಹೂದ್ಯರು ಜ್ಞಾಪಿಸುವಾಗ ಜುಲೈ ತಿಂಗಳಿನಲ್ಲಿ ಯೆಹೂದಿ ಸಭಾಮಂದಿರಗಳಲ್ಲಿ ಈ ವಾಕ್ಯಭಾಗಗಳನ್ನು ಇನ್ನೂ ಸಹ ಓದಲಾಗುತ್ತಿದೆ.

ಮೊದಲ ನಾಲ್ಕು ಹಾಡುಗಳನ್ನು "ವರ್ಣಮಾಲೆಯವುಗಳೆಂದು" ಕರೆಯಲಾಗುತ್ತದೆ. ಅಂದರೆ ಪ್ರತಿ ವಚನದ ಮೊದಲ ಪದವು ಇಬ್ರಿಯ ವರ್ಣಮಾಲೆಯ ಕ್ರಮವನ್ನು ಅನುಸರಿಸುತ್ತದೆ. ವರ್ಣಮಾಲೆಯಲ್ಲಿ 22 ಅಕ್ಷರಗಳಿವೆ, ಹಾಗಾಗಿ ಅಧ್ಯಾಯ 1, 2 ಮತ್ತು 4 ರಲ್ಲಿ 22 ವಚನಗಳಿವೆ. ಅಧ್ಯಾಯ 3 ರಲ್ಲಿ 66 ವಚನಗಳಿವೆ. ಇದು ಇಬ್ರಿಯ ವರ್ಣಮಾಲೆಯನ್ನನುಸರಿಸುವ 22 ಶ್ಲೋಕಗಳನ್ನು ಒಳಗೊಂಡಿದೆ. ಪ್ರತಿ ಶ್ಲೋಕ ಸಹ ಅದೇ ಅಕ್ಷರದಿಂದ ಪ್ರಾರಂಭವಾಗುವ ಮೂರು ವಚನಗಳನ್ನು ಒಳಗೊಂಡಿದೆ.

## ಯೆಹೆಜ್ಕೇಲನು

ಯೆರೆಮೀಯನಿಗೆ ಸುಮಾರು ಸಮಕಾಲೀನನಾಗಿರುವ ಯೆಹೆಜ್ಕೇಲನು ಕ್ರಿ.ಪೂ. ಆರನೇ ಶತಮಾನದ ಮೊದಲ ಭಾಗದಲ್ಲಿ ಸೇವೆ ಮಾಡಿದನು. ಈತನು ಬಾಬಿಲೋನಿಗೆ ಸೆರೆಯಾಗಿ ಒಯ್ಯಲ್ಪಟ್ಟ ಯೆಹೂದ್ಯರ ನಡುವೆ ಇದ್ದವನಾಗಿದ್ದನು. ಸೆರೆಗಾಗಿನ ಈತನ ಕಾರಣದ ವಿವರಣೆ ಸಹ ಯೆರೆಮೀಯನು ಹೇಳಿರುವ ಸಂಗತಿಯೇ ಆಗಿದೆ: ಜನರು ದೇವರನ್ನು ಬಿಟ್ಟವರಾಗಿದ್ದಾರೆ, ಈಗ ಬಾಬಿಲೋನಿನವರ ಮೂಲಕ ದೇವರ ದಂಡನೆಯು ಅವರ ಮೇಲೆ ಬಂದಿದೆ. ಸಾಂಕೇತಿಕ ನಟನೆಯ ಮೂಲಕ ಈ ಯೆಹೆಜ್ಕೇಲನು ತಿಳಿಯಪಡಿಸಿದನು (ಉದಾ. 4 ನೇ ಅಧ್ಯಾಯದಲ್ಲಿ).

ಈ ಪುಸ್ತಕವು 30 ನೇ ವಯಸ್ಸಿನಲ್ಲಿ ಪ್ರವಾದಿಯ ಕರೆ ಮತ್ತು ಕರ್ತನ ಮಹಿಮಾ ದರ್ಶನದೊಂದಿಗೆ ಪ್ರಾರಂಭವಾಗುತ್ತದೆ (ಅಧ್ಯಾಯ 1-3). 4-24 ಅಧ್ಯಾಯಗಳು ಇಸ್ರಾಯೇಲಿಗಾಗಿನ ಎಚ್ಚರಿಕೆಗಳನ್ನು ಒಳಗೊಂಡಿವೆ. ದೇವರು ಅವರನ್ನು ಶಿಕ್ಷಿಸುತ್ತಾನೆ ಮತ್ತು ದೇವಾಲಯವು ಕೆಡವಲ್ಪಡುತ್ತದೆ. ತನ್ನ ಸ್ವಜನರಿಗೆ ಕಂಟಕವಾಗಿರುವ ಜನಾಂಗಗಳಿಗಾಗಿ ಸಹ ಸಂದೇಶವನ್ನು ಯೆಹೆಜ್ಕೇಲನು ಹೊಂದಿದ್ದನು (ಅಧ್ಯಾಯ 25-32).

ಯೆರೂಸಲೇಮಿನ ಪತನದ ನಂತರ ಯೆಹೆಜ್ಕೇಲನ ಪ್ರವಾದನ ದಾಟಿಯು ಬದಲಾಯಿತು. ಈಗ ಆತನು ಜನರನ್ನು ಸಂತೈಸುತ್ತಾ, ಅವರ ಭವಿಷ್ಯದ ಬಗ್ಗೆ ಅವರಿಗೆ ನಿರೀಕ್ಷೆಯನ್ನು ತಿಳಿಸುತ್ತಿದ್ದಾನೆ (ಅಧ್ಯಾಯ 33-39). ಖಂಡಿತವಾಗಿ ದೇವರು ತನ್ನ ಜನರನ್ನು ಮರುಸ್ಥಾಪಿಸುವನು. ಪುಸ್ತಕದ ಕೊನೆಯಲ್ಲಿ ದೇವಜನರು ಕರ್ತನನ್ನು ಒಂದು ಹೊಸ ದೇವಾಲಯದಲ್ಲಿ ಆರಾಧಿಸುವ ಒಂದು ಸಮಯದ ಕುರಿತ ಯೆಹೆಜ್ಕೇಲನ ದರ್ಶನವನ್ನು ನಾವು ಕಾಣಬಹುದು (ಅಧ್ಯಾಯ 40-48).

ಜನರು ವ್ಯಕ್ತಿಗತವಾಗಿ ದೇವರಿಗೆ ಜವಾಬ್ದಾರರಾಗಿದ್ದಾರೆಂಬುದಾಗಿ ಯೆಹೆಜ್ಕೇಲನು ಬೋಧಿಸಿದನು. ಹೃದಯ ಪರಿವರ್ತನೆಯ ಮೂಲಕ ಪ್ರತಿ ವ್ಯಕ್ತಿಗೆ ಒಂದು ಅಂತರ್ಯದ ನವೀಕರಣದ ಅವಶ್ಯಕತೆಯಿದೆ. ಶುದ್ಧೀಕರಣ ಮತ್ತು ಪರಿಶುದ್ಧತೆಯು ಆತನ ಸಂದೇಶದಲ್ಲಿನ ಮುಖ್ಯ ವಿಷಯವಸ್ತುಗಳಾಗಿವೆ.

## ದಾನಿಯೇಲನು

ದಾನಿಯೇಲನ ಪುಸ್ತಕ ಸಹ ಬಾಬಿಲೋನಿನೊಂದಿಗೆ ಸಂಬಂಧ ಹೊಂದಿದೆ. ಪುಸ್ತಕದ ಮೊದಲ ಭಾಗದಲ್ಲಿ ಐತಿಹಾಸಿಕ ಚೌಕಟ್ಟನ್ನು ಕಾಣಬಹುದು (ಅಧ್ಯಾಯ 1-6). ದಾನಿಯೇಲ ಮತ್ತು ಆತನ ಮೂವರು ಸ್ನೇಹಿತರನ್ನು ಬಾಬಿಲೋನಿಗೆ ಸೆರೆಯಾಗಿ ಒಯ್ಯಲಾಗುತ್ತದೆ. ಅವರನ್ನು ಅರಸನಾದ ನೆಬೂಕದ್ನೆಚ್ಚರನ ರಾಜಾಲಯಕ್ಕೆ ಕೊಂಡೊಯ್ಯಲಾಗುತ್ತದೆ, ಅಲ್ಲಿ ಅವರು ಯೆಹೂದಿ ನಂಬಿಕೆ ಮತ್ತು ಜೀವನ ಪದ್ಧತಿಯ ಪರವಾಗಿ ನಿಲ್ಲಬೇಕಾಗುತ್ತದೆ. ಒಂದು ರೀತಿಯಲ್ಲಿ ದಾನಿಯೇಲನು ಪ್ರವಾದಿಗಿಂತಲೂ ಹೆಚ್ಚಾಗಿ ಒಬ್ಬ ರಾಜ ನೀತಿಜ್ಞನಂತಿದ್ದು ದೇವರಿಂದ ವಿಶೇಷ ಜ್ಞಾನವನ್ನು ಪಡಕೊಳ್ಳುತ್ತಾನೆ. "ಆತನು ದಿವ್ಯದರ್ಶನಗಳನ್ನು ಗ್ರಹಿಸುವುದರಲ್ಲಿ ಪ್ರವೀಣನಾದನು" (1:17).

ಈ ಒಂದು ಜ್ಞಾನ ಮತ್ತು ವಿವೇಕವು ಪುಸ್ತಕದ ಎರಡನೇ ಭಾಗದಲ್ಲಿ (7-12) ತಿಳಿಸಲಾದ ದಾನಿಯೇಲನ ದರ್ಶನ ಮತ್ತು ಕನಸುಗಳ ಅರ್ಥವಿವರಣೆಯ ಆಧಾರವಾಗಿದೆ. ದರ್ಶನಗಳ ಮೂಲಕ ಜಗತ್ತಿನ ಮಹಾ ಸಾಮ್ರಾಜ್ಯದ ಪತನವು ವರ್ಣಿಸಲ್ಪಟ್ಟಿದೆ. ದೇವರ ರಾಜ್ಯದ ಸ್ಥಾಪನೆ – ಎಂದೂ ಅಳಿಯದ ಒಂದು ರಾಜ್ಯವು "ಮನುಷ್ಯಕುಮಾರನಂತಿರುವವನ ಮೂಲಕ" ಸ್ಥಾಪಿಸಲ್ಪಡುವದು (7:13-14). ಈ ವಾಕ್ಯಭಾಗವು ಹೊಸ ಒಡಂಬಡಿಕೆಯ ಪ್ರಕಟಣೆ ಪುಸ್ತಕದೊಂದಿಗೆ ಸಾಮಾನ್ಯಾರ್ಥದಲ್ಲಿ ಅನೇಕ ಸಾಹಿತ್ಯಿಕ ಅಂಶಗಳನ್ನು ಹೊಂದಿದೆ. ಉದಾಹರಣೆಗೆ ಚಿತ್ರ, ಸಂಖ್ಯೆ ಮತ್ತು ಸಂಕೇತಗಳ ಬಳಕೆಯು ಒಂದೇ ರೀತಿಯಲ್ಲಿದೆ. ಈ ರೀತಿಯ ಪಠ್ಯವನ್ನು ತದನಂತರ ಕಾಲಜ್ಞಾನದ್ದು ಎಂದು ಕರೆಯಲಾಗಿದೆ, ಇದರರ್ಥ "ಪ್ರಕಟಣೆ" ಅಥವಾ ಬಹಿರಂಗಪಡಿಸು ಎಂದಾಗಿದೆ.

ಈ ಪುಸ್ತಕದ ದೈವಶಾಸ್ತ್ರೀಯ ಅಂಶವು ದೇವರ ಸಾರ್ವಭೌಮತೆ ಎಂದಾಗಿದೆ (5:21). ದಾನಿಯೇಲನ ದರ್ಶನಗಳು ಸದಾ ದೇವರನ್ನು ವಿಜಯಿಯನ್ನಾಗಿ ತೋರಿಸುತ್ತವೆ. ಈ ಪುಸ್ತಕದ ಭಾಗಗಳು (ಅಧ್ಯಾಯ 2-8) ಆ ದಿನಗಳಲ್ಲಿ ಜಗತ್ತಿನ ಆ ಭಾಗದ ಆಡಳಿತಾತ್ಮಕ ಭಾಷೆಯಾದ ಅರಾಮೈಕ್ ನಲ್ಲಿ ಬರೆಯಲ್ಪಟ್ಟಿವೆ.

ಸುವಾರ್ತೆಗಳಲ್ಲಿ ಯೇಸು ತನ್ನ ಕುರಿತಾಗಿ ಪದೇ ಪದೇ ಬಳಸಿದ "ಮನುಷ್ಯಕುಮಾರನು" ಎಂಬ ಪದವು ದಾನಿಯೇಲನ ಪುಸ್ತಕದಿಂದಲೇ ಬಂದಿರುತ್ತದೆ.

ದಾನಿಯೇಲನ ಪುಸ್ತಕವು ಎರಡು ಭಾಗಗಳನ್ನು ಒಳಗೊಂಡಿದೆ:

1. ಬಾಬಿಲೋನಿನ ರಾಜಾಲಯದಲ್ಲಿ ದಾನಿಯೇಲನು
2. ದಾನಿಯೇಲನ ದರ್ಶನಗಳು

## ಹೋಶೇಯನು

ಹೋಶೇಯನ ಪುಸ್ತಕ ಉಳಿದೆಲ್ಲ ಪ್ರವಾದಿಗಳಲ್ಲಿ ಹೆಚ್ಚು ನಾಟಕೀಯವಾದುದ್ದಾಗಿದೆ. ದೇವರು ಆತನಿಗೆ ತನ್ನ ಸಂದೇಶದಂತೆ ಬದುಕಲು ಬರೀ ಅದನ್ನು ಸಾರುವುದು ಮಾತ್ರವಲ್ಲದೆ ವ್ಯಭಿಚಾರಾಸಕ್ತಳಾದ ಒಬ್ಬ ಹೆಂಗಸನ್ನು ಮದುವೆಯಾಗಲು ಹೇಳಿದನು. ಈತನು ಕ್ರಿ.ಪೂ. ಎಂಟನೇ ಶತಮಾನದ ಅವಧಿಯಲ್ಲಿ ಯೆಶಾಯನಿಗೆ ಸಮಕಾಲೀನನಾಗಿದ್ದಾನೆ, ಆದರೆ ಈತನು ಇಸ್ರಾಯೇಲಿನ ಉತ್ತರ ರಾಜ್ಯದಲ್ಲಿ ಸೇವೆ ಸಲ್ಲಿಸಿದನು (ಯೆಶಾಯನು ಯೆಹೂದದಲ್ಲಿ ಸೇವೆ ಸಲ್ಲಿಸಿದನು). ಈತನು

ಕ್ರಿ.ಪೂ. 722 ರಲ್ಲಿ ಅಶ್ಶೂರ್ಯರು ಸಮಾರ್ಯಕ್ಕೆ ಮುತ್ತಿಗೆ ಹಾಕುವುದಕ್ಕಿಂತ 40 ವರ್ಷಗಳ ಹಿಂದಿನ ಅವಧಿಯಲ್ಲಿ ಪ್ರವಾದಿಸಿದನು. ಅದು ಪ್ರಕ್ಷುಬ್ಧ ಸಮಯವಾಗಿತ್ತು ಮತ್ತು ಬರೀ 20 ವರ್ಷಗಳ ಅವಧಿಯಲ್ಲಿ ಇಸ್ರಾಯೇಲು ಆರು ಅರಸರನ್ನು ಹೊಂದಿತ್ತು. ಅವರು ದೇವರಿಗೆ ಅಪನಂಬಿಗಸ್ತರಾಗಿದ್ದರು ಮತ್ತು ಅನ್ಯದೇಶೀಯ ವಿಗ್ರಹಗಳನ್ನು ಸಹ ಪೂಜಿಸಿದರು.

ಹೋಶೇಯನ ಹೆಂಡತಿಯು ಪದೇ ಪದೇ ಆತನಿಗೆ ಅಪನಂಬಿಗಸ್ತಳಾದದ್ದರಿಂದ ಅದು ಆತನಿಗೆ ಅತಿಯಾದ ಘಾಸಿಯನ್ನುಂಟುಮಾಡಿತು. ಅದೇ ವೇಳೆ ಆತನು ತನ್ನ ಅಪನಂಬಿಗಸ್ತಳಾದ ಪತ್ನಿಯನ್ನು ಪದೇ ಪದೇ ಪ್ರೀತಿಸುತ್ತಾ, ಕ್ಷಮಿಸುತ್ತಾ ಮತ್ತು ಕಾಪಾಡುತ್ತಾ ಹೋದನು. ಈ ಮೂಲಕ ಹೋಶೇಯನು ತನ್ನ ಜನರಿಗಾಗಿನ ದೇವರ ಬಿದ್ದು ಹೋಗದ ಪ್ರೀತಿಯ ಕುರಿತಾಗಿ ಒಂದು ಪ್ರವಾದನಾತ್ಮಕ ಸಂದೇಶವನ್ನು ಪ್ರಕಟಿಸಿದನು. ತನ್ನ ಜನರು ತನ್ನಿಂದ ದೂರವಾದಾಗ ದೇವರಿಗೆ ನೋವಾಗುತ್ತದೆ. ಆದರೆ ತನ್ನ ಅಪನಂಬಿಗಸ್ತ ಜನರನ್ನು ತನ್ನೊಂದಿಗಿನ ಒಂದು ನವೀಕರಿಸಿದ ಅನ್ಯೋನ್ಯತೆಗೆ ಸೇರಿಸಲು ಆತನು ತವಕಿಸುತ್ತಾನೆ. ಅಧ್ಯಾಯ 11 ರಲ್ಲಿ ದೇವರ ಕರುಣೆಯ ಬಗ್ಗೆ ಸತ್ಯವೇದದಲ್ಲಿ ಒಂದು ಮಹಾ ಶಕ್ತಿಶಾಲಿಯಾದ ಹೇಳಿಕೆಯನ್ನು ನಾವು ಕಾಣುತ್ತೇವೆ (11:1-11).

## ಯೋವೇಲನು

ಯೋವೇಲನು ಯಾವಾಗ ಜೀವಿಸಿದ್ದನೆಂಬುದರ ಬಗ್ಗೆ ನಮಗೇನೂ ತಿಳಿದಿಲ್ಲ. ಆದರೆ ಆತನು ಯೆಹೂದದ ದಕ್ಷಿಣ ರಾಜ್ಯದಲ್ಲಿ ಸೇವೆ ಸಲ್ಲಿಸಿದನೆಂಬುದನ್ನು ಪಠ್ಯದಿಂದ ತಿಳಿದುಕೊಳ್ಳಬಹುದು. ಇದು ಕ್ರಿ.ಪೂ. ಒಂಭತ್ತನೇ ಶತಮಾನ ಅಥವಾ ಕ್ರಿ.ಪೂ. ಐದನೇ ಶತಮಾನದಲ್ಲಿರಬಹುದು. ಆದರೆ ದಿನಾಂಕವು ಪ್ರಾಮುಖ್ಯ ಸಂಗತಿಯೇನಲ್ಲ.

ಈ ಪುಸ್ತಕವು ಒಂದು ವಿಪತ್ತಿನೊಂದಿಗೆ ಪ್ರಾರಂಭವಾಗುತ್ತದೆ. ಮಿಡತೆಗಳ ದಾಳಿಯಿಂದ ಬೆಳೆಯೆಲ್ಲಾ ತಿಂದುಹಾಕಲ್ಪಟ್ಟು ಅದು ಗಂಭೀರವಾದ ಬರವನ್ನು ತಂದು ಹಾಕುತ್ತದೆ (1). ಇದನ್ನು ಎರಡು ರೀತಿಯಲ್ಲಿ ವ್ಯಾಖ್ಯಾನಿಸಬಹುದು: ಒಂದು ವೇಳೆ ಅವು ನಿಜವಾದ ಮಿಡತೆಗಳಾಗಿದ್ದು, ಒಂದು ನೈಸರ್ಗಿಕ ವಿಕೋಪವಾಗಿರಬಹುದು ಅಥವಾ ಮಿಡತೆಗಳು ದೇಶವನ್ನು ಆಕ್ರಮಿಸುವ ವೈರಿ ಸೈನ್ಯದ ಸಂಕೇತವಾಗಿದೆ. ಒಂದು ವೇಳೆ ಈ ವಿಪತ್ತು ಯೆಹೋವನ ಆಗಮನ ದಿನಕ್ಕೆ ರೂಪಾಲಂಕಾರವಾಗಿರಬಹುದು (2:1-17).

ಜನರು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ಯೆಹೋವನ ದಿನವು ಅವರ ಮೇಲೆ ಬಂದು ಅವರನ್ನು ನಾಶಮಾಡುವದು ಎಂಬುದು ಯೋವೇಲನ ಸಂದೇಶವಾಗಿದೆ. ಒಂದು ವೇಳೆ ಅವರು ಪಶ್ಚಾತ್ತಾಪಪಡುವುದಾದರೆ ಅವರು ಕರ್ತನ ಆಶೀರ್ವಾದ ಹೊಂದುವರು (2:18-3:21). ಪಂಚಾಶತ್ತಮ ದಿನದಂದು ಯೆರೂಸಲೇಮಿನಲ್ಲಿ ತನ್ನ ಪ್ರಸಂಗದಲ್ಲಿ ಈ ಆಶೀರ್ವಾದವನ್ನು ಸೂಚಿಸಿ ಹೇಳುತ್ತಾನೆ (ಅಪೊ.ಕೃತ್ಯ. 2:16-21). ದೇವರು ತನ್ನ ಆತ್ಮವನ್ನು ಜನರ ಮೇಲೆ ಸುರಿಸುವನು.

## ಆಮೋಸನು

ಕ್ರಿ.ಪೂ. ಎಂಟನೇ ಶತಮಾನದ ಅವಧಿಯಲ್ಲಿ ಇಸ್ರಾಯೇಲಿನ ಉತ್ತರ ರಾಜ್ಯದಲ್ಲಿ ಆಮೋಸನು ಹೋಶೇಯನಿಗೆ ಸಮಕಾಲೀನನಾಗಿದ್ದಾನೆ. ಆದರೆ ಈತನು ದಕ್ಷಿಣ ರಾಜ್ಯದಲ್ಲಿ ಒಂದು ಕುರಿಕಾಯುವ ಕುಟುಂಬದಿಂದ ಬಂದವನಾಗಿದ್ದಾನೆ. ಈತನು ಅತ್ತಿ ಹಣ್ಣು ಕೀಳುವವನೂ ಮಂದೆ ಕಾಯುವವನೂ ಆಗಿದ್ದನು (1:1, 7:14-15). ಈ ಸಮಯದಲ್ಲಿ ಇಸ್ರಾಯೇಲ್ ರಾಜ್ಯವು ಸಂಪದ್ಭರಿತವೂ, ಏಳಿಗೆ ಹೊಂದಿದ್ದಾಗಿಯೂ ಇತ್ತು. ಜನರಲ್ಲಿ ಧಾರ್ಮಿಕತೆ ತೋರಿಕೆಯಿತ್ತು. ಆದರೆ ಆಮೋಸನು ಅವರ ಕಪಟತೆಯನ್ನು ಖಂಡಿಸುತ್ತಾನೆ. ಅವರು ಬಡವರನ್ನು ಶೋಷಿಸುತ್ತಾರೆ, ಮತ್ತು ಅವರ ಧಾರ್ಮಿಕತೆಯು ಸುಳ್ಳು. ಈ ಎಲ್ಲಾ ಸಂಗತಿಗಳನ್ನು ದೇವರ ನಾಮದಲ್ಲಿ ಹೊರಗೆಡವುದರಲ್ಲಿ ಆಮೋಸನು ಬುದ್ಧಿವಂತನಾಗಿದ್ದಾನೆ. ನ್ಯಾಯವು ಹೊಳೆಯಂತೆಯೂ, ನ್ಯಾಯವು ಮಹಾನದಿಯಂತೆಯೂ ಹರಿಯಬೇಕೆಂದು ಆತನು ಕೇಳಿಕೊಳ್ಳುತ್ತಾನೆ (5:24). ಮೂವತ್ತು ವರ್ಷಗಳ ನಂತರ ಅಶ್ಶೂರ್ಯರು ಸಮಾರ್ಯವನ್ನು ನಾಶಪಡಿಸಿ ಜನರನ್ನು ಸೆರೆಗೆ ಕೊಂಡೊಯ್ಯುತ್ತಾರೆ.

ಆಮೋಸ ಪುಸ್ತಕವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು:

1. ಜನಾಂಗದ ಮೇಲಣ ನ್ಯಾಯತೀರ್ಪಿನ ಎಂಟು ದೈವೋಕ್ತಿಗಳು (ಅಧ್ಯಾಯ -2)
2. ಇಸ್ರಾಯೇಲ್ ಜನರ ಮೇಲಣ ಶಿಕ್ಷೆಯ ಕುರಿತ ಮೂರು ದೈವೋಕ್ತಿಗಳು (ಅಧ್ಯಾಯ 3-6)
3. ದುರ್ಗತಿಯ ಐದು ದರ್ಶನಗಳು (ಅಧ್ಯಾಯ 7-9)

## ಓಬದ್ಯನು

ಇದು ಹಳೇ ಒಡಂಬಡಿಕೆಯಲ್ಲಿನ ಅತೀ ಸಣ್ಣ ಪುಸ್ತಕವಾಗಿದೆ. ಓಬದ್ಯನು ಯಾರು ಮತ್ತು ಆತನು ಯಾವಾಗ ಸೇವೆ ಮಾಡಿದನೆಂಬುದು ನಮಗೆ ಗೊತ್ತಿಲ್ಲ. ಆದರೆ ಆತನ ಪ್ರವಾದನೆಯ ವಿಷಯಾಂಶಗಳು ಸ್ಪಷ್ಟವಾಗಿವೆ. ಯೆರೂಸಲೇಮನ್ನು ದೋಚಿ ಸೊಕ್ಕೇರಿದ ಎದೋಮಿಗೆ ವಿರುದ್ಧವಾಗಿನ ನಾಶನದ ನ್ಯಾಯತೀರ್ಪಿನೊಂದಿಗೆ ಅವು ಪ್ರಾರಂಭವಾಗುತ್ತವೆ (ವ. 1-6). ಎದೋಮಿನ ಜನರು ಅಬ್ರಹಾಮನ ಮಗನಾದ ಏಸಾವನ ಸಂತತಿಯವರ ಪಾಪವು ಬಹು ಗಂಭೀರವಾದುದ್ದಾಗಿದೆ. ಯಾಕೆಂದರೆ ಅವರು ಇಸ್ರಾಯೇಲ್ಯರಿಗೆ ರಕ್ತಸಂಬಂಧಿಗಳಾಗಿದ್ದರು. ನಂತರ ಕ್ರಿ.ಪೂ. ಐದನೇ ಶತಮಾನದಲ್ಲಿ ಎದೋಮು ಅರಬ್ಬರ ಆಕ್ರಮಣಕ್ಕೊಳಗಾಯಿತು.

ಕೊನೆಯ ಐದು ವಚನಗಳು ಇಸ್ರಾಯೇಲಿನ ಭವಿಷ್ಯದ ನಿರೀಕ್ಷೆಯನ್ನು ವರ್ಣಿಸುತ್ತವೆ. “ಆಗ ರಾಜ್ಯವು ಯೆಹೋವನದಾಗಿರುವುದು” (ವಚನ 21).

## ಯೋನನು

ಈ ಪುಸ್ತಕವು ಉಳಿದ ಪುಸ್ತಕಗಳಿಗಿಂತ ವಿಭಿನ್ನ ರೂಪದಲ್ಲಿದೆ. ಇದನ್ನು ಒಂದು ಕಥೆಯ ರೂಪದಲ್ಲಿ ಬರೆಯಲಾಗಿದ್ದು, ಇದು ಯಾವುದೇ ಪ್ರವಾದನಾ ದೈವೋಕ್ತಿಗಳನ್ನು ಒಳಗೊಂಡಿಲ್ಲ. ಅಶ್ಶೂರ್ಯರ ರಾಜಧಾನಿಯಾದ ನಿನವೆಗೆ ಹೋಗಿ, ನಿನವೆಯವರಿಗೆ ಬರಲಿರುವ ದೇವರ ನ್ಯಾಯತೀರ್ಪಿನ ಕುರಿತು ಎಚ್ಚರಿಸಲು ಹೇಗೆ ದೇವರು ಯೋನನನ್ನು ಕರೆದನೆಂಬುದನ್ನು ಇದು ತಿಳಿಸುತ್ತದೆ.

ಯೋನನು ಕರೆಯನ್ನು ಒಪ್ಪುವುದಿಲ್ಲ, ಬದಲಾಗಿ ಈ ಆಜ್ಞೆಯಿಂದ ತಪ್ಪಿಸಿಕೊಂಡು ದೂರ ಹೋಗಲು ಪ್ರಯತ್ನಿಸುತ್ತಾನೆ. ಆತನು ದೊಡ್ಡ ಮೀನಿನ ಹೊಟ್ಟೆಯೊಳಗೆ ಇರುವಾಗಲೂ ದೇವರ ಆತನನ್ನು ಗದರಿಸುತ್ತಾನೆ. ಹೀಗೆ ಕೊನೆಗೆ ಆತನು ನಿನವೆಗೆ ಹೋಗುತ್ತಾನೆ. ಅಲ್ಲಿನ ಜನರು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಂಡಾಗ ದೇವರು ಅವರನ್ನು ಶಿಕ್ಷಿಸದಿರಲು ನಿರ್ಧರಿಸುತ್ತಾನೆ. ಇದು ಯೋನನಿಗೆ ಇರುಸುಮುರುಸಾಗಿ ಆತನು ದೇವರನ್ನು ದೂರಲು ಪ್ರಾರಂಭಿಸುತ್ತಾನೆ. ಪುನಃ ದೇವರು ಆತನನ್ನು ಗದರಿಸುತ್ತಾನೆ.

ಯೋನನ ಪುಸ್ತಕ ಬರೆಯಲ್ಪಟ್ಟ ಸಮಯ ನಿರ್ಧರಿಸುವುದು ಕಷ್ಟ. ಇದು ಕ್ರಿ.ಪೂ. ಎಂಟನೇ ಶತಮಾನದ ಕೊನೆಯಲ್ಲಿ ಬರೆಯಲ್ಪಟ್ಟಿರಬಹುದೆಂದು ಅನೇಕ ಪಂಡಿತರು ಯೋಚಿಸುತ್ತಾರೆ. ಬಾಬಿಲೋನಿಯನ್ನರು ಅಶ್ಶೂರ್ಯವನ್ನು ಜಯಿಸಿದಾಗ ಕ್ರಿ.ಪೂ. 612 ರಲ್ಲಿ ಅಂತಿಮವಾಗಿ ನಿನವೆಯು ನಾಶವಾಗುತ್ತದೆ.

ಈ ಪುಸ್ತಕವು ದೇವರ ಪ್ರೀತಿ ಮತ್ತು ಕಾಳಜಿಯನ್ನು ತೋರಿಸುತ್ತದೆ. ಆತನು ಶಿಕ್ಷಿಸಿ ನಾಶಮಾಡುವುದಕ್ಕಿಂತ ಕ್ಷಮಿಸಲು ಮತ್ತು ರಕ್ಷಿಸಲು ಮನಸ್ಸುಳ್ಳವನಾಗಿದ್ದಾನೆ.

## ಮೀಕನು

ಮೀಕನು ಯೆಶಾಯ, ಆಮೋಸ, ಹೋಶೇಯರಂತೆ ಕ್ರಿ.ಪೂ. ಎಂಟನೇ ಶತಮಾನದ ಕೊನೆಯಲ್ಲಿ ಬದುಕಿದನು. ಈತನು ಯೆಶಾಯನ ಶಿಷ್ಯನೂ ಆಗಿದ್ದಿರಬಹುದು, ಯಾಕೆಂದರೆ ಇವರಿಬ್ಬರ ಬರವಣಿಗೆಯ ಶೈಲಿಯು ಒಂದೇ ರೀತಿಯಿದೆ.

ಈತನು ಯೆಹೂದದ ಉತ್ತರ ರಾಜ್ಯದಲ್ಲಿ ಸೇವೆ ಮಾಡಿದನು, ಆದರೆ ಇಸ್ರಾಯೇಲ್ ಮತ್ತು ಯೆಹೂದ ಎರಡಕ್ಕೂ ಪ್ರವಾದಿಸುತ್ತಾನೆ. ಆಮೋಸನಂತೆ ಈತನೂ ಅರಸರು, ಯಾಜಕರು ಮತ್ತು ಪ್ರವಾದಿಗಳನ್ನು ಗುರಿಯಾಗಿಸುತ್ತಾನೆ. ಆರ್ಥಿಕ ಮತ್ತು ಧಾರ್ಮಿಕ ಮೋಸದ ಮೂಲಕ ಬಡವರನ್ನು ಮತ್ತು ಗತಿಹೀನರನ್ನು ಶೋಷಿಸುವುದಕ್ಕಾಗಿ ಅವರನ್ನು ಖಂಡಿಸುತ್ತಾನೆ (ದೂಷಿಸುತ್ತಾನೆ). ದೇವರ ನ್ಯಾಯತೀರ್ಪು ಸಮಾರ್ಯ ಮತ್ತು ಯೆರೂಸಲೇಮಿನ ಮೇಲೂ ಬರಲಿರುವದು ಎಂದನು.

ಆದರೆ ಮೀಕನು ನಿರೀಕ್ಷೆಯ ಒಂದು ಸಂದೇಶ ಸಹ ಸಾರುತ್ತಾನೆ. ದಾವೀದನ ಕುಲದ ಒಬ್ಬ ಅರಸನ ಮೂಲಕ ದೇವರು ಇಡೀ ಜಗತ್ತಿಗೆ ಸಮಾಧಾನವನ್ನು ತರುವನೆಂಬುದಾಗಿ ಆತನು ವಾಗ್ದಾನ ಮಾಡುತ್ತಾನೆ.

ಮೀಕನ ಪುಸ್ತಕವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು:

1. ಇಸ್ರಾಯೇಲ್ ಮತ್ತು ಯೆಹೂದಕ್ಕೆ ವಿರೋಧವಾದ ನ್ಯಾಯತೀರ್ಪು (ಅಧ್ಯಾಯ 1-3).
2. ಇಸ್ರಾಯೇಲ್ ಮತ್ತು ಯೆಹೂದಕ್ಕೆ ನಿರೀಕ್ಷೆ (ಅಧ್ಯಾಯ 4-5)
3. ಇಸ್ರಾಯೇಲಿಗೆ ವಿರೋಧವಾಗಿ ದೇವರ ವಾದ (ಅಧ್ಯಾಯ 6)
4. ದುಃಖವು ಜಯವಾಗಿ ಮಾರ್ಪಡುವದು (ಅಧ್ಯಾಯ 7)

## ನಹೂಮನು

ಈ ಪುಸ್ತಕವು ಅಶ್ಶೂರ್ಯರ ರಾಜಧಾನಿಯಾದ ನಿನವೆಯ ನ್ಯಾಯತೀರ್ಪು ಮತ್ತು ಪತನದ ಕುರಿತ ಒಂದು ಪದ್ಯವಾಗಿದೆ. ಇದು ಕ್ರಿ.ಪೂ. 612 ರಲ್ಲಿ ಸಂಭವಿಸುತ್ತದೆ. ಪ್ರವಾದಿಯ ಹೆಸರಿನ ಅರ್ಥ “ಆಧರಿಸುವವನು” ಎಂದಾಗಿದೆ, ಮತ್ತು ನಿಜವಾಗಲೂ

ಆತನು ಅಶ್ಶೂರ್ಯರ ಭಯದಲ್ಲಿ ವಾಸಿಸುತ್ತಿದ್ದ ಯೆಹೂದ ರಾಜ್ಯದ ಜನರನ್ನು ಆತನು ಆಧರಿಸುತ್ತಾನೆ. ಬಹುಶಃ ನಹೂಮನು ಕ್ರಿ.ಪೂ. ಏಳನೇ ಶತಮಾನದ ಎರಡನೇ ಭಾಗದಲ್ಲಿ ಯೆಹೂದದಲ್ಲಿ ಸೇವೆ ಮಾಡಿರಬಹುದು.

## ಹಬಕ್ಕೂಕನು

ಈ ಪುಸ್ತಕವು ಉಳಿದ ಪ್ರವಾದನಾ ಪುಸ್ತಕಗಳಿಗಿಂತ ವಿಭಿನ್ನವಾಗಿದೆ. ಇದು ಯಾವುದೇ ದೈವೋಕ್ತಿಗಳನ್ನು ಒಳಗೊಂಡಿಲ್ಲ. ಬದಲಾಗಿ ಪ್ರವಾದಿಯಾದ ಹಬಕ್ಕೂಕ ಮತ್ತು ದೇವರ ನಡುವಿನ ಸಂಭಾಷಣೆಯನ್ನು ಇದು ಒಳಗೊಂಡಿದೆ. ಹಬಕ್ಕೂಕನು ಕ್ರಿ.ಪೂ. ಏಳನೇ ಶತಮಾನದ ಕೊನೆಯಲ್ಲಿ ಯೆಹೂದ ರಾಜ್ಯದಲ್ಲಿ ಸೇವೆ ಮಾಡಿದನು. ಈತನು ಯೆರೆಮೀಯನ ಸಮಕಾಲೀನನು, ಆದರೆ ಈತನ ಬಗ್ಗೆ ಹೆಚ್ಚೇನು ನಮಗೆ ಗೊತ್ತಿಲ್ಲ.

ಹಬಕ್ಕೂಕ ಪುಸ್ತಕವನ್ನು ಈ ರೀತಿ ರಚನೆ ಮಾಡಬಹುದು:

1. ಹಬಕ್ಕೂಕನ ಮೊದಲ ದೂರು: ಯಾಕೆ ದೇವರು ಯೆಹೂದದ ದುಷ್ಟತನವನ್ನು ಶಿಕ್ಷಿಸುವುದಿಲ್ಲ? (1:2-4).
2. ದೇವರ ಉತ್ತರ: ಬಾಬಿಲೋನಿನವರು ಯೆಹೂದವನ್ನು ಶಿಕ್ಷಿಸುವರು (1:5-11).
3. ಹಬಕ್ಕೂಕನ ಎರಡನೇ ದೂರು: ನ್ಯಾಯವಂತನಾದ ದೇವರು ಬಾಬಿಲೋನಿನವರಿಗಿಂತಲೂ ನೀತಿವಂತರಾದ ಜನರನ್ನು ಶಿಕ್ಷಿಸಲು ಹೇಗೆ ತಾನೇ ದುಷ್ಟ ಬಾಬಿಲೋನನ್ನು ಬಳಸಿಕೊಳ್ಳಲು ಸಾಧ್ಯ? (1:12-2:1).
4. ದೇವರ ಉತ್ತರ: ಬಾಬಿಲೋನು ಶಿಕ್ಷಿಸಲ್ಪಡುವದು, ಮತ್ತು ನಂಬಿಕೆಗೆ ಪ್ರತಿಫಲವಾಗುವದು (2:2-20).
5. ಹಬಕ್ಕೂಕನ ಪ್ರಾರ್ಥನೆ: ಎಲ್ಲವನ್ನು ನಿಯಂತ್ರಣದಲ್ಲಿಟ್ಟುಕೊಂಡ ದೇವರನ್ನು ಆತನು ಸ್ತುತಿಸುತ್ತಾನೆ (ಅಧ್ಯಾಯ 3).

## ಚೆಫನ್ಯನು

ಚೆಫನ್ಯನು ರಾಜ ಸಂಕುಲದವನಾಗಿದ್ದು ತನ್ನ ಸಂಬಂಧಿ ಅರಸನಾದ ಯೋಷೀಯನ ಆಳ್ವಿಕೆಯ ಅವಧಿಯಲ್ಲಿ ಯೆಹೂದ ರಾಜ್ಯದಲ್ಲಿ ಸೇವೆ ಮಾಡಿದನು (ಕ್ರಿ.ಪೂ. ಏಳನೇ ಶತಮಾನದ ಎರಡನೇ ಭಾಗದಲ್ಲಿ). ಈತನು ಹಬಕ್ಕೂಕನ ಸಮಕಾಲೀನನು.

ಯೆಹೂದಕ್ಕೆ ವಿರೋಧವಾಗಿ ದೇವರು ತರಲಿರುವ ನ್ಯಾಯತೀರ್ಪಿನ ಕುರಿತಾಗಿ ಚೆಫನ್ಯನು ಪ್ರವಾದಿಸಿದನು. ಈತನ ಮುಖ್ಯ ವಿಷಯ ವಸ್ತು ಯೆಹೋವನ ಆಗಮನ, ದೇವರು ಜನಾಂಗಗಳನ್ನು ಕಠಿಣವಾಗಿ ಶಿಕ್ಷಿಸುವುದಾಗಿದೆ. ಅಲ್ಲದೆ ದೇವರೆಡೆಗೆ ಬೆನ್ನು ತಿರುಗಿಸಿದ ಯೆಹೂದವು ಸಹ ಶಿಕ್ಷಿಸಲ್ಪಡುವುದು. ಇದು ತುಂಬ ಬಲವಾದ ಮತ್ತು ವರ್ಣ ಚಿತ್ರದ ಭಾಷೆಯಲ್ಲಿ ವರ್ಣಿಸಲ್ಪಟ್ಟಿದೆ. ಆದರೆ ಯೆಹೋವನ ದಿನವು ಉಳಿದವರಿಗೆ, ಅಂದರೆ ದೇವರಿಗೆ ನಂಬಿಗಸ್ತರಾಗಿ ಉಳಿದವರಿಗಾಗಿನ ದಿನವಾಗಿದೆ. ಅವರು ಮರುಸ್ಥಾಪಿಸಲ್ಪಡುವರು, ಆಗ ಯೆರೂಸಲೇಮ್ ಪಟ್ಟಣದಲ್ಲಿ ಉಲ್ಲಾಸ ಮತ್ತು ಆನಂದವಾಗುವದು. ರಾಷ್ಟ್ರವು/ಜನಾಂಗವು ಉದ್ಧರಿಸಲ್ಪಡುವದು (3:9-20).

## ಹಗ್ಗಾಯನು

ಬಾಬಿಲೋನಿನಲ್ಲಿನ ಸೆರೆಯ ತರುವಾಯ ಹಳೇ ಒಡಂಬಡಿಕೆಯ ಮೂವರು ಪ್ರವಾದಿಗಳು ಸೇವೆ ಸಲ್ಲಿಸಿದರು. ಅವರಲ್ಲಿ ಹಗ್ಗಾಯನು ಮೊದಲಿಗನು. ಆತನ ಪುಸ್ತಕವು ಕ್ರಿ.ಪೂ. 520 ರಲ್ಲಿ ನಾಲ್ಕು ತಿಂಗಳ ಅವಧಿಯಲ್ಲಿ ನಾಲ್ಕು ವಿಭಿನ್ನ ಸಂದರ್ಭಗಳಲ್ಲಿ ನುಡಿಯಲಾದ ನಾಲ್ಕು ಮಾತುಗಳನ್ನು ಒಳಗೊಂಡಿದೆ.

1. (ಅಮವಾಸ್ಯೆ ಹಬ್ಬದಂದು ನುಡಿದದ್ದು) ದೇವಾಲಯವನ್ನು ಕಟ್ಟಲು ಕರೆ (ಅಧ್ಯಾಯ 1). ದೇವಾಲಯವನ್ನು ಮರುಸ್ಥಾಪಿಸುವ ಕಾರ್ಯವನ್ನು ಪುನಃ ಪ್ರಾರಂಭಿಸಬೇಕಿದೆ. ಆಗ ದೇವರ ಆಶೀರ್ವಾದವು ಜನರಿಗೆ ಬರುವುದು.
2. ಹೊಸ ದೇವಾಲಯದ ವಾಗ್ದಾನ ಮಾಡಲ್ಪಟ್ಟ ಮಹಿಮೆಯ ಕುರಿತ (ಅದೇ ವರ್ಷದ ಕೊನೆಯಲ್ಲಿ ದೇವದರ್ಶನ ಗುಡಾರದ ಹಬ್ಬದಲ್ಲಿ ನುಡಿದದ್ದು) ನುಡಿ (2:2-10).
3. ಅಪವಿತ್ರ ಜನರ ಕುರಿತ ನುಡಿ (ಮೊದಲ ಎರಡು ಮಾತುಗಳು ಅದೇ ವರ್ಷದ ಒಂಭತ್ತನೇ ತಿಂಗಳಿನ ಇಪ್ಪತ್ತನಾಲ್ಕನೇ ದಿನದಂದು ನುಡಿಯಲ್ಪಟ್ಟಿವೆ). ಅವರು ಶುದ್ಧೀಕರಿಸಲ್ಪಡುವರು ಮತ್ತು ಆಶೀರ್ವಧಿಸಲ್ಪಡುವರು (2:11-20). ಈಗ ದೇವಾಲಯವನ್ನು ಕಟ್ಟುವ ಕಾರ್ಯವನ್ನು ಪುನರಾರಂಭಿಸಿದಾಗ ದೇವರ ಆಶೀರ್ವಾದವು ಆತನ ಜನರ ಮೇಲೆ ಬರುವದು.
4. ಜೆರುಬ್ಬಾಬೆಲನಿಗೆ ದೇವರ ವಾಗ್ದಾನ (ಕೊನೆ ಎರಡು ನುಡಿಗಳು ಅದೇ ವರ್ಷದ ಒಂಭತ್ತನೇ ತಿಂಗಳಿನ ಇಪ್ಪತ್ತನಾಲ್ಕನೇ ದಿನದಲ್ಲಿ ನುಡಿಯಲ್ಪಟ್ಟಿವೆ) (2:21-24). ಜೆರುಬ್ಬಾಬೆಲನು ಬಾಬಿಲೋನಿನ ಸೆರೆಯಿಂದ ಯೆರೂಸಲೇಮಿಗೆ ಹಿಂತಿರುಗಿದ ಯೆಹೂದ್ಯರಿಗೆ ಒಬ್ಬ ನಾಯಕನಾಗಿದ್ದನು. ಆತನು ದಾವೀದನ ಕುಲದವನಾಗಿದ್ದು ಯೆಹೂದದ ಮೇಲೆ ಪರ್ಷಿಯನ್ ರಾಜ್ಯಪಾಲನಾಗಿದ್ದನು.

## ಜೆಕರ್ಯನು

ಒಂದು ಯಾಜಕ ಕುಟುಂಬದಿಂದ ಬಂದ ಜೆಕರ್ಯನು ಹಗ್ಗಾಯನ ಅವಧಿಯಲ್ಲೇ ಯೆರೂಸಲೇಮಿನಲ್ಲಿ ಸೇವೆ ಮಾಡಿದನು (ಕ್ರಿ.ಪೂ. ಆರನೇ ಶತಮಾನದ ಕೊನೇ ದಶಕದಲ್ಲಿ). ಈತನು ಸಹ ದೇವಾಲಯವನ್ನು ಪುನಃ ಕಟ್ಟುವ ಕಾರ್ಯದಲ್ಲಿ ತೊಡಗಿಸಿಕೊಂಡನು. ಅದು ಕ್ರಿ.ಪೂ. 516 ರಲ್ಲಿ ಪೂರ್ಣಗೊಂಡಿತು.

ಪುಸ್ತಕದ ಮೊದಲ ಭಾಗವು (ಅಧ್ಯಾಯ 1-8) ಯೆರೂಸಲೇಮಿನ ಉದ್ಧಾರ ಮತ್ತು ದೇವಾಲಯವನ್ನು ಮರುಸ್ಥಾಪಿಸುವ ಕುರಿತ ಅನೇಕ ದರ್ಶನಗಳನ್ನು ಒಳಗೊಂಡಿದೆ.

ಎರಡನೇ ಭಾಗವು (ಅಧ್ಯಾಯ 9-14) ಮುಂದೆ ಬರಲಿರುವ ಮೆಸ್ಸೀಯನ ಕುರತ ಎರಡು ಪ್ರವಾದನಾ ದೈವೋಕ್ತಿಗಳನ್ನು ಒಳಗೊಂಡಿದೆ. ಯೇಸುವಿನ ಜೀವನದ ಕುರಿತು ಸುವಾರ್ತೆಗಳಲ್ಲಿ ಬಳಸಲಾದ ಅನೇಕ ವಾಕ್ಯಭಾಗಗಳನ್ನು ನಾವಿಲ್ಲಿ ಕಾಣಬಹುದು. "ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ" ಎಂಬ ಹೇಳಿಕೆಯನ್ನು 9:9 ರಲ್ಲಿ ಕಾಣಬಹುದು (ಮತ್ತಾಯ 26:15 ರೊಂದಿಗೆ ಹೋಲಿಸಿರಿ). 11:13 ರಲ್ಲಿ ನಾವು "ಮೂವತ್ತು ತೊಲೆ ಬೆಳ್ಳಿಯನ್ನು" ಕಾಣಬಹುದು.

# ಮಲಾಕಿಯನು

ಮಲಾಕಿಯು ಕ್ರಿ.ಪೂ ಐದನೇ ಶತಮಾನದಲ್ಲಿ ಜೀವಿಸಿದ್ದನು. ಈ ಸಮಯದಲ್ಲಿ ಯೆಹೂದ್ಯರು ಬಾಬಿಲೋನಿನ ಸೆರೆಯಿಂದ ಹಿಂತಿರುಗಿ ಸುಮಾರು ನೂರು ವರ್ಷ ಕಳೆದಿತ್ತು.

ಈ ಪುಸ್ತಕವು ಸಂಭಾಷಣಾ ರೂಪದಲ್ಲಿ ಬರೆಯಲ್ಪಟ್ಟಿದೆ. ಪ್ರವಾದಿಯು ಜನರ ಪ್ರಶ್ನೆಗಳನ್ನು ದೇವರ ಮುಂದೆ ತಂದು ಆನಂತರ ದೇವರ ಉತ್ತರವನ್ನು ಜನರಿಗೆ ತಿಳಿಸುತ್ತಾನೆ.

ಆ ದಿನಗಳು ಕಷ್ಟಕರವಾದವುಗಳು. ಜನರು ಬಾಧೆಪಡುತ್ತಿದ್ದರು ಮತ್ತು ದೇವರೊಂದಿಗೆ ಅವರು ನಿರಾಶರಾಗಿದ್ದರು. ಕ್ರಮೇಣವಾಗಿ ಜನರು ಮಾತ್ರವಲ್ಲದೆ ಯಾಜಕ ಸಹ ದೇವರಲ್ಲಿನ ನಂಬಿಕೆಯನ್ನು ಕಳೆದುಕೊಳ್ಳತೊಡಗಿದರು. ಪ್ರವಾದಿಯು ಅವರಿಗೆ ಪ್ರೀತಿಯನ್ನು ನೆನಪಿಸುತ್ತಾನೆ. ಆತನು ದೇವರನ್ನು ಗೌರವಿಸಿ ಆತನ ವಿಧಿಗಳನ್ನು ಪಾಲಿಸಬೇಕೆಂದು ಯಾಜಕರಿಗೆ ಮತ್ತು ಜನರಿಗೆ ಒತ್ತಾಯಿಸುತ್ತಾನೆ. ಅವರು ದೇವಾಲಯಕ್ಕೆ ಪೂರ್ಣ ದಶಮಾಂಶವನ್ನು ತರಬೇಕು ಮತ್ತು ನೀತಿಯುತ ಜೀವಿತವನ್ನು ಜೀವಿಸಬೇಕು. ಆಗ ಖಂಡಿತವಾಗಿ ದೇವರು ಅವರನ್ನು ಆಶೀರ್ವದಿಸುವನು. ತನಗಾಗಿ ಮಾರ್ಗವನ್ನು ಸಿದ್ಧಪಡಿಸುವುದಕ್ಕಾಗಿ ದೇವರು ತನ್ನ ಸಂದೇಶಕರನ್ನು ಕಳಿಸುವನು (3:1). ಹಾಗಾಗಿ ಜನರು ನಿರೀಕ್ಷೆಯಿಂದಿರಬೇಕು ಮತ್ತು ಮೆಸ್ಸೀಯನು ಬಂದು ಪಾಪಿಗಳಿಗೆ ನ್ಯಾಯತೀರ್ಪನ್ನು ಮತ್ತು ಆತನ ನಾಮವನ್ನು ಗೌರವಿಸುವವರಿಗೆ ಸ್ವಸ್ಥತೆಯನ್ನು ಕೊಡುವ ದಿನಕ್ಕಾಗಿ ಕಾಯಬೇಕು: "*ನಿನ್ನ ನಾಮದಲ್ಲಿ ಭಯಭಕ್ತಿಯಿಟ್ಟಿರುವ ನಿಮಗೋ ದೇವರ ಧರ್ಮವೆಂಬ ಸೂರ್ಯನು ಸ್ವಸ್ಥತೆಯನ್ನುಂಟುಮಾಡುವ ಕಿರಣಗಳುಳ್ಳವನಾಗಿ ಮೂಡುವನು*" (4:2).

ಈ ರೀತಿಯಲ್ಲಿ ದೇವರ ಮೆಸ್ಸೀಯನ ಬರೋಣಕ್ಕಾಗಿ ಕಾದಿರುವ ಇಸ್ರಾಯೇಲ್ ಜನರೊಂದಿಗೆ ಹಳೇ ಒಡಂಬಡಿಕೆಯು ಮುಕ್ತಾಯವಾಗುತ್ತದೆ !

## ಹಳೇ ಒಡಂಬಡಿಕೆ ಪ್ರವಾದನಾ ಪುಸ್ತಕಗಳಿಗೆ ಪ್ರಶ್ನೆಗಳು

1. ದೊಡ್ಡ ಪ್ರವಾದಿಗಳು ಯಾರು? ಅವರನ್ನು ಯಾಕೆ ಹಾಗೆ ಕರೆಯಲಾಗಿದೆ?
2. ಸಣ್ಣ ಪ್ರವಾದಿಗಳು ಯಾರು? ಅವರನ್ನು ಯಾಕೆ ಹಾಗೆ ಕರೆಯಲಾಗಿದೆ?
3. ಹಳೇ ಒಡಂಬಡಿಕೆಯ ಈ ವಿಭಾಗದಲ್ಲಿನ ಒಂದು ಪುಸ್ತಕವು ನಿಜವಾಗಿ ಪ್ರವಾದಿಯ ಹೆಸರನ್ನು ಹೊಂದಿರುವುದಿಲ್ಲ. ಆ ಪುಸ್ತಕ ಯಾವುದು? ನಿಮ್ಮ ಕನ್ನಡ ಸತ್ಯವೇದಗಳಲ್ಲಿ ಯಾಕೆ ಇದಕ್ಕೆ ಯೆರಿಮೀಯ ಹೆಸರು ಸೇರಿಕೊಂಡಿದೆ? ಯೋಚಿಸಿ ಮತ್ತು ಚರ್ಚಿಸಿರಿ.
4. ಹಳೇ ಒಡಂಬಂಡಿಕೆಯ ಈ ವಿಭಾಗದಲ್ಲಿ 16 ಪುಸ್ತಗಳಿಗೆ 16 ಪ್ರವಾದಿಗಳ ಹೆಸರನ್ನು ಕೊಡಲಾಗಿದೆ (ಒಟ್ಟು 17 ರಲ್ಲಿ). ಉತ್ತರ ಬರೆಯು ಮುನ್ನ ನಿಮ್ಮ ಗುಂಪಿನಲ್ಲಿನ ಸದಸ್ಯನೊಂದಿಗೆ ಚರ್ಚಿಸಿರಿ.
   ಅ. ಇಸ್ರಾಯೇಲಿನ ಉತ್ತರ ರಾಜ್ಯದಲ್ಲಿ ಕೇವಲ ಇಬ್ಬರು ಸೇವೆ ಸಲ್ಲಿಸಿದರು. ಅವರು ಯಾರು?
   ಆ. ಬಾಬಿಲೋನಿನ ಸೆರೆಗಿಂತ ಮೊದಲು ಯೆಹೂದದ ದಕ್ಷಿಣ ರಾಜ್ಯದಲ್ಲಿ ಆರು ಮಂದಿ (ಬಹುಶಃ 7) ಸೇವೆ ಸಲ್ಲಿಸಿದರು. ಅವರು ಯಾರು?
   ಇ. ಇಬ್ಬರು ಉತ್ತರದಲ್ಲೋ ದಕ್ಷಿಣದಲ್ಲೋ ಸೇವೆ ಸಲ್ಲಿಸಿದರೆಂದು ನಮಗೆ ಗೊತ್ತಿಲ್ಲ. ಅವರಾರು?

ಈ. ಬಾಬಿಲೋನಿನ ಸೆರೆಯ ವೇಳೆ ಬಾಬಿಲೋನಿನಲ್ಲಿ ಇಬ್ಬರು ಸೇವೆ ಮಾಡಿದರು. ಅವರು ಯಾರಾಗಿದ್ದರು?

ಉ. ಸೆರೆಯ ನಂತರ ಅವರಲ್ಲಿ ಮೂವರು ಯೆರೂಸಲೇಮಿನಲ್ಲಿ ಸೇವೆ ಮಾಡಿದರು. ಅವರು ಯಾರು?

ಊ. ಒಂದು ದೊಡ್ಡ ಪಟ್ಟಣದ ಜನರ ಬಳಿ ಸೇವೆ ಮಾಡಲು ಅವರಲ್ಲೊಬ್ಬರು ಒಂದು ದೂರ ದೇಶಕ್ಕೆ ಹೊರಟು ಹೋದರು. ಅವರಾರು?

5. ಈ ಪ್ರವಾದನಾ ಪುಸ್ತಕಗಳಲ್ಲಿ ಐದು ಬರಲಿರುವ ಮೆಸ್ಸೀಯನ ಕುರಿತ ಸ್ಪಷ್ಟವಾದ ಪ್ರವಾದನೆ ಹೊಂದಿವೆ. ಅವು ಯಾವುವು? ಚರ್ಚಿಸಿ.

6. ಹೃದಯದ ಪರಿವರ್ತನೆಯ ಮೂಲಕ ಅಂತರ್ಯದ ನವೀಕರಣದ ಬಗ್ಗೆ ಪ್ರವಾದಿಸಿದ ಪ್ರವಾದಿ ಯಾರು? ಯೋಚಿಸಿ ಮತ್ತು ಚರ್ಚಿಸಿ.

7. ಜನರ ಮೇಲೆ ದೇವರು ತನ್ನ ಆತ್ಮವನ್ನು ಸುರಿಸುವುದರ ಬಗ್ಗೆ ಯಾವ ಪ್ರವಾದಿ ಪ್ರವಾದಿಸಿದನು?

8. ಈ ಪ್ರವಾದನಾ ಪುಸ್ತಕಗಳ ಪ್ರಾಮುಖ್ಯ ಸಂದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ. ಉತ್ತರ ಬರೆಯುವ ಮುನ್ನ ನಿಮ್ಮ ಗುಂಪಿನ ಸದಸ್ಯರೊಂದಿಗೆ ಚರ್ಚಿಸಿರಿ.

ಅ. ಆಮೋಸ

ಆ. ಚೆಫನ್ಯ

ಇ. ಹೋಶೇಯ

ಈ. ಮಲಾಕಿ

ಉ. ಯೋವೇಲ

9. ಹಳೇ ಒಡಂಬಡಿಕೆಯ ಈ ವಿಭಾಗದಲ್ಲಿನ 17 ಪುಸ್ತಕಗಳ ಬಗ್ಗೆ 10 ಪ್ರಶ್ನೆಗಳನ್ನು ಬರೆಯಿರಿ. ಉತ್ತರ ಬರೆಯಲು ಸ್ನೇಹಿತರೊಬ್ಬರ ಬಳಿ ಕೇಳಿಕೊಳ್ಳಿರಿ. ಅಂತಿಮವಾಗಿ ಅವರ ಸರಿಯಾದ ಉತ್ತರಗಳಿಗನುಸಾರವಾಗಿ ಪ್ರತಿ ಉತ್ತರಕ್ಕೆ 10 ಅಂಕ ಕೊಡಿರಿ. ಉತ್ತರವು ಭಾಗಶಃ ಸರಿಯಾಗಿದ್ದರೆ ಕಡಿಮೆ ಅಂಕ ಕೊಡಿರಿ. 50-69 ಅಂಕಗಳಿಗೆ ಉತ್ತೀರ್ಣತೆ ಕೊಡಿರಿ. 70-100 ಅಂಕಗಳಿಗೆ ಉನ್ನತ ಶ್ರೇಣಿ ಕೊಡಿರಿ.

# ಹೊಸ ಒಡಂಬಡಿಕೆ

## ಭಾಗ 1: ಸುವಾರ್ತೆಗಳು ಮತ್ತು ಅಪೊಸ್ತಲರ ಕೃತ್ಯಗಳು

ಹೊಸ ಒಡಂಬಡಿಕೆಯಲ್ಲಿ ಐದು ಐತಿಹಾಸಿಕ ಪುಸ್ತಕಗಳಿವೆ. ಮೊದಲು ಕಂಡುಬರುವ ನಾಲ್ಕು ಸುವಾರ್ತೆಗಳು ಯೇಸು ಕ್ರಿಸ್ತನ ಜೀವನ, ಸೇವೆ, ಮರಣ ಮತ್ತು ಪುನರುತ್ಥಾನದ ಬಗ್ಗೆ ನಮಗೆ ತಿಳಿಸುತ್ತವೆ. ಅದರಲ್ಲಿ ಮೂರು- ಮತ್ತಾಯ, ಮಾರ್ಕ ಮತ್ತು ಲೂಕ ಒಂದೇ ರೀತಿಯ ರಚನೆ ಮತ್ತು ಅನೇಕ ಕಥೆಗಳು ಮತ್ತು ಸಮಾನ ಬೋಧನೆಗಳನ್ನು ಒಳಗೊಂಡಿವೆ. ಹಾಗಾಗಿ ಸಾಮಾನ್ಯವಾಗಿ ಅವನ್ನು "ಸಮಾನ ದೃಷ್ಟಿಯ ಸುವಾರ್ತೆಗಳು" ಎಂದು ಕರೆಯಲಾಗಿದೆ. ಇದರರ್ಥ ಅವು "ಒಟ್ಟಾಗಿ ನೋಡುತ್ತವೆ" ಅಥವಾ "ಒಂದೇ ರೀತಿಯ ಅಭಿಪ್ರಾಯ" ಹೊಂದಿವೆ. ಯೋಹಾನನ ಸುವಾರ್ತೆಯು ಸ್ವಲ್ಪ ವಿಭಿನ್ನವಾಗಿದ್ದು, ಹೆಚ್ಚಾಗಿ ತಾತ್ವಿಕವಾಗಿದೆ. ನಾಲ್ಕು ಸುವಾರ್ತೆಗಳ ನಡುವಿನ ವ್ಯತ್ಯಾಸಗಳಿಗೆ ಕಾರಣವೇನೆಂದರೆ ಅವು ವಿಭಿನ್ನವಾದ ದೃಷ್ಟಿಕೋನದಿಂದ ಮತ್ತು ವಿಭಿನ್ನ ಗುಂಪಿನ ಓದುಗರನ್ನು ಉದ್ದೇಶಿಸಿ ಬರೆಯಲ್ಪಟ್ಟಿವೆ.

ಅನಂತರ ಅಪೊಸ್ತಲರ ಕೃತ್ಯಗಳ ಪುಸ್ತಕವು ಬರುತ್ತದೆ. ಇದು ಆದಿಸಭೆ ಮತ್ತು ಯೇಸು ಕ್ರಿಸ್ತನ ಕುರಿತ ಸುವಾರ್ತೆಯು ಹೇಗೆ ಪ್ಯಾಲೆಸ್ಟೈನಿನ ಯೆರೂಸಲೇಮಿನಿಂದ ಮಹಾ ರೋಮನ್ ಸಾಮ್ರಾಜ್ಯದ ರಾಜಧಾನಿಯಾದ ರೋಮಿನವರಗೆ ಹೇಗೆ ಹರಡಿತೆಂಬುದನ್ನು ವಿವರಿಸುತ್ತದೆ. ಪುಸ್ತಕದ ಮೊದಲ ಭಾಗದಲ್ಲಿ ಪೇತ್ರನು ಮುಖ್ಯ ವ್ಯಕ್ತಿಯಾಗಿದ್ದಾನೆ. ಎರಡನೇ ಭಾಗದಲ್ಲಿ ಪೌಲನು ಮುಖ್ಯ ವ್ಯಕ್ತಿಯಾಗಿದ್ದಾನೆ.

## ಮತ್ತಾಯನ ಸುವಾರ್ತೆ

ಈ ಸುವಾರ್ತೆಯ ಗ್ರಂಥಕರ್ತನು ತನ್ನ ಹೆಸರನ್ನು ಬಹಿರಂಗಪಡಿಸಿಲ್ಲ, ಆದರೆ ಇದರ ಗ್ರಂಥಕರ್ತನು ಮತ್ತಾಯನಾಗಿದ್ದಾನೆಂದು ಆದಿ ಸಂಪ್ರದಾಯಗಳು ಹೇಳುತ್ತವೆ. ಈತನು ಒಬ್ಬ ಸುಂಕ ವಸೂಲಿಗಾರನಾಗಿದ್ದು ನಂತರ ಯೇಸುವಿನ ಶಿಷ್ಯರಲ್ಲೊಬ್ಬನಾದನೆಂದು ಸುವಾರ್ತೆಗಳಲ್ಲಿ ತಿಳಿಸಲಾಗಿದೆ.

ಮತ್ತಾಯನು ಯೆಹೂದಿ ಸಂಸ್ಕೃತಿಗೆ ಸೇರಿದ ಜನರಿಗೆ ಬರೆಯುತ್ತಾನೆ. ಆತನು ಬಳಸುವ "ದಾವೀದನ ಕುಮಾರನು" ಎಂಬ ಹೆಸರಿನಿಂದ ಇದು ಸ್ಪಷ್ಟವಾಗುತ್ತದೆ. ಸುಮಾರು ಒಂಭತ್ತು ಬಾರಿ ಕಂಡುಬರುವ ಇದು "ಮೆಸ್ಸೀಯನ" ಹೆಸರಾಗಿದೆ. ಇದನ್ನು ಉಳಿದ ಸುವಾರ್ತೆಗಳಲ್ಲಿ ಅಷ್ಟೇನು ಬಳಸಿಲ್ಲ. ಅಲ್ಲದೆ ಮತ್ತಾಯನು ಸಾಮಾನ್ಯವಾದ "ದೇವರ ರಾಜ್ಯ" ಪದಕ್ಕಿಂತ "ಪರಲೋಕ ರಾಜ್ಯ" ಎಂಬ ಹೇಳಿಕೆ ಬಳಸುತ್ತಾನೆ. ಇದಕ್ಕೆ ಕಾರಣ ದೇವರ ಹೆಸರನ್ನು ಉಚ್ಚರಿಸುವುದು ದೇವದ್ರೋಹವೆಂಬುದಾಗಿ ಪರಿಗಣಿಸಿದ ನಿಮಿತ್ತ ಯೆಹೂದ್ಯರು ಅದನ್ನು ಉಚ್ಚರಿಸುತ್ತಿರಲಿಲ್ಲ, ಉದಾಹರಣೆಗೆ ಅದರ ಬದಲಿಯಾಗಿ ಅವರು "ಪರಲೋಕ" ಎಂಬ ಪದ ಬಳಸಿದರು.

ಯೇಸುವು ಅವರ ಮೆಸ್ಸೀಯನಾಗಿದ್ದಾನೆಂಬುದನ್ನು ತನ್ನ ಯೆಹೂದಿ ಓದುಗರಿಗೆ ಸಾಬೀತುಪಡಿಸುವುದೇ ಮತ್ತಾಯನ ಗುರಿಯಾಗಿತ್ತು. ಹೇಗೆ ಯೇಸು ತನ್ನ ಜೀವಿತ ಮತ್ತು ಸೇವೆಯಲ್ಲಿ ಹಳೇ ಒಡಂಬಡಿಕೆ ಗ್ರಂಥಗಳ ವಾಗ್ದಾನಗಳನ್ನು ನೆರವೇರಿಸಿದನೆಂಬುದನ್ನು ತೋರಿಸುವುದರ ಮೂಲಕ ಇದನ್ನು ಸಾಧಿಸುತ್ತಾನೆ. ಇದನ್ನು ಸಾಬೀತುಪಡಿಸಲು ಮತ್ತಾಯನು ಒಂಭತ್ತು ವಿಶಿಷ್ಟವಾದ ಪಠ್ಯಗಳನ್ನು ಹೊಂದಿದ್ದಾನೆ (ಇವು ಉಳಿದ ಸುವಾರ್ತೆಗಳಲ್ಲಿ ಕಾಣುವುದಿಲ್ಲ): 1:22-23, 2:15,

2:17-18, 2:23, 4:14-16, 8:17, 12:17-21, 13:35 ಮತ್ತು 27:9-10. ಯೇಸುವು ದಾವೀದನ ಕುಲದಿಂದ ಬಂದವನಾಗಿದ್ದಾನೆಂದು ಮತ್ತಾಯನು ಯಾಕೆ ಒತ್ತಿಹೇಳುತ್ತಾನೆಂಬುದಕ್ಕೆ ಇದೂ ಸಹ ಒಂದು ಕಾರಣವಾಗಿದೆ.

ಯೇಸು ಜನರಿಗೆ ಅಥವಾ ಶಿಷ್ಯರಿಗೆ ಬೋಧಿಸಿದ ಐದು ದೊಡ್ಡ ಬೋಧನೆಯ ಸುತ್ತ ಯೇಸುವಿನ ಜೀವನದ ಕುರಿತಾದ ತನ್ನ ಕಥೆಯನ್ನು ಮತ್ತಾಯನು ರಚನೆ ಮಾಡಿರುವ ರೀತಿಯಲ್ಲಿ ಪಂಚಕಾಂಡ ಅಥವಾ ಮೋಶೆಯ ಐದು ಪುಸ್ತಕದೊಂದಿಗಿನ ಯೆಹೂದಿ ಸಂಬಂಧವನ್ನು ಕಾಣಬಹುದು.

1. ಪರ್ವತ ಪ್ರಸಂಗ (ಅಧ್ಯಾಯ 5-7)
2. ಸುವಾರ್ತೆ ಸಾರಲು ಕಳಿಸುವುದಕ್ಕಿಂತ ಮುಂಚೆ ಶಿಷ್ಯರಿಗೆ ಕೊಟ್ಟ ಸಲಹೆಗಳು (ಅಧ್ಯಾಯ 10)
3. ಪರಲೋಕ ರಾಜ್ಯದ ಕುರಿತ ಸಾಮ್ಯಗಳು (ಅಧ್ಯಾಯ 13)
4. ಯೇಸುವನ್ನು ಹಿಂಬಾಲಿಸುವುದು ಎಂದರೇನು ಎನ್ನುವುದರ ನಿರೂಪಣೆ (ಅಧ್ಯಾಯ 18)
5. ಯೇಸುವು ಯೆರೂಸಲೇಮಿನ ನಾಶನ, ಈ ಯುಗದ ಅಂತ್ಯ ಮತ್ತು ಹೊಸ ಯುಗದ ಬರೋಣದ ಕುರಿತಾಗಿ ಮುಂತಿಳಿಸುವುದು (ಅಧ್ಯಾಯ 24-25)

ಮತ್ತಾಯನ ಸುವಾರ್ತೆಯು ಉಳಿದ ಸುವಾರ್ತೆಗಳಲ್ಲಿ ಕಾಣದೆ ಇರುವ ಅನೇಕ ಜನಪ್ರಿಯ ಕಥೆಗಳನ್ನು ಅದರಲ್ಲೂ ವಿಶೇಷವಾಗಿ ಸಾಮ್ಯಗಳನ್ನು ಒಳಗೊಂಡಿದೆ:

- ಜೋಯಿಸರ ಭೇಟಿ (ಅಧ್ಯಾಯ 2)
- ಐಗುಪ್ತಕ್ಕೆ ಪಲಾಯನ (ಅಧ್ಯಾಯ 2)
- ಇಕ್ಕಟ್ಟಾದ ಮತ್ತು ಅಗಲವಾದ ಬಾಗಿಲು (ಅಧ್ಯಾಯ 7)
- ಹೂಳಿಟ್ಟ ದ್ರವ್ಯ ಮತ್ತು ಬೆಲೆಬಾಳುವ ಮುತ್ತಿನ ಸಾಮ್ಯ (ಅಧ್ಯಾಯ 13)
- ಬಲೆಯ ಸಾಮ್ಯ (ಅಧ್ಯಾಯ 13)
- ಕರುಣೆಯಿಲ್ಲದ ಸೇವಕನ ಸಾಮ್ಯ (ಅಧ್ಯಾಯ 18)
- ದ್ರಾಕ್ಷೆತೋಟದಲ್ಲಿ ಕೆಲಸಗಾರರ ಸಾಮ್ಯ (ಅಧ್ಯಾಯ 20)
- ಇಬ್ಬರು ಮಕ್ಕಳ ಸಾಮ್ಯ (ಅಧ್ಯಾಯ 21)
- ಹತ್ತು ಮಂದಿ ಕನ್ಯೆಯರ ಸಾಮ್ಯ (ಅಧ್ಯಾಯ 25)
- ಕುರಿ ಮತ್ತು ಆಡುಗಳ ಸಾಮ್ಯ (ಅಧ್ಯಾಯ 25)

ಪಠ್ಯದಲ್ಲಿ ಎರಡು ಬಾರಿ ಕಂಡುಬಂದಿರುವ "ಅಂದಿನಿಂದ" ಎಂಬ ಹೇಳಿಕೆಗನುಸಾರವಾಗಿ (4:17 ಮತ್ತು 16:21) ಮತ್ತಾಯನ ಸುವಾರ್ತೆಯನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು:

1. ಯೇಸು- ದಾವೀದನ ಕುಮಾರನು- ಪರಿಚಯಿಲ್ಪಟ್ಟದ್ದು (1:1-4:16)
2. ಯೇಸು- ದಾವೀನ ಕುಮಾರನು- ಸೇವೆ ಮಾಡುವದು (4:17-16:20)
3. ಯೇಸು- ದಾವೀದನ ಕುಮಾರನು- ಬಾಧೆಪಡುವದು, ಸಾಯುವದು ಮತ್ತು ಮರಣದಿಂದ ಎದ್ದುಬರುವದು.

# ಮಾರ್ಕನ ಸುವಾರ್ತೆ

ಮಾರ್ಕನದು ಸುವಾರ್ತೆಗಳಲ್ಲೇ ಅತಿ ಚಿಕ್ಕ ಪುಸ್ತಕವಾಗಿದೆ. ಅಲ್ಲದೇ ಇದು ಬಹುಶಃ ಹಳೇಯದಾಗಿದೆ. ಗ್ರಂಥಕರ್ತನು ತನ್ನ ಹೆಸರನ್ನು ತಿಳಿಸುವುದಿಲ್ಲ. ಆದರೆ ಇದನ್ನು ಮಾರ್ಕನೆನಿಸಿಕೊಳ್ಳುವ ಯೋಹಾನನು ಬರೆದಿರಬಹುದೆಂದು ಸಂಪ್ರದಾಯಗಳು ಹೇಳುತ್ತವೆ. ಈತನು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ತಿಳಿಸಲ್ಪಟ್ಟಿದ್ದು, ಈತನು ಬಾರ್‌ನಬನ ಸಂಬಂಧಿಯಾಗಿದ್ದು ಪೌಲನ ಮೊದಲ ಸೇವಾ ಪ್ರಯಾಣದಲ್ಲಿ ಆತನೊಂದಿಗೆ ಸಂಚರಿಸಿದನು. ಈತನು ಅಪೊಸ್ತಲ ಪೇತ್ರನಿಂದ ಪಡಕೊಂಡ ಮಾಹಿತಿಯ ಆಧಾರದ ಮೇಲೆ ತನ್ನ ಕಥೆ ಹೇಳಿರಬಹುದು.

ಆಸಕ್ತಿಕರ ಸಂಗತಿಯೇನೆಂದರೆ ಮಾರ್ಕನ ಸುವಾರ್ತೆಯ ಶೇಕಡ 90% ರಷ್ಟು ವಾಕ್ಯಭಾಗವನ್ನು ಮತ್ತಾಯದಲ್ಲಿ ಮತ್ತು ಶೇಕಡ 50% ಕ್ಕಿಂತ ಹೆಚ್ಚಿನ ವಾಕ್ಯಭಾಗವನ್ನು ಲೂಕನ ಸುವಾರ್ತೆಯಲ್ಲಿ ಕಾಣಬಹುದು. ಮಾರ್ಕನ ಸುವಾರ್ತೆಯಲ್ಲಿನ ಒಂದು ಸಾಮ್ಯವನ್ನು ಉಳಿದ ಯಾವ ಸುವಾರ್ತೆಯಲ್ಲೂ ಕಾಣಲಾಗದು: ಅದು ಬೆಳೆಯುವ ಬೀಜದ ಸಾಮ್ಯ (ಅಧ್ಯಾಯ 4).

ಮಾರ್ಕನ ಸುವಾರ್ತೆಯು ಹೆಚ್ಚಾಗಿ ಯೇಸು ಏನನ್ನು ಮಾಡಿದ್ದಾನೆಂಬುದರ ಮೇಲೆ ಒತ್ತು ಕೊಡತ್ತದೆ. ಕೆಲವೊಮ್ಮೆ ಮತ್ತಾಯನಿಗೆ ತದ್ವಿರುದ್ಧವಾಗಿ "ಕೃತ್ಯಗಳ ಸುವಾರ್ತೆ" ಎಂದು ಕರೆಯಲ್ಪಡುತ್ತದೆ. ಅದನ್ನು "ಮಾತುಗಳ ಸುವಾರ್ತೆ" ಎನ್ನಲಾಗುತ್ತದೆ. ಈ ಸುವಾರ್ತೆಯ ಮೊದಲ ಸ್ವೀಕೃತರು ಬಹುಶಃ ರೋಮಿನಲ್ಲಿನ ಅನ್ಯ ವಿಶ್ವಾಸಿಗಳಿರಬಹುದು. ಆ ನಿಮಿತ್ತ ಯೆಹೂದಿ ಪದ್ಧತಿಗಳನ್ನು ವಿವರಿಸಲಾಗಿದೆ (ಉದಾ. ನೋಡಿ 7:3) ಮತ್ತು ಅರಾಮೈಕ್ ಹೇಳಿಕೆಗಳನ್ನು ಗ್ರೀಕಿಗೆ ಭಾಷಾಂತರಿಸಲಾಗಿದೆ (ಉದಾ. ನೋಡಿ 3:17, 5:41 ಮತ್ತು 7:34). ಅರಾಮೈಕ್ ಭಾಷೆಯನ್ನು ಆ ಸಮಯದಲ್ಲಿನ ಯೆಹೂದ್ಯರ ಪವಿತ್ರ ದೇಶದಲ್ಲಿ ಮಾತನಾಡುತ್ತಿದ್ದರು.

ಮಾರ್ಕನು ಯೇಸುವನ್ನು ಒಬ್ಬ ಕ್ರಿಯೆಯ ಮತ್ತು ಅಧಿಕಾರವಿರುವ ಮನುಷ್ಯನೆಂಬುದಾಗಿ ಚಿತ್ರಿಸುತ್ತಾನೆ. ಆತನಿಗೆ ದುರಾತ್ಮಗಳ ಮೇಲೆ ಅಧಿಕಾರವಿತ್ತು ಮತ್ತು ಜನರ ಪಾಪಗಳನ್ನು ಕ್ಷಮಿಸಲು ಸಮರ್ಥನಾಗಿದ್ದನು.

ಮಾರ್ಕನ ಕಥೆಯಲ್ಲಿ ಯೇಸುವಿನ ಕುರಿತಾದ ರಹಸ್ಯ ಸಂಗತಿಯೊಂದಿದೆ. ಯೇಸು ಬಿಡಿಸಿದ ದುರಾತ್ಮಗಳು ಆತನ ಬಗ್ಗೆ ಮಾತನಾಡಲು ಅನುಮತಿಯಿರಲಿಲ್ಲ (1:34). ಆತನಿಂದ ಗುಣ ಹೊಂದಿದ ವ್ಯಕ್ತಿಗಳಿಗೆ ಸಹ ಅದು ಅನ್ವಯವಾಗುತ್ತದೆ (1:44). ಯೇಸು ಕ್ರಿಸ್ತನ ಶಿಷ್ಯರು ಸಹ ಯೇಸು ಯಾರೆಂದು ಹೇಳುವಂತಿರಲಿಲ್ಲ (8:30). ಅಲ್ಲದೆ ಈ ಸುವಾರ್ತೆಯಲ್ಲಿ ರೋಮನ್ ಅಧಿಕಾರಿಯು ಯೇಸುವಿನ ಶಿಲುಬೆಯ ಬಳಿ ಹೇಳುವವರೆಗೂ ಯೇಸುವು ದೇವಕುಮಾರನೆಂದು ಯಾವೊಬ್ಬ ವ್ಯಕ್ತಿ ಸಹ ಹೇಳುವುದಿಲ್ಲ (15:39).

ಯೇಸುವಿನ ಮರಣದ ಪ್ರಾಮುಖ್ಯತೆಗೆ ಒತ್ತುಕೊಡಲು ಬಹುಶಃ ಮಾರ್ಕನು ತನ್ನ ಕಥೆಯನ್ನು ಈ ರೀತಿಯಲ್ಲಿ ನಿರೂಪಿಸಿರಬಹುದು. ಆತನ ಮರಣವು ಅನೇಕರಿಗೆ ಈಡುಕೊಡುವುದಾಗಿದೆ (10:45). ಹೀಗೆ ಶಿಲುಬೆಯಲ್ಲಿ ಮಾತ್ರ ಯೇಸುವಿನ ಕುರಿತಾದ ರಹಸ್ಯ ಪ್ರಕಟಗೊಂಡಿದೆ ಮತ್ತು ಶಿಲುಬೆಯಲ್ಲಿ ಮನುಷ್ಯಕುಮಾರನು ಏನನ್ನು ಸಾಧಿಸಿದ್ದಾನೆಂಬುದು ಸಾಬೀತಾಗಿದೆ.

ಮಾರ್ಕನ ಸುವಾರ್ತೆಯನ್ನು ಎರಡು ಸ್ಪಷ್ಟ ಭಾಗಗಳಾಗಿ ವಿಂಗಡಿಸಬಹುದು:

1. ಯೇಸುವು ಗಲಿಲಾಯದಲ್ಲಿ ಅದ್ಭುತ ಮತ್ತು ಸೂಚಕಕಾರ್ಯ ಮಾಡುವನು (1-8:30)
2. ಯೆರೂಸಲೇಮಿನಲ್ಲಿ ತನ್ನ ಮರಣ ಸಮೀಪಿಸುತ್ತಿರುವಾಗ ಯೇಸುವು ತನ್ನ ಬಾಧೆಯ ಬಗ್ಗೆ ಬೋಧಿಸುತ್ತಾನೆ (8:31-16:20)

# ಲೂಕನ ಸುವಾರ್ತೆ

ಈ ಸುವಾರ್ತೆ ಮತ್ತು ಅಪೊಸ್ತಲರ ಕೃತ್ಯಗಳು ಪುಸ್ತಕದ ಗ್ರಂಥಕರ್ತರು ಒಬ್ಬರೇ. ಎರಡು ಪುಸ್ತಕ ಸಹ ಥಿಯೋಫಿಲನೆಂದು ಕರೆಯಲ್ಪಡುವ ರೋಮನ್ ಕಛೇರಿಯ (ವ್ಯಕ್ತಿಗೆ) ಬರೆಯಲಾಗಿದೆ (1:3 ಮತ್ತು ಅಪೊ. 1:1). ಗ್ರಂಥಕರ್ತನು ತನ್ನ ಹೆಸರನ್ನು ತಿಳಿಸುವುದಿಲ್ಲ, ಆದರೆ ಹೆಚ್ಚಿನ ಪುರಾವೆಗಳು ಲೂಕನನ್ನು ಸೂಚಿಸುತ್ತವೆ. ಈತನು ಒಬ್ಬ ವೈದ್ಯನಾಗಿದ್ದನು ಮತ್ತು ಅಪೊಸ್ತಲ ಪೌಲನ ಪ್ರಯಾಣದ ಜೊತೆಗಾರನೂ, ಆಪ್ತಸ್ನೇಹಿತನೂ ಆಗಿದ್ದನು. ಬಹುಶಃ ಹುಟ್ಟಿನಿಂದ ಈತನೊಬ್ಬ ಅನ್ಯನಾಗಿರಬಹುದು. ಹಾಗಾದಲ್ಲಿ ಸತ್ಯವೇದದಲ್ಲಿ ಪುಸ್ತಕಗಳಲ್ಲಿಯೇ ಏಕೈಕ ಯೆಹೂದೇತರ ಗ್ರಂಥಕರ್ತನಾಗುತ್ತಾನೆ. ಈತನು ಒಳ್ಳೆ ಶಿಕ್ಷಣ ಹೊಂದಿರಬೇಕು ಮತ್ತು ಗ್ರೀಕ್ ಸಂಸ್ಕೃತಿಯನ್ನು ಚೆನ್ನಾಗಿ ತಿಳಿದುಕೊಂಡವನಾಗಿದ್ದಿರಬೇಕು.

ಲೂಕನು ಯೇಸುವನ್ನು ಇಸ್ರಾಯೇಲಿನ ವಾಗ್ದಾತ್ತ ರಕ್ಷಕನೆಂಬುದಾಗಿ ಬಿಂಬಿಸುತ್ತಾನೆ. ಆದರೆ ಆತನು ಇಡೀ ಲೋಕದ ರಕ್ಷಕನೂ ಆಗಿದ್ದಾನೆ.

ತನ್ನ ಸುವಾರ್ತೆಯಲ್ಲಿ ಲೂಕನು ಅನೇಕ ವಿಭಿನ್ನ ಸಂಗತಿಗಳ ಕುರಿತು ಬರೆಯುತ್ತಾನೆ ಮತ್ತು ಅನೇಕ ವಿಷಯಗಳ ಕುರಿತು ಹೆಚ್ಚು ವಿವರವಾದ ಮಾಹಿತಿ ಕೊಡುತ್ತಾನೆ. ಆತನು ಬಡವರು, ತಿರಸ್ಕರಿಸಲ್ಪಟ್ಟವರು ಮತ್ತು ಸ್ತ್ರೀಯರಿಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾನೆ (ಉದಾ. ನೋಡಿ 7:36-50, 18:9-14). ದೂತರು ಪ್ರಾಮುಖ್ಯ ಪಾತ್ರ ವಹಿಸುತ್ತಾರೆ (2:9-13). ಸ್ತುತಿ ಮತ್ತು ಪ್ರಾರ್ಥನೆಗೆ ವಿಶೇಷ ಒತ್ತು ಕೊಡಲಾಗಿದೆ (1:67-79). ಪವಿತ್ರಾತ್ಮನು ಸಹ ಕಥೆಯಲ್ಲಿ ಪ್ರಾಮುಖ್ಯವಾಗಿದ್ದಾನೆ. ಕೇವಲ ಅಪೊಸ್ತಲರ ಕೃತ್ಯದಲ್ಲಿ ಮಾತ್ರವಲ್ಲ, ಸುವಾರ್ತೆಗಳಲ್ಲಿ ಸಹ ಮುಖ್ಯ ಪಾತ್ರವಿದೆ (2:25-32). ಯೇಸುವಿನ ಸಾಮ್ಯಗಳಿಗೆ ಸುವಾರ್ತೆಗಳಲ್ಲಿ ವಿಶೇಷ ಸ್ಥಾನವಿದೆ (ಉದಾ. ಅಧ್ಯಾಯ 15). ಅನೇಕ ಕಥೆಗಳು ಯೆರೂಸಲೇಮ್ ಮತ್ತು ದೇವಾಲಯದೊಂದಿಗೆ ಸಂಬಂಧ ಹೊಂದಿವೆ. ಲೂಕನ ಸುವಾರ್ತೆಯಲ್ಲಿ ಉಳಿದ ಸುವಾರ್ತೆಯಲ್ಲಿ ಕಂಡುಬಾರದ ಅನೇಕ ಜನಪ್ರಿಯ ಕಥೆ ಮತ್ತು ಸಾಮ್ಯಗಳಿವೆ, ಉದಾಹರಣೆಗೆ

- ಯೇಸುವಿನ ಜನನ (ಅಧ್ಯಾಯ 2)
- ಯೇಸುವನ್ನು ದೇವಾಲಯದಲ್ಲಿ ಸಮರ್ಪಣೆ ಮಾಡಿದ್ದು (ಅಧ್ಯಾಯ 2)
- ದೇವಾಲಯದಲ್ಲಿ ಬಾಲಕನಾದ ಯೇಸು (ಅಧ್ಯಾಯ 2)
- ಸಬ್ಬತ್ ದಿನದಲ್ಲಿ ಬೆನ್ನು ಬಗ್ಗಿದ ಸ್ತ್ರೀ ಗುಣಹೊಂದಿದ್ದು (ಅಧ್ಯಾಯ 13)
- ಕಳೆದು ಹೋದ ಪಾವಲಿಯ ಸಾಮ್ಯ (ಅಧ್ಯಾಯ 15)
- ತಪ್ಪಿಹೋದ ಮಗನ ಸಾಮ್ಯ (ಅಧ್ಯಾಯ 15)
- ಮೈಗಳ್ಳನಾದ ಮನೆವಾರ್ತೆಯವನ ಸಾಮ್ಯ (ಅಧ್ಯಾಯ 16)
- ಐಶ್ವರ್ಯವಂತ ಮತ್ತು ಲಾಜರ (ಅಧ್ಯಾಯ 16)
- ಹತ್ತು ಮಂದಿ ಕುಷ್ಠರೋಗಿಗಳು ಗುಣಹೊಂದಿದ್ದು (ಅಧ್ಯಾಯ17)
- ಪಟ್ಟುಹಿಡಿದ ವಿಧವೆಯ ಸಾಮ್ಯ (ಅಧ್ಯಾಯ 18)
- ಫರಿಸಾಯ ಮತ್ತು ಸುಂಕದವನ ಸಾಮ್ಯ (ಅಧ್ಯಾಯ 18)
- ಸುಂಕದ ಗುತ್ತಿಗೆಗಾರನಾದ ಜಕ್ಕಾಯ (ಅಧ್ಯಾಯ 19)

- ಎಮ್ಮಾಹುವಿನ ರಸ್ತೆಯಲ್ಲಿನ ಶಿಷ್ಯರು (ಅಧ್ಯಾಯ 24)
- ಶಕ್ತಿಯನ್ನು ಹೊಂದುವವರೆಗೆ ಯೆರೂಸಲೇಮಿನಲ್ಲಿ ಕಾದಿರ್ರಿ ಎಂದು ಶಿಷ್ಯರಿಗೆ ಹೇಳಿದ್ದು (ಅಧ್ಯಾಯ 24)

ಲೂಕನ ಸುವಾರ್ತೆಯನ್ನು ಈ ರೀತಿಯಾಗಿ ರಚನೆ ಮಾಡಬಹುದು:

1. ಸ್ನಾನಿಕನಾದ ಯೋಹಾನ ಮತ್ತು ಯೇಸು ಪರಿಚಯಿಸಲ್ಪಟ್ಟಿದ್ದು (1-4:13)
2. ಗಲಿಲಾಯದಲ್ಲಿ ಯೇಸುವಿನ ಸೇವೆ (4:1-9:50)
3. ಯೆರೂಸಲೇಮಿನತ್ತ ಯೇಸುವಿನ ಪ್ರಯಣ (9:51-19:40)
4. ಬಾಧೆ ಮತ್ತು ತನ್ನ ಮರಣಕ್ಕಿಂತ ಮುನ್ನ ಯೇಸು ಯೆರೂಸಲೇಮಿನಲ್ಲಿ ಸಮಯ ಕಳೆಯುವುದು. ಯೇಸುವಿನ ಪುನರುತ್ಥಾನ ಮತ್ತು ಸ್ವರ್ಗಾರೋಹಣದ ನಂತರ ಶಿಷ್ಯರು ಯೆರೂಸಲೇಮಿನಲ್ಲಿ ಸೇರುತ್ತಾರೆ.

# ಯೋಹಾನನ ಸುವಾರ್ತೆ

ಈ ಸುವಾರ್ತೆಯು ಯೇಸುವಿನ ಆಪ್ತ ಸ್ನೇಹಿತರಲ್ಲೊಬ್ಬನಾದ ಯೋಹಾನನೆಂಬ ಶಿಷ್ಯನಿಂದ ಸಂರಕ್ಷಿಸಲ್ಪಟ್ಟ, ಬರೆದ ವಿಷಯ ಮತ್ತು ಮಾಹಿತಿಯನ್ನು ಒಳಗೊಂಡಿದೆ. ಸುವಾರ್ತೆಯಲ್ಲಿ ಆತನ ಹೆಸರು ತಿಳಿಸಿಲ್ಲ ಆದರೆ ಆತನು "ಯೇಸುವಿಗೆ ಪ್ರಿಯನಾದ ಶಿಷ್ಯನು" ಎಂಬುದಾಗಿ ಕರೆಯಲ್ಪಟ್ಟಿದ್ದಾನೆ. ಅನಂತರ ಬೇರೆ ಯಾರೋ ವ್ಯಕ್ತಿಗಳು (ಬಹುಶಃ ಕಾರ್ಯದರ್ಶಿ) ಆತನು ಬರೆದ ಅಂಶಗಳನ್ನು ಪ್ರಕಟಿಸಿರಬಹುದು (ನೋಡಿ 21:24).

ಯೋಹಾನನ ಸುವಾರ್ತೆಯು ಉಳಿದ ಮೂರು ಸುವಾರ್ತೆಗಳಿಗಿಂತ ವಿಭಿನ್ನವಾಗಿದೆ. ಸಾಂಕೇತಿಕ ಮತ್ತು ಪ್ರತಿಫಲಿತ ರೀತಿಯಲ್ಲಿ ಪದೇ ಪದೇ ಸೀಮಿತ ಸಂಖ್ಯೆಯ ಪದಗಳು ಬಳಸಲ್ಪಟ್ಟಿವೆ. ಕೆಲ ಪ್ರಮುಖ ಸಂಗತಿಗಳನ್ನು ತಿಳಿಸಲು ಯೋಹಾನನು ನಂಬಿಕೆ, ನಿತ್ಯಜೀವ, ಮಹಿಮೆ, ಸಾಕ್ಷಿ, ಗುರುತು, ಬೆಳಕು ಮತ್ತು ಸತ್ಯದ ಬಗ್ಗೆ ಮಾತನಾಡುತ್ತಾನೆ. ಪ್ರತಿಬಾರಿ ಓದುಗರು ಒಂದು ವಾಕ್ಯಭಾಗವನ್ನು ಧ್ಯಾನಿಸುವಾಗ ಅವರು ಒಂದು ಹೊಸ ಆಯಾಮಗಳನ್ನು ಮತ್ತು ಹೊಸ ಆಳವನ್ನು ಕಂಡುಕೊಳ್ಳುತ್ತಾರೆ.

ಈ ಸುವಾರ್ತೆಯು ಎಲ್ಲಾ ಸಮಯಕ್ಕಿಂತ ಮೊದಲೇ ಇದ್ದ ಮತ್ತು ಈಗ ಈ ಲೋಕದಲ್ಲಿ ಮನುಷ್ಯನಾಗಿ ಹುಟ್ಟಿದ ಯೇಸುವನ್ನು ದೇವರ ವಾಕ್ಯವೆಂಬುದಾಗಿ ನಿರೂಪಿಸುವುದರೊಂದಿಗೆ ಪ್ರಾರಂಭವಾಗುತ್ತದೆ. "ಆ ವಾಕ್ಯವು ದೇವರಾಗಿತ್ತು" (1:1, 9).

ದೇವರು ಮತ್ತು ಯೇಸುವಿನ ನಡುವಿನ ಸಂಬಂಧವು "ತಂದೆ" ಮತ್ತು "ಮಗನ" ಸಂಯೋಜನೆಯ ಮೂಲಕ ವರ್ಣಿಸಲ್ಪಟ್ಟಿದೆ. ಇದು ದೇವರು ಯಾರಾಗಿದ್ದಾನೆಂಬುದನ್ನು ಜನರಿಗೆ ನಿರ್ಣಾಯಕವಾಗಿ ಮತ್ತು ಖಂಡಿತವಾಗಿ ಪ್ರಕಟಿಸಿದ ಅವರ ಐಕ್ಯತೆ ಮತ್ತು ವಾಸ್ತವಾಂಶಕ್ಕೆ ಒತ್ತುಕೊಡುತ್ತದೆ (1:18). ಈ ಪ್ರಾಮುಖ್ಯತೆಯು ಇನ್ನು ಮುಂದೆ ಸುವಾರ್ತೆಯ ಪಠ್ಯದುದ್ದಕ್ಕೂ ಕಂಡುಬರುವ ಜನಪ್ರಿಯ "ನಾನೇ" ಎಂಬ ಮಾತುಗಳಿಂದ ಬಲ ಹೊಂದುತ್ತದೆ (6:35, 8:12, 10:7, 10:11, 11:25, 14:6 ಮತ್ತು 15:1). ಇದು ವಿಮೋಚನಕಾಂಡ 3:14-15 ರಲ್ಲಿ ತಿಳಿಸಲಾದ ದೇವರ ಹೆಸರನ್ನು ಸೂಚಿಸುತ್ತದೆ.

ಯೋಹಾನನು ತನ್ನ ಪತ್ರದೊಂದಿಗೆ ಒಂದು ನಿಖರವಾದ ಉದ್ದೇಶ ಹೊಂದಿದ್ದಾನೆ. ಓದುಗರು "ಯೇಸುವೇ ಕ್ರಿಸ್ತನೂ, ದೇವರ ಕುಮಾರನೂ ಎಂದು ನಂಬಿ, ಹಾಗೆ ನಂಬುವುದರ ಮೂಲಕ ಆತನ ನಾಮದಲ್ಲಿ ಜೀವವನ್ನು ಹೊಂದಬೇಕೆಂದು" ಈ ಸುವಾರ್ತೆ ಬರೆಯಲ್ಪಟ್ಟಿದೆ (20:31).

ಆಶ್ಚರ್ಯಕರ ಸಂಗತಿಯೇನಂದರೆ ಈ ಸುವಾರ್ತೆಯಲ್ಲಿ ಯಾವುದೇ ಸಾಮ್ಯಗಳಿಲ್ಲ. ಆದರೆ ಬೇರಾವ ಸುವಾರ್ತೆಗಳಲ್ಲಿ ಕಾಣದಿರುವ ಅನೇಕ ಜನಪ್ರಿಯ ಕಥೆಗಳನ್ನು ಯೋಹಾನನ ಸುವಾರ್ತೆಯಲ್ಲಿ ಕಾಣಬಹುದು. ಉದಾಹರಣೆಗೆ:

- ಯೇಸುವು ನೀರನ್ನು ದ್ರಾಕ್ಷಾರಸವನ್ನಾಗಿ ಮಾಡುತ್ತಾನೆ (ಅಧ್ಯಾಯ 2)
- ಯೇಸು ಮತ್ತು ನಿಕೊದೇಮನ ನಡುವಿನ ಸಂಭಾಷಣೆ (ಅಧ್ಯಾಯ 3)
- ಯೇಸು ಮತ್ತು ಸಮಾರ್ಯ ಸ್ತ್ರೀ (ಅಧ್ಯಾಯ 4)
- ಯೇಸುವು ಜೀವದ ರೊಟ್ಟಿಯಾಗಿದ್ದಾನೆಂಬ ದೀರ್ಘವಾದ ಪ್ರವಚನ (ಅಧ್ಯಾಯ 6)
- ವ್ಯಭಿಚಾರದಲ್ಲಿ ಸಿಕ್ಕ ಸ್ತ್ರೀ (ಅಧ್ಯಾಯ 8)
- ಯೇಸು ಲಾಜರನನ್ನು ಮರಣದಿಂದ ಎಬ್ಬಿಸಿದ್ದು (ಅಧ್ಯಾಯ 11)
- ಯೇಸು ಶಿಷ್ಯರ ಪಾದಗಳನ್ನು ತೊಳೆದದ್ದು (ಅಧ್ಯಾಯ 13)
- ಯೇಸು ಪವಿತ್ರಾತ್ಮನ ಕುರಿತು ಬೋಧಿಸುವುದು (ಅಧ್ಯಾಯ 14 ಮತ್ತು 16)
- ಯೇಸು ದ್ರಾಕ್ಷೇಬಳ್ಳಿ ಮತ್ತು ಕೊಂಬೆಯ ಬಗ್ಗೆ ಬೋಧಿಸುವುದು (ಅಧ್ಯಾಯ 15)
- ಶಿಷ್ಯರಿಗಾಗಿ ಮತ್ತು ವಿಶ್ವಾಸಿಗಳಿಗಾಗಿ ಯೇಸುವಿನ ಪ್ರಾರ್ಥನೆ (ಅಧ್ಯಾಯ 17)
- ಪುನರುತ್ಥಾನದ ನಂತರ ಯೇಸು ಮೀನು ಹಿಡಿಯುವಾಗ ಏಳು ಮಂದಿ ಶಿಷ್ಯರಿಗೆ ಕಾಣಿಸಿಕೊಂಡದ್ದು (ಅಧ್ಯಾಯ 21)

ಯೋಹಾನನ ಸುವಾರ್ತೆಯನ್ನು ಈ ರೀತಿಯ 2 ಭಾಗಗಳಾಗಿ ವಿಂಗಡಿಸಬಹುದು:

1. ಯೇಸುವು ಜನರನ್ನು ಸಂಬೋಧಿಸುವುದು: ಯೇಸುವಿನ ಬಹಿರಂಗ ಸಾಕ್ಷಿ (ಅಧ್ಯಾಯ 1-12). ಆತನು ಏಳು ಸೂಚಕಕಾರ್ಯಗಳನ್ನು ಮಾಡುತ್ತಾನೆ. ಈ ಸೂಚಕಕಾರ್ಯಗಳು ಯೇಸು ಯಾರೆಂಬುದನ್ನು ತಿಳಿಸುತ್ತವೆ. ಪ್ರತಿ ಸೂಚಕಕಾರ್ಯದ ಬಗ್ಗೆ ವಿವರಣೆ ಮತ್ತು ಸಂಭಾಷಣೆಯಿದೆ.
2. ಯೇಸುವು ಶಿಷ್ಯರನ್ನು ಸಂಬೋಧಿಸುವುದು: (ಅಧ್ಯಾಯ 13-21): ಯೇಸುವು ತನ್ನ ಶಿಷ್ಯರೊಂದಿಗೆ ಕಾಲ ಕಳೆಯುತ್ತಾ ಅವರ ನಂಬಿಕೆಯನ್ನು ಹೆಚ್ಚಿಸುವ ಉದ್ದೇಶದಿಂದ ಅವರಿಗೆ ಬೋಧಿಸುತ್ತಾ, ಉತ್ತೇಜಿಸುತ್ತಾ ಇರುತ್ತಾನೆ. ಈ ನಂಬಿಕೆಯನ್ನು "ಪ್ರೀತಿ" ಎಂದೂ ಕರೆಯಲಾಗುತ್ತದೆ.

## ಅಪೊಸ್ತಲರ ಕೃತ್ಯಗಳು

ಲೂಕನ ಸುವಾರ್ತೆಯು ಮುಕ್ತಾಯಗೊಂಡದ್ದರಲ್ಲಿಂದ ಈ ಪುಸ್ತಕ ಪ್ರಾರಂಭವಾಗುತ್ತದೆ. ತನ್ನ ಸುವಾರ್ತೆಯಲ್ಲಿ ಲೂಕನು ಓದುಗರನ್ನು ಯೆರೂಸಲೇಮಿಗೆ ನಡೆಸುತ್ತಾನೆ. ಅಪೊಸ್ತಲರ ಕೃತ್ಯ ಪುಸ್ತಕದಲ್ಲಿ ಓದುಗರನ್ನು ಯೆರೂಸಲೇಮಿನಿಂದ

ಲೋಕದ ಕಟ್ಟಕಡೆಯವರೆಗೆ ಕೊಂಡೊಯ್ಯುತ್ತಾನೆ (1:8). ಈ ಪುಸ್ತಕವು ಯೇಸುವಿನ ಹಿಂಬಾಲಕರು ಯೇಸುವಿನ ಕುರಿತ ಸುವಾರ್ತೆಯನ್ನು ಅನ್ಯ ಜನಾಂಗಗಳ ರಾಷ್ಟ್ರಗಳಿಗೆ ಹೇಗೆ ಕೊಂಡೊಯ್ದರೆಂಬುದರ ಕುರಿತ ಕಥೆಯಾಗಿದೆ.

ಪುಸ್ತಕದ ಮೊದಲ ಭಾಗದಲ್ಲಿ ಅಪೊಸ್ತಲ ಪೇತ್ರನು ಮುಖ್ಯ ವ್ಯಕ್ತಿಯಾಗಿದ್ದರೆ (ಅಧ್ಯಾಯ 1-12) ಮತ್ತು ಎರಡನೇ ಭಾಗದಲ್ಲಿ ಅಪೊಸ್ತಲ ಪೌಲನು ಮುಖ್ಯ ವ್ಯಕ್ತಿಯಾಗಿದ್ದಾನೆ (ಅಧ್ಯಾಯ 13-28). ಕೊನೆಯ ಅಧ್ಯಾಯಗಳು ಯೆರೂಸಲೇಮಿನಲ್ಲಿ ಸೆರೆಹಿಡಿದ ತರುವಾಯ ರೋಮಿಗೆ ಹೋಗುವಾಗ ವಿವಿಧ ಅಧಿಕಾರಿಗಳ ಮುಂದೆ ಪೌಲನು ನುಡಿದ ವಾದದ ನುಡಿಗಳನ್ನು ಒಳಗೊಂಡಿದೆ. ಯೆರೂಸಲೇಮಿನಲ್ಲಿ ಸಭೆಯ ಜನನದಿಂದ (ಸುಮಾರು ಕ್ರಿ.ಶ. 30) ರೋಮಿನಲ್ಲಿನ ಪೌಲನ ಸೆರೆಯವರೆಗೆ (ಕ್ರಿ.ಶ. 60-62) ಮೂವತ್ತು ವರ್ಷಗಳ ಅವಧಿ.

ತನ್ನೆರಡು ಹೊಸ ಒಡಂಬಡಿಕೆಯ ಪುಸ್ತಕಗಳಾದ ಸುವಾರ್ತೆ ಮತ್ತು ಅಪೊಸ್ತಲರ ಕೃತ್ಯದ ಕುರಿತು ಲೂಕನು ಹೊಂದಿರುವ ಉದ್ದೇಶವು ರೋಮಿನ ಚಕ್ರವರ್ತಿಯ ಮುಂದಿನ ಪೌಲನ ವಿಚಾರಣೆಯ ವೇಳೆ ಉಪಯೋಗಿಸುವುದಕ್ಕಾಗಿ ಅವೊಂದು ದಸ್ತಾವೇಜನ್ನು (ಸಾಕ್ಷ್ಯ ಸಂಕಲನ) ರೂಪಿಸುತ್ತವೆಂಬುದಾಗಿತ್ತು. ರೋಮಿನಲ್ಲಿ ಪೌಲನ ಆಗಮನದೊಂದಿಗೆ ಅಪೊಸ್ತಲರ ಕೃತ್ಯದ ಪುಸ್ತಕದ ದಿಡೀರ್ ಮುಕ್ತಾಯಕ್ಕಾಗಿ ಅವೊಂದು ನೈಸರ್ಗಿಕ ವಿವರಣೆಯನ್ನು ಕೊಡುವುದಾಗಿತ್ತು. ಪೌಲನ ವಿಚಾರಣೆಯ ಪರಿಣಾಮದ ಕುರಿತು ಓದುಗರಿಗೆ ಮಾಹಿತಿಯಿಲ್ಲ. ಕುತೂಹಲಕರ ಸಂಗತಿಯೇನೆಂದರೆ ರೋಮನ್ ಚಕ್ರವರ್ತಿಗೆ ಯಾವುದೇ ಬೆದರಿಕೆ ತೋರಿಸದ ರೀತಿಯಲ್ಲಿ ಲೂಕನು ಕ್ರೈಸ್ತ ನಂಬಿಕೆಯನ್ನು ಪ್ರಸ್ತುತಪಡಿಸುತ್ತಾನೆ.

ಆದರೆ ಅಪೊಸ್ತಲರ ಕೃತ್ಯದ ಮುಖ್ಯ ಉದ್ದೇಶವು ಯೇಸುವಿನ ಕುರಿತಾದ ಸುವಾರ್ತೆಯನ್ನು ಸಾರುವುದಾಗಿತ್ತು. ಈ ಸಾರುವಿಕೆಗೆ ಪುಸ್ತಕದುದ್ದಕ್ಕೂ ಒತ್ತುಕೊಡಲಾಗಿದೆ. ಈ ಸುವಾರ್ತೆಯು ಯೆಹೂದ್ಯರಿಗೆ ಮಾತ್ರವಲ್ಲ ಅನ್ಯದೇಶದವರಿಗೆ ಸಹ ಸಾರುವುದಾಗಿದೆ. ಈ ಸುವಾರ್ತೆಯು ಪವಿತ್ರಾತ್ಮನ ಬಲವನ್ನು ಹೊಂದಿದ ಜನರಿಂದ ಹರಡುವುದಾಗಿದೆ. ಈ ಪುಸ್ತಕದಲ್ಲಿ ಪವಿತ್ರಾತ್ಮನು ಪ್ರಮುಖ ಪಾತ್ರವಹಿಸುವುದರಿಂದ ಇದನ್ನು "ಪವಿತ್ರಾತ್ಮನ ಕಾರ್ಯಗಳು" ಎಂದು ಸಹ ಕರೆಯಲಾಗುತ್ತದೆ.

1:8 ರಲ್ಲಿನ ಯೇಸುವಿನ ನುಡಿಗನುಸಾರವಾಗಿ ಭೌಗೋಳಿಕವಾಗಿ ಅಪೊಸ್ತಲರ ಕೃತ್ಯ ಪುಸ್ತಕವನ್ನು ರಚನೆ ಮಾಡಬಹುದು. "*ಪವಿತ್ರಾತ್ಮನು ನಿಮ್ಮ ಮೇಲೆ ಬರುವಾಗ, ನೀವು ಬಲವನ್ನು ಹೊಂದಿ, ನೀವು ಯೆರೂಸಲೇಮಿನಲ್ಲಿಯೂ, ಎಲ್ಲಾ ಯೂದಾಯ, ಸಮಾರ್ಯ ಸೀಮೆಗಳಲ್ಲಿಯೂ ಮತ್ತು ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗುವಿರಿ*".:

1. ಯೆರೂಸಲೇಮ್ (ಅಧ್ಯಾಯ 1-7)
2. ಯೂದಾಯ ಮತ್ತು ಸಮಾರ್ಯ (ಅಧ್ಯಾಯ 8-12)
3. ಭೂಲೋಕದ ಕಟ್ಟಕಡೆಯವರೆಗೆ (ಅಧ್ಯಾಯ 13-20)

## ಹೊಸ ಒಡಂಬಡಿಕೆಯ ಐತಿಹಾಸಿಕ ಪುಸ್ತಕಗಳಿಗೆ ಪ್ರಶ್ನೆಗಳು

1. ಯಾಕೆ ಹೊಸ ಒಡಂಬಡಿಕೆಯಲ್ಲಿ ನಾಲ್ಕು ಸುವಾರ್ತೆಗಳಿವೆ? ಯೋಚಿಸಿ ಮತ್ತು ಚರ್ಚಿಸಿರಿ.
2. ಮೂರು ಸುವಾರ್ತೆಗಳು ಸಮಾನಾರ್ಥಕವಾಗಿವೆ ಮತ್ತು ಅವನ್ನು "ಸಮಾನ ದೃಷ್ಟಿಯ ಸುವಾರ್ತೆಗಳು" ಎಂದು ಕರೆಯುವರು. "ಸಮಾನ ದೃಷ್ಟಿಯ" ಎಂದರೇನು?

3. ಮೂರು “ಸಮಾನ ದೃಷ್ಟಿಯ ಸುವಾರ್ತೆಗಳ ನಡುವಿನ ವ್ಯತ್ಯಾಸಗಳೇನು? ನಿಮ್ಮ ಗುಂಪಿನವರೊಂದಿಗೆ ಯೋಚಿಸಿ ಮತ್ತು ಚರ್ಚಿಸಿರಿ. ಸಾಧ್ಯವಾದಷ್ಟು ವ್ಯತ್ಯಾಸಗಳನ್ನು ಪಟ್ಟಿಮಾಡಿರಿ.
4. ಒಂದು ಸುವಾರ್ತೆಯಲ್ಲಿ ಯಾವುದೇ ಸಾಮ್ಯಗಳಿಲ್ಲ. ಅದು ಯಾವುದು?
5. ಯೇಸುವಿನ ಅದ್ಭುತಗಳಿಗೆ ಯೋಹಾನನ ಸುವಾರ್ತೆಯು ಬಳಸುವ ಪದವೇನು?
6. ಯಾವ ಸುವಾರ್ತೆಯಲ್ಲಿ ನಾವು ಕೆಳಕಂಡವುಗಳನ್ನು ಕಾಣಬಹುದು? ಉತ್ತರ ಬರೆಯುವ ಮೊದಲು ನಿಮ್ಮ ಗುಂಪಿನವರೊಂದಿಗೆ ಚರ್ಚಿಸಿರಿ.

   ಅ. ಯೇಸುವಿನ ಜನನ ಪಟ್ಟಿ

   ಆ. 12 ನೇ ಪ್ರಾಯದಲ್ಲಿ ದೇವಾಲಯದಲ್ಲಿ ಯೇಸು

   ಇ. ಬೆಲೆಬಾಳುವ ಮುತ್ತಿನ ಕುರಿತ ಸಾಮ್ಯ

   ಈ. ಜಕ್ಕಾಯನ ಕುರಿತ ಕಥೆ

   ಉ. ಲಾಜರನು ಮರಣದಿಂದ ಎದ್ದದ್ದು

   ಊ. ಒಳ್ಳೆಯ ಸಮಾರ್ಯದವ

   ಋ. ಕಳೆದು ಹೋದ ಮಗ

   ಎ. ಹತ್ತು ಮಂದಿ ಕನ್ಯೆಯರ ಸಾಮ್ಯ

   ಏ. ಪವಿತ್ರಾತ್ಮನ ಕುರಿತ ಯೇಸುವಿನ ಬೋಧನೆ

   ಐ. ಪುನರುತ್ಥಾನದ ನಂತರ ಮೀನು ಹಿಡಿಯುವ ಶಿಷ್ಯರಿಗೆ ಯೇಸು ಕಾಣಿಸಿಕೊಂಡದ್ದು
7. ಅಪೊಸ್ತಲರ ಕೃತ್ಯಗಳು ಪುಸ್ತಕದ ಗ್ರಂಥಕರ್ತರು ಯಾರು?
8. ಯಾಕೆ ಆತನು ಈ ಪುಸ್ತಕವನ್ನು ಬರೆದನು? ಉತ್ತರ ಬರೆಯುವ ಮುನ್ನ ನಿಮ್ಮ ಗುಂಪಿನ ಸದಸ್ಯರೊಂದಿಗೆ ಚರ್ಚಿಸಿರಿ.
9. ಒಂದು ಭೌಗೋಳಿಕ ದೃಷ್ಟಿಕೋನದಿಂದ ಅಪೊಸ್ತಲರ ಕೃತ್ಯಗಳು ಪುಸ್ತಕವನ್ನು ನಾವು ಹೇಗೆ ರಚನೆ ಮಾಡಬಹುದು?
10. ಹೊಸ ಒಡಂಬಡಿಕೆಯ ಈ ವಾಕ್ಯಭಾಗದಲ್ಲಿನ 5 ಪುಸ್ತಕಗಳ ಬಗ್ಗೆ 10 ಪ್ರಶ್ನೆಗಳನ್ನು ಬರೆಯಿರಿ. ನಿಮ್ಮ ಸ್ನೇಹಿತರೊಬ್ಬರಿಗೆ ಉತ್ತರ ಬರೆಯಲು ಹೇಳಿರಿ. ಅಂತಿಮವಾಗಿ ಸರಿಯಾದ ಪ್ರತಿ ಉತ್ತರಕ್ಕೆ 10 ಅಂಕಗಳನ್ನು ಕೊಡಿರಿ. ಉತ್ತರವು ಭಾಗಶಃ ಸರಿಯಾಗಿದ್ದರೆ ಕಡಿಮೆ ಅಂಕ ಕೊಡಿರಿ. 50-69 ಅಂಕಗಳಿಗೆ ಉತ್ತೀರ್ಣತೆ ಕೊಡಿರಿ. 70-100 ಅಂಕಗಳಿಗೆ ಉನ್ನತ ಶ್ರೇಣಿ ಕೊಡಿರಿ.

# ಭಾಗ 2: ಪೌಲನ ಪತ್ರಿಕೆಗಳು

ಪೌಲನು ಸಭೆಗಳಿಗೆ ಮತ್ತು ಆದಿಸಭೆಯ ಸಭಾನಾಯಕರುಗಳಿಗೆ ಅನೇಕ ಪತ್ರಿಕೆಗಳನ್ನು ಬರೆದನು. ಅಂತಹ ಹದಿಮೂರು ಪತ್ರಿಕೆಗಳನ್ನು ಹೊಸ ಒಡಂಬಡಿಕೆಯಲ್ಲಿ ಸೇರಿಸಲಾಗಿದೆ. ಈ ಪತ್ರಿಕೆಗಳಲ್ಲಿ ಪೌಲನು ಕ್ರೈಸ್ತ ನಂಬಿಕೆ ಮತ್ತು ದೇವರ ಜನರಾಗಿ ವಿಶ್ವಾಸಿಗಳು ಹೇಗೆ ಜೀವಿಸಬೇಕೆಂಬುದರ ಕುರಿತಾಗಿ ಪ್ರಾಮುಖ್ಯ ಸಂಗತಿಗಳನ್ನು ಬರೆದಿದ್ದಾನೆ.

ಪತ್ರಿಕೆಗಳನ್ನು ಎರಡು ನಿಯಮಗಳಿಗನುಸಾರವಾಗಿ ಜೊಡಿಸಲಾಗಿದೆ:

- ಮೊದಲು ಸಭೆಗೆ ಬರೆದ 9 ಪತ್ರಿಕೆಗಳು ಕಂಡು ಬಂದರೆ, ಅನಂತರ ವ್ಯಕ್ತಿಗಳಿಗೆ ಬರೆದ ನಾಲ್ಕು ಪತ್ರಿಕೆಗಳು ಕಂಡುಬರುತ್ತವೆ.
- ಪ್ರತಿ ಗುಂಪಿನೊಳಗೆ ಪತ್ರಿಕೆಗಳು ದೀರ್ಘವಾದವುಗಳು ಮೊದಲುಗೊಂಡು ಜೋಡಿಸಲ್ಪಟ್ಟಿವೆ. ಪತ್ರಿಕೆಗಳು ಬರೆದ ಸಮಯ ಅಥವಾ ಅವುಗಳ ಪ್ರಾಮುಖ್ಯತೆಗಳಿಗನುಸಾರವಾಗಿ ಜೋಡಿಸಲ್ಪಟ್ಟಿಲ್ಲವೆಂಬುದನ್ನು ನಾವು ಗಮನಿಸಲೇಬೇಕು.

ಮುಂದಿನ ಪುಟದಲ್ಲಿ ಪೌಲನ ಜೀವನ ಮತ್ತು ಸೇವೆಯ ಕುರಿತ ಕಾಲರೇಖೆಯನ್ನು ನೀವು ಕಾಣುವಿರಿ. ಪುನಃ ಸತ್ಯವೇದ ಪಂಡಿತರು ಎಲ್ಲವನ್ನು ಒಪ್ಪುವುದಿಲ್ಲ. ದೊಡ್ಡ ವಿಷಯವೆಂದರೆ ಗಲಾತ್ಯ ಪತ್ರಿಕೆಯ ಬರೆದ ಸಮಯ: ಇದು ಪೌಲನ ಎರಡನೇ ಪ್ರಯಾಣದಲ್ಲಿ ಬರೆಯಲ್ಪಟ್ಟಿತಾ (ಅಪೊ.ಕೃತ್ಯ. 15 ರಲ್ಲಿ ದಾಖಲಿಸಲ್ಪಟ್ಟಂತೆ ಯೆರೂಸಲೇಮಿನಲ್ಲಿ ಅಪೊಸ್ತಲರನ್ನು ಸಂಧಿಸುವುದಕ್ಕಿಂತ ಮುಂಚೆ)? ಅಥವಾ ಪೌಲನ ಮೂರನೇ ಪ್ರಯಾಣದ ವೇಳೆ (ಅಪೊ.ಕೃತ್ಯ. 15 ರ ನಂತರ ಸಂಭವಿಸಿದ್ದು) ಬರೆಯಲ್ಪಟ್ಟಿತಾ?

# ಪೌಲನ ಪತ್ರಿಕೆಗಳು

| ವರ್ಷ | ಪೌಲನ ಜೀವನದಲ್ಲಿನ ಘಟನೆಗಳು | ಪತ್ರಿಕೆಗಳು |
|---|---|---|
| ಕ್ರಿ.ಶ. 1 | ಪೌಲನ ತಾರ್ಷಿಸಿನಲ್ಲಿ ಜನಿಸುತ್ತಾನೆ | |
| ಕ್ರಿ.ಶ. 15 | ಪೌಲನು ಯೆರೂಸಲೇಮಿನಲ್ಲಿ ಗಮಲಿಯೇಲನ ಬಳಿ ವಿದ್ಯಾಭ್ಯಾಸ ಮಾಡುತ್ತಾನೆ | |
| ಕ್ರಿ.ಶ. 34 | ಧಮಸ್ಕದ ದಾರಿಯಲ್ಲಿ ಪೌಲನ ಮಾನಸಾಂತರ | |
| ಕ್ರಿ.ಶ. 48-49 | ಪೌಲನ ಮೊದಲ ಸೇವಾ ಪ್ರಯಾಣ | |
| ಕ್ರಿ.ಶ. 49 | ಯೆರೂಸಲೇಮಿನಲ್ಲಿ ಅಪೊಸ್ತಲರ ಭೇಟಿ (ಅಪೋ.15) | |
| ಕ್ರಿ.ಶ. 50-52 | ಪೌಲನ ಎರಡನೇ ಸೇವಾ ಪ್ರಯಾಣ | ಕೊರಿಂಥದಿಂದ *ಮೊದಲನೇ ಥೆಸಲೋನಿಕ* (ಅಥೇನ್ಸ್)<br>ಕೊರಿಂಥದಿಂದ *ಎರಡನೇ ಥೆಸಲೋನಿಕ* |
| ಕ್ರಿ.ಶ. 53-57 | ಪೌಲನ ಮೂರನೇ ಸೇವಾ ಪ್ರಯಾಣ | ಎಫೆಸದಿಂದ *ಗಲಾತ್ಯದವರಿಗೆ*<br>ಎಫೆಸದಿಂದ *ಒಂದನೇ ಕೊರಿಂಥದವರಿಗೆ*<br>ಮೆಕೆದೋನ್ಯದಿಂದ *ಎರಡನೇ ಕೊರಿಂಥ*<br>ಕೊರಿಂಥದಿಂದ *ರೋಮಾಪುರದವರಿಗೆ* |
| ಕ್ರಿ.ಸ. 57 | ಪೌಲನು ಯೆರೂಸಲೇಮಿನಲ್ಲಿ ಸೆರೆಯಾದದ್ದು | |
| ಕ್ರಿ.ಶ. 57-59 | ಕೈಸರೈನ ಸೆರೆಯಲ್ಲಿ ಪೌಲನು | |
| ಕ್ರಿ.ಶ. 59-60 | ರೋಮಿಗೆ ಪೌಲನ ಪ್ರಯಾಣ | |
| ಕ್ರಿ.ಶ. 60-62 | ರೋಮಿನಲ್ಲಿ ಪೌಲನ ಗೃಹಬಂಧನ | *ಕೊಲೊಸ್ಸೆಯವರಿಗೆ*<br>*ಫಿಲೆಮೋನನಿಗೆ*<br>*ಎಫೆಸದವರಿಗೆ*<br>*ಫಿಲಿಪ್ಪಿಯವರಿಗೆ* |
| ಕ್ರಿ.ಶ. 62-65 | ಪೌಲನ ನಂತರದ ಪ್ರಯಾಣಗಳು | ಮೆಕೆದೋನ್ಯದಿಂದ *ಒಂದನೇ ತಿಮೊಥೆ*<br>ಮೆಕೆದೋನ್ಯದಿಂದ *ತೀತನು* |
| ಕ್ರಿ.ಶ. 65-66 | ರೋಮಿನಲ್ಲಿ ಪೌಲನ ಎರಡನೇ ಸೆರೆ | ರೋಮಿನಿಂದ *ಎರಡನೇ ತಿಮೊಥೆ* |
| ಕ್ರಿ.ಶ. 66 | ನೀರೋ ಚಕ್ರವರ್ತಿಯಿಂದ ರೋಮಿನಲ್ಲಿ ಪೌಲನ ಶಿರಚ್ಛೇದ ಹೊಂದಿದ್ದು | |

# ರೋಮಾಪುರದವರಿಗೆ

ಪೌಲನ ಮೂರನೇ ಸೇವಾ ಪ್ರಯಾಣವು (ಅಪೊ. 18:23-20:16) ಮುಗಿಯುತ್ತ ಬಂದಾಗ, ಪೌಲನು ಕೊರಿಂಥದಿಂದ ರೋಮಿಗೆ ಪತ್ರಿಕೆ ಬರೆಯುತ್ತಾನೆ. ಬಹಳ ದಿನದಿಂದ ಆತನು ರೋಮನ್ ಸಾಮ್ರಾಜ್ಯದ ರಾಜಧಾನಿಯನ್ನು ಸಂಧಿಸಲು ಯೋಜನೆ ಹಾಕಿಕೊಂಡಿದ್ದನು, ಮತ್ತು ಈಗ ಆತನಿಗೊಂದು ಅವಕಾಶ ಸಿಗುತ್ತದೆ (1:10-13). ಆದರೆ ಪೌಲನಿಗೆ ಇನ್ನೂ ದೊಡ್ಡ ಯೋಜನೆಗಳಿರುತ್ತವೆ. ರೋಮಿನಿಂದ ಸ್ಪೇನಿಗೆ ಪ್ರಯಾಣಿಸಲು ಆತನು ಬಯಸುತ್ತಾನೆ (15:23).

ಹೀಗೆ ಒಂದು ರೀತಿಯಲ್ಲಿ ರೋಮಾಪುರದವರಿಗೆ ಒಂದು ಪರಿಚಯಾತ್ಮಕ ಪತ್ರಿಕೆಯಾಗಿದೆ. ಇದರಲ್ಲಿ ಪೌಲನು ತನ್ನ ಸುವಾರ್ತೆಯನ್ನು ಪ್ರಸ್ತುತಪಡಿಸುತ್ತಾನೆ. ಇಲ್ಲಿ ನಾವು ಸುವಾರ್ತೆಯಲ್ಲಿನ ಮುಖ್ಯ ಅಂಶಗಳ ಒಂದು ವಿವರವಾದ ನಿರೂಪಣೆಯನ್ನು ಕಾಣಬಹುದು. ರೋಮಾ ಪತ್ರಿಕೆಯಲ್ಲಿ ದೇವರೊಂದಿಗಿನ ಮನುಷ್ಯನ ಅನ್ಯೋನ್ಯತೆಗಾಗಿನ ಅಡಿಪಾಯವು ಅದ್ಭುತವಾದ ರೀತಿಯಲ್ಲಿ ತಿಳಿಸಲ್ಪಟ್ಟಂತೆ (3:21-26), ನಂಬಿಕೆಯಿಂದಲೇ ನೀತಿವಂತರಾಗುವ ಸಿದ್ಧಾಂತವು ಯೇಸುವಿನ ಮರಣ ಮತ್ತು ಪುನರುತ್ಥಾನದ ಮೇಲೆ ಆದರಿತಗೊಂಡಿದೆ.

ಹೆಚ್ಚಿನ ಪೌಲನ ಪತ್ರಿಕೆಗಂತೆ ರೋಮಾಪುರದವರಿಗೆ ಬರೆದ ಪತ್ರಿಕೆಯು ಒಂದು ಭಾಗದಲ್ಲಿ ಸಿದ್ಧಾಂತವು ವ್ಯಾಖ್ಯಾನಿಸಲ್ಪಟ್ಟು (ಅಧ್ಯಾಯ 1-11) ಮತ್ತು ಒಂದು ಭಾಗವು ಎಚ್ಚರಿಕೆಯಾಗಿ ವಿಂಗಡಿಸಲ್ಪಟ್ಟಿದೆ (12-16).

ರೋಮಿನ ಸಭೆಯಲ್ಲಿ ಒಂದು ಪ್ರಾಯೋಗಿಕ ಸಮಸ್ಯೆಯಿತ್ತು. ಅನ್ಯಹಿನ್ನಲೆಯ ಮತ್ತು ಯೆಹೂದಿ ಹಿನ್ನಲೆಯ ವಿಶ್ವಾಸಿಗಳ ನಡುವಿನ ಸಮಸ್ಯೆಯೊಂದಿಗೆ ಪೌಲನು ತನ್ನ ಪತ್ರಿಕೆಯುದ್ದಕ್ಕೂ ವ್ಯವಹರಿಸುತ್ತಾನೆ. ಕ್ಲೌದಿಯ ಚಕ್ರವರ್ತಿಯ ತೀರ್ಮಾನದ ಮೇರೆಗೆ ಯೆಹೂದಿ ವಿಶ್ವಾಸಿಗಳನ್ನು ರೋಮಿನಿಂದ ಹೊರಗೆ ಕಳಿಸಲಾಗುತ್ತದೆ (ಅಪೊ.ಕೃತ್ಯ 18:1) ಮತ್ತು ಕ್ರಿ.ಶ. 54 ರಲ್ಲಿ ಚಕ್ರವರ್ತಿಯ ಮರಣದವರೆಗೂ ಅವರು ಮರಳಿ ಬರಲು ಅಪ್ಪಣೆಯಿರಲಿಲ್ಲ. ಹೀಗೆ ಪೌಲನು ರೋಮಾಪುರದವರಿಗೆ ಬರೆಯುವ ಕೆಲ ವರ್ಷ ಮೊದಲು ರೋಮಿಗೆ ಯೆಹೂದಿ ಹಿನ್ನಲೆಯ ವಿಶ್ವಾಸಿಗಳ ಆಗಮನವು ಸಭೆಯಲ್ಲಿ ಉದ್ವಿಗ್ನ ಪರಿಸ್ಥಿತಿಯನ್ನುಂಟುಮಾಡಿತು. ಒಂದು ಗುಂಪು ಇನ್ನೊಂದನ್ನು ಕೀಳಾಗಿ ನೋಡತೊಡಗಿತು. ಹೀಗಾಗಿ ದೇವರ ಮುಂದೆ ಯಾರು ಹೆಚ್ಚಿಸಿಕೊಳ್ಳುವುದಕ್ಕೆ ಏನೂ ಇಲ್ಲವೆಂಬುದನ್ನು ಎರಡೂ ಗುಂಪಿಗೆ ಒತ್ತಿಹೇಳಲು ಪೌಲನು ಕೃಪೆಯಿಂದಲೇ ನ್ಯಾಯ (ಸಮರ್ಥನೆ) ಎಂಬುದರ ಕುರಿತಾದ ತನ್ನ ಬೋಧನೆಯನ್ನುಪಯೋಗಿಸುತ್ತಾನೆ.

ರೋಮಾ ಪತ್ರಿಕೆಯನ್ನು ಕೆಳಕಂಡಂತೆ ರಚನೆ ಮಾಡಬಹುದು:

1. ಎಲ್ಲಾ ಜನರ ಅನೀತಿವಂತಿಕೆ. ನಂಬಿಕೆಯಿಂದಲೇ ದೇವರ ನೀತಿಯನ್ನು ಹೊಂದಿಕೊಳ್ಳಬಹುದು (ಅಧ್ಯಾಯ 1-5)
2. ಕ್ರಿಸ್ತನ ಮೂಲಕ ಹೊಸ ಜೀವನ ಮತ್ತು ಪವಿತ್ರಾತ್ಮನ ಕಾರ್ಯ (ಅಧ್ಯಾಯ 6-8)
3. ಇಸ್ರಾಯೇಲ್ ಮತ್ತು ಯೆಹೂದ್ಯರ ಕುರಿತು ದೇವರ ಉದ್ದೇಶ (ಅಧ್ಯಾಯ 9-11)
4. ಹೊಸ ಜೀವನಶೈಲಿ: ನೀತಿಯು ಅಭ್ಯಾಸಿಸಲ್ಪಟ್ಟದ್ದು (ಅಧ್ಯಾಯ 12-15)

# 1 ಕೊರಿಂಥದವರಿಗೆ

ತನ್ನ ಎರಡನೇ ಸೇವಾ ಪ್ರಯಾಣದಲ್ಲಿ ಪೌಲನು ಸುಮಾರು ಒಂದೂವರೆ ವರ್ಷಗಳ ಮಟ್ಟಿಗೆ ಕೊರಿಂಥದಲ್ಲಿ ಸೇವೆ ಮಾಡುತ್ತಾನೆ (ಅಪೊ. 18). ತದನಂತರ ತನ್ನ ಮೂರನೇ ಸೇವಾ ಪ್ರಯಾಣದಲ್ಲಿ ಎಫೆಸವನ್ನು ಆಧಾರ ಅಥವಾ ಅಡಿಪಾಯವಾಗಿ ಮೂರು ವರ್ಷಗಳವರೆಗೆ ಇಟ್ಟುಕೊಳ್ಳುತ್ತಾನೆ. ಆ ವೇಳೆಯಲ್ಲಿ ಪೌಲನು ಕೊರಿಂಥದಲ್ಲಿನ ಸಭೆಗೆ ನಾಲ್ಕು (ಬಹುಶ ಐದು) ಪತ್ರಿಕೆಗಳನ್ನು ಬರೆಯುತ್ತಾನೆ. ಇವುಗಳಲ್ಲಿ ಎರಡು ಪತ್ರಿಕೆಗಳು ಉಳಿದುಕೊಂಡಿವೆ ಮತ್ತು ಅವು ಒಸ ಒಡಂಬಡಿಕೆಯಲ್ಲಿ ಸೇರಿಸಲ್ಪಟ್ಟಿವೆ.

ಕೊರಿಂಥವು ಎಲ್ಲಾ ರಾಷ್ಟ್ರೀಯತೆಯ ಜನರು ನೆಲೆಸಿರುವ ಒಂದು ಜನನಿಬಿಡ ಗ್ರೀಕ್ ಪಟ್ಟಣವಾಗಿತ್ತು. ಇದು ತನ್ನ ವ್ಯಾಪಾರಕ್ಕೆ, ಅನೇಕ ಧರ್ಮಗಳಿಗೆ, ಅಲ್ಲದೆ ಅದರ ಅನೈತಿಕತೆಗೆ ಸಹ ಹೆಸರುವಾಸಿಯಾಗಿತ್ತು.

ಮೊದಲ ಕೊರಿಂಥ ಪತ್ರಿಕೆಯು ಓದುಗರಾದ ನಮಗೆ ವ್ಯವಹರಿಸಲು (ಬಗೆಹರಿಸಲು) ಸಭೆಯೊಳಗೆ ಇರುವ ಅನೇಕ ವಾಸ್ತವಿಕ ಸಮಸ್ಯೆಗಳಿಗೆ ಒಳನೋಟಗಳನ್ನು ಕೊಡುತ್ತದೆ. ಸಭೆಯ ಎಲ್ಲಾ ಸಮಸ್ಯೆಗಳಿಗೆ ಪೌಲನು ಸೂಚಿಸುವ ಪರಿಹಾರಗಳ ನಡುವೆ – ಕ್ರೈಸ್ತೀಯ ಪ್ರೀತಿಯ ಪ್ರಶಂಸೆ (ಅಧ್ಯಾಯ 13) ಎಂಬ ಸತ್ಯವೇದದಲ್ಲಿನ ಒಂದು ಜನಪ್ರಿಯ ವಾಕ್ಯಭಾಗವನ್ನು ನಾವು ಕಾಣಬಹುದು.

ಮೊದಲ ಕೊರಿಂಥ ಪತ್ರಿಕೆಯನ್ನು ಪೌಲನು ಬರೆಯುವ ಸಮಸ್ಯೆಗಳ ಕುರಿತಾಗಿ ಈ ರೀತಿಯಾಗಿ ರಚನೆ ಮಾಡಬಹುದು:

1. ಸಭೆಯಲ್ಲಿನ ವಿಭಜನೆ (ಅಧ್ಯಾಯ 1-4)
2. ವಿಶ್ವಾಸಿಗಳ ನಡುವಿನ ಅನೈತಿಕ ಸ್ವಭಾವ ಮತ್ತು ವ್ಯಾಜ್ಯ / ಮೊಕದ್ದಮೆಗಳು (ಅಧ್ಯಾಯ 5-6)
3. ಮದುವೆ ಕುರಿತ ಸಲಹೆಗಳು (ಅಧ್ಯಾಯ 7)
4. ಸಭೆಯಲ್ಲಿನ ಜವಾಬ್ದಾರಿ ಮತ್ತು ಸ್ವಾತಂತ್ರ್ಯ (ಅಧ್ಯಾಯ 8-10)
5. ಬಹಿರಂಗ ಆರಾಧನೆಯ ಕುರಿತ ಸಲಹೆಗಳು (ಅಧ್ಯಾಯ 11)
6. ಆತ್ಮೀಕ ವರಗಳ ಬಳಕೆ (ಅಧ್ಯಾಯ 12-14)
7. ಪುನರುತ್ಥಾನದ ಕುರಿತ ಸಲಹೆಗಳು (ಅಧ್ಯಾಯ 15)
8. ಯೆರೂಸಲೇಮಿನಲ್ಲಿನ ದೇವ ಜನರಿಗಾಗಿ ಸಂಗ್ರಹ ಮತ್ತು ವೈಯಕ್ತಿಕ ವಂದನೆಗಳು (ಅಧ್ಯಾಯ 16)

# 2 ಕೊರಿಂಥದವರಿಗೆ

ಪೌಲನ ಪತ್ರಿಕೆಯು ಆತನ ಅಪೊಸ್ತಲೀಯ ಸೇವೆಗೆ ಒಂದು ಒಳನೋಟವನ್ನು ನಮಗೆ ಕೊಡುತ್ತದೆ. ವಾಸ್ತವವಾಗಿ ಕೊರಿಂಥದಲ್ಲಿ ಆತನ ಸೇವೆಯನ್ನು ಪ್ರಶ್ನಿಸಿದ ಜನರಿಗೆ ಬರೆದ ಪೌಲನ ಪ್ರತಿರೋಧವಾಗಿ ಕಾಣಬಹುದು. ಈ ವೇಳೆಗಾಗಲೇ ಕೊರಿಂಥದಲ್ಲಿ ಪೌಲ ಮತ್ತು ಸಭೆಯ ನಡುವಿನ ಸಂಬಂಧವು ಒಂದು ನಿರ್ಣಾಯಕ ಹಂತಕ್ಕೆ ತಲುಪಿತ್ತು, ಮತ್ತು ಕೆಲ ವಿಶ್ವಾಸಿಗಳು ಆತನನ್ನು ಭಾವೋದ್ವೇಗದಿಂದ ವಿರೋಧಿಸುತ್ತಿದ್ದರು.

ಪತ್ರಿಕೆಯ ಮೊದಲ ಭಾಗದಲ್ಲಿ (ಅಧ್ಯಾಯ 1-7) ಪೌಲನು ತನ್ನ ನಡತೆ ಮತ್ತು ಅಪೊಸ್ತಲೀಯ ಸೇವೆಯನ್ನು ವಿವರಿಸುತ್ತಾನೆ.

ಒಬ್ಬ ಅಪೊಸ್ತಲನ ಮುಖ್ಯ ಆಜ್ಞೆಯು ನಂಬಿಗಸ್ತನಾಗಿರುವುದು ಮತ್ತು ಎಲ್ಲಾ ಮನುಷ್ಯರ ರಕ್ಷಣೆಗಾಗಿನ ದೇವರ ನೀತಿಯು ಯೇಸುವಿನಲ್ಲಿ ಪ್ರಕಟಗೊಂಡಿದೆ ಎಂಬ ಮರುಸಂಧಾನದ ಸಂದೇಶವನ್ನು ಸಂರಕ್ಷಿಸುವುದಾಗಿದೆ (5:18-20).

ಎರಡನೇ ಭಾಗದಲ್ಲಿ (ಅಧ್ಯಾಯ 8-9) ಪೌಲನು ತಾನು ನೇತೃತ್ವವಹಿಸಿದ ಯೆರೂಸಲೇಮಿನಲ್ಲಿನ ಸಭೆಗಾಗಿ ಹಣ ಸಂಗ್ರಹಿಸುವ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಕೊರಿಂಥದಲ್ಲಿನ ವಿಶ್ವಾಸಿಗಳನ್ನು ಉತ್ತೇಜಿಸುತ್ತಾನೆ. ಇಲ್ಲಿ ನಾವು ಅಗತ್ಯದಲ್ಲಿದ್ದವರಿಗೆ ಕೊಡುವ ಮತ್ತು ನಮ್ಮಲ್ಲಿರುವುದನ್ನು ಅವರೊಂದಿಗೆ ಹಂಚಿಕೊಳ್ಳುವುದರ ಪ್ರಾಮುಖ್ಯತೆಯ ಕುರಿತು ಬಹುಮುಖ್ಯವಾದ ಬೋಧನೆಯನ್ನು ಕಾಣುತ್ತೇವೆ.

ಪತ್ರಿಕೆಯ ಮೂರನೇ ಭಾಗದಲ್ಲಿ (ಅಧ್ಯಾಯ 10-13) ಪೌಲನು ತನ್ನನ್ನು ಟೀಕಿಸಿದವರಿಗೆ ವಿರುದ್ಧವಾಗಿ ತನ್ನನ್ನು ರಕ್ಷಿಸಿಕೊಳ್ಳಲು ಕಠಿಣವಾದ ಪದಗಳನ್ನು ಬಳಸುತ್ತಾನೆ. ಇಲ್ಲಿ ನಾವು ಆತನಿಗೆ ಏನೋ ಹಿಂಸಿಸುತ್ತಿದ್ದರ ಕುರಿತಾಗಿ ಅಂದರೆ "ಶರೀರದಲ್ಲಿನ ಶೂಲ"ದ ಕುರಿತು ಜನಪ್ರಿಯ ವಾಕ್ಯಭಾಗವನ್ನು ನಾವು ಕಾಣುತ್ತೇವೆ (12:7).

## ಗಲಾತ್ಯದವರಿಗೆ

ಗಲಾತ್ಯದವರಿಗೆ ಪೌಲನ ಪತ್ರಿಕೆಯು ಯಾವಾಗ ಬರೆಯಲ್ಪಟ್ಟಿದೆ ಎಂಬುದರ ಕುರಿತು ಸತ್ಯವೇದ ಪಂಡಿತರು ಒಪ್ಪುವುದಿಲ್ಲ. ಇದಕ್ಕೆ ಕಾರಣ "ಗಲಾತ್ಯದವರ" ಕುರಿತ ಚರ್ಚೆ. ಅವರು ಯಾರಾಗಿದ್ದರು? ಒಂದು ವೇಳೆ ಅವರು ರೋಮನ್ ಪ್ರಾಂತ್ಯದ "ಗಲಾತ್ಯ" ನಿವಾಸಿಗಳಾಗಿದ್ದರೆ ಪತ್ರಿಕೆಯು ಆತನ ಮೊದಲ ಸೇವಾ ಪ್ರಯಾಣವಾದ ತಕ್ಷಣ ಮತ್ತು ಕ್ರಿ.ಶ. 49 ರಲ್ಲಿ ಯೆರೂಸಲೇಮಿನಲ್ಲಿನ ಅಪೊಸ್ತಲರ ಭೇಟಿಗಿಂತ ಮೊದಲು ಬರೆಯಲ್ಪಟ್ಟಿರಬಹುದು. ಒಂದು ವೇಳೆ ಅವರು "ಗಲಾತ್ಯದ" ಹಳೆಯ ಜಿಲ್ಲೆಗೆ ಸೇರಿದ ನಿವಾಸಿಗಳಾಗಿದ್ದರೆ ಇದು ಆತನ ಸೇವೆಯ ಎರಡನೇ ಪ್ರಯಾಣದ ನಂತರ ಬರೆಯಲ್ಪಟ್ಟಿರಬಹುದು.

ಆದರೆ ಪತ್ರಿಕೆಯ ಸಂದರ್ಭಕ್ಕೆ ಯಾವುದೇ ಅಸಮ್ಮತಿಯಿಲ್ಲ. ಕೆಲ ಬೋಧಕರುಗಳು ಸಭೆಗೆ ಬಂದು ಎಲ್ಲಾ ನಿಜವಾದ ವಿಶ್ವಾಸಿಗಳು ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸಬೇಕು ಮತ್ತು ಸುನ್ನತಿ ಮಾಡಿಕೊಳ್ಳಬೇಕೆಂದು ಹೇಳಿದ್ದನ್ನು ಪೌಲನು ಕೇಳಿಸಿಕೊಂಡಿದ್ದನು. ಈ ಬೋಧನೆಯ ಬಗ್ಗೆ ಪೌಲನು ತೀರಾ ಬೇಸರಗೊಂಡಿದ್ದನು. ಈ ವ್ಯತ್ಯಾಸಕರವಾದ ಸುವಾರ್ತೆಯು ಗಲಾತ್ಯದವರನ್ನು ದೇವರಿಂದ ದೂರಮಾಡುವುದು ಮತ್ತು ವಿಶ್ವಾಸಿಗಳು ಕ್ರಿಸ್ತನಲ್ಲಿ ಸ್ವಾತಂತ್ರ್ಯವನ್ನು ಕಳಕೊಳ್ಳಬಹುದೇನೋ ಎಂಬುದಾಗಿ ಭಯಗೊಂಡಿದ್ದನು. ತಾನು ಸಾರಿದ ಸುವಾರ್ತೆಯ ಮೂಲಕ ಈ ಸ್ವಾಂತಂತ್ರ್ಯವನ್ನು ಪೌಲನು ಅವರಿಗೆ ತಂದಿದ್ದನು. ಕ್ರಿಸ್ತನಲ್ಲಿನ ನವಜೀವನವು ದೇವರಿಂದ ಬಂದ ವರ ಅಥವಾ ಬಹುಮಾನವಾಗಿದೆ, ನಂಬುವವರೆಲ್ಲರಿಗೂ ಇದು ಲಭ್ಯವಿದೆ ಎಂಬುದಾಗಿ ಪೌಲನು ಬೋಧಿಸಿದ್ದನು. ಯೇಸು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ಹೊರತು ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲ (2:16). ಈ ಕೃಪಾ ಸುವಾರ್ತೆಯನ್ನು ಅನೇಕರು ಸ್ವೀಕರಿಸಿದರು. ಈಗ ಬೋಧಕರುಗಳು ಬಂದು ಗಲಾತ್ಯದವರು ಹಳೇ ಒಡಂಬಡಿಕೆಯ ನಿಯಮಗಳನ್ನು ಪಾಲಿಸಬೇಕೆಂದು ಹೇಳುತ್ತಾದ್ದಾರೆ. ಹೀಗಾಗಿ ಈ ಪತ್ರಿಕೆಯು ಆದಿಸಭೆಯಲ್ಲಿನ ಒಂದು ಬಹುಮುಖ್ಯ ಪ್ರಶ್ನೆಯೊಂದಿಗೆ ವ್ಯವಹರಿಸುತ್ತದೆ: ಅನ್ಯಹಿನ್ನಲೆಯಿಂದ ಬಂದ ವಿಶ್ವಾಸಿಗಳು ಮೋಶೆಯ ಧರ್ಮಶಾಸ್ತ್ರಕ್ಕೆ ಬದ್ಧರಾಗಿರಬೇಕಾ? ಮತ್ತು

ನಿಜವಾದ ಕ್ರೈಸ್ತರಾಗಲು ಅವರು ಸುನ್ನತಿ ಮಾಡಿಸಿಕೊಳ್ಳಬೇಕಾ? ಪೌಲನ ಉತ್ತರವು "ಇಲ್ಲ" ಎಂಬುದಾಗಿ ಪ್ರತಿಧ್ವನಿಸುತ್ತದೆ.

ಗಲಾತ್ಯ ಪತ್ರಿಕೆಯನ್ನು ಈ ರೀತಿಯಾಗಿ ರಚನೆ ಮಾಡಬಹುದು:

1. ಸುವಾರ್ತೆಯು ಯೇಸು ಕ್ರಿಸ್ತನ ಮೂಲಕ ದೇವರಿಂದ ಪ್ರಕಟಿಸಲ್ಪಟ್ಟಿದೆ (ಅಧ್ಯಾಯ 1-2)
2. ಸುವಾರ್ತೆಯ ಸ್ವಾತಂತ್ರ್ಯವು ಕೃಪೆಯಿಂದ ಬರುವುದೇ ಹೊರತು ಧರ್ಮಶಾಸ್ತ್ರದಿಂದಲ್ಲ (ಅಧ್ಯಾಯ 3-4)
3. ಸುವಾರ್ತಾ ಶಕ್ತಿಯು ಆತ್ಮನಿಂದ ಬರುವುದಾಗಿದೆ (ಅಧ್ಯಾಯ 5-6)

## ಎಫೆಸದವರಿಗೆ

ಎಫೆಸ ಪತ್ರಿಕೆಯು ಸೆರೆಮನೆಯ ಪತ್ರಿಕೆಗಳೆಂದು ಕರೆಯುವ ರೋಮಿನಲ್ಲಿ ಪೌಲನ ಮೊದಲನೇ ಜೈಲುವಾಸದ ಅವಧಿಯಲ್ಲಿ ಬರೆಯಲ್ಪಟ್ಟ ನಾಲ್ಕು ಪತ್ರಿಕೆಗಳಲ್ಲಿ ಒಂದಾಗಿದೆ. ಹಳೆಯ ಪತ್ರಿಕೆಯಲ್ಲಿ ಮೊದಲ ವಚನದಲ್ಲಿ "ಎಫೆಸದಲ್ಲಿ" ಎಂಬ ಪದಗಳಿಲ್ಲ. ಪೌಲನು ಯಾವುದೇ ವೈಯಕ್ತಿಕ ವಂದನೆಗಳನ್ನು ತಿಳಿಸದೇ ಇರುವುದರಿಂದ ಎಫೆಸದಲ್ಲಿ ಒಂದು ಸಭೆಯೊಂದಿಗೆ ಇತರ ಸಭೆಗಳಿಗೆ ಸಹ ಸಂಬಂಧಪಟ್ಟಿರುವುದರಿಂದ ಇದನ್ನು ಒಂದು "ವೃತ್ತಾಕಾರದ ಪತ್ರಿಕೆ" ಎಂಬುದಾಗಿ ಅರ್ಥೈಸುತ್ತದೆ.

ಈ ಪತ್ರಿಕೆಯು ಒಂದು ವಿಷಯವಸ್ತು "ಸಭೆಯಾಗಿದೆ". ಇದರ ಮೂಲಕ "ಕ್ರಿಸ್ತನಲ್ಲಿ ಸಮಸ್ತವೂ ಒಂದಾಗುವುದಕ್ಕಾಗಿ" ದೇವರ ಯೋಜನೆಯು ನೆರವೇರುವುದಾಗಿದೆ. ಸಭೆಯನ್ನು ವರ್ಣಿಸಲು ಪೌಲನು ಏಳು ರೂಪಾಲಂಕಾರಗಳನ್ನುಪಯೋಗಿಸುತ್ತಾನೆ:

1. ಒಂದು ದೇಹ (1:22-23)
2. ಒಂದು ದೇಶ (2:19)
3. ಒಂದು ಮನೆ (2:19)
4. ಒಂದು ಕಟ್ಟಡ (2:20)
5. ಒಂದು ದೇವಾಲಯ (ಮಂದಿರ) (2:21)
6. ಒಂದು ನಿವಾಸಸ್ಥಾನ (2:22)
7. ಒಂದು ಮದಲಗಿತ್ತಿ (5:25)

ಆದರೆ ಈ ರೂಪಾಲಂಕಾರಗಳ ಹೊರತಾಗಿಯೂ ಕ್ರಿಸ್ತನು ಸಭೆಯನ್ನು ಒಟ್ಟಾಗಿ ಹಿಡಿದಿರುವ ಶಕ್ತಿಯೆಂಬಂತೆ ನಿರೂಪಿಸಲ್ಪಟ್ಟಿದ್ದಾನೆ. ಆತನೇ ಆಶೀರ್ವದಿಸುವವನೂ (ಅಧ್ಯಾಯ 11), ನಮ್ಮನ್ನು ಒಂದು ಮಾಡುವವನೂ (ಅಧ್ಯಾಯ 2), ದೇವರ ಮರ್ಮಗಳನ್ನು ತಿಳಿಯಮಾಡುವವನೂ (ಅಧ್ಯಾಯ 3), ಅನ್ಯೋನ್ಯತೆಯನ್ನು ಕೊಡುವವನೂ (ಅಧ್ಯಾಯ 4), ಬೆಳಕನ್ನು ಕೊಡುವವನೂ (ಅಧ್ಯಾಯ 5), ಬಲವನ್ನು ಕೊಡುವವನೂ ಆಗಿದ್ದಾನೆ (ಅಧ್ಯಾಯ 6).

ಎಫೆಸ ಪತ್ರಿಕೆಯನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು:

1. ಕ್ರಿಸ್ತನಲ್ಲಿನ ಆಶೀರ್ವಾದ. ಇದು ದೈವಶಾಸ್ತ್ರವಾಗಿದೆ: ಕ್ರಿಸ್ತನ ಮೂಲಕ ದೇವರ ಕಾರ್ಯ (ಅಧ್ಯಾಯ 1-3)

2. ಕ್ರಿಸ್ತನಲ್ಲಿನ ನಡಿಗೆ. ಇದು ನೀತಿಶಾಸ್ತ್ರವಾಗಿದೆ: ಕ್ರಿಸ್ತನ ಮೂಲಕ ದೇವರ ಕಾರ್ಯಕ್ಕೆ ವಿಶ್ವಾಸಿಗಳ ಪ್ರತಿಕ್ರಿಯೆ (ಅಧ್ಯಾಯ 4-6).

## ಫಿಲಿಪ್ಪಿಯವರಿಗೆ

ಫಿಲಿಪ್ಪಿಯವರಿಗೆ ಸಹ ಒಂದು ಸೆರೆಮನೆಯ ಪತ್ರಿಕೆಯಾಗಿದೆ. ಇದು ಎಫೆಸಕ್ಕಿಂತಲೂ ಹೆಚ್ಚು ವೈಯಕ್ತಿಕವಾಗಿದ್ದು ಸಭೆ ಮತ್ತು ಪೌಲನ ನಡುವಿನ ಸಂಬಂಧದ ಬಗ್ಗೆ ಬಹಳಷ್ಟು ವಿವರಗಳನ್ನು ಒಳಗೊಂಡಿದೆ.

ಫಿಲಿಪ್ಪಿಯು ಯೂರೋಪಿನಲ್ಲಿ ಪೌಲನು ಸಭೆಯನ್ನು ಸ್ಥಾಪಿಸಿದ ಮೊದಲ ಪಟ್ಟಣವಾಗಿದೆ. ಇದು ಆತನ ಸೇವೆಯ ಎರಡನೇ ಪ್ರಯಾಣದಲ್ಲಿ ಸ್ಥಾಪಿಸಲ್ಪಟ್ಟಿತ್ತು (ಅಪೊ. 16). ಆ ನಿಮಿತ್ತ ಆತನು ಈ ಸಭೆಯೊಂದಿಗೆ ಒಂದು ಪ್ರೀತಿಯ ಮತ್ತು ಸ್ನೇಹ ಸಂಬಂಧವನ್ನು ಹೊಂದಿದ್ದಿರಬಹುದು.

ಈ ಪತ್ರಿಕೆಯ ಮುಖ್ಯ ಸಂದರ್ಭವೆಂದರೆ ತಾನು ಸಭೆಯಿಂದ ಹೊಂದಿದ ಬೆಂಬಲ (ಸಹಾಯ) ಮತ್ತು ಬಹುಮಾನಕ್ಕಾಗಿ ಪೌಲನು ಕೃತಜ್ಞತೆ ಹೇಳಲು ಬಯಸುವುದಾಗಿದೆ. ಈ ಪುಸ್ತಕದುದ್ದಕ್ಕೂ ಕೃತಜ್ಞತೆ ಮತ್ತು ಆನಂದದ ಭಾವವನ್ನು ಕಾಣಬಹುದು. ಅದೇ ವೇಳೆ ಪೌಲನು ಸಭೆಯನ್ನು ಎಚ್ಚರಿಸಲು ಸಹ ಅವಕಾಶ ತೆಗೆದುಕೊಳ್ಳುತ್ತಾನೆ. ಸುಳ್ಳು ಬೋಧಕರುಗಳು ಈ ಸಭೆಗೆ ಬಂದಿದ್ದರು, ಅಲ್ಲದೆ ವಿಶ್ವಾಸಿಗಳ ನಡುವೆ ಬಿರುಕನ್ನು ತಂದುಹಾಕಿದರು (4:2). ಗರ್ವಪಡಬಾರದು, ಬದಲಾಗಿ "ತನ್ನನ್ನು ತಗ್ಗಿಸಿಕೊಂಡು, ಶಿಲುಬೆಯ ಮರಣವನ್ನು ಹೊಂದುವಷ್ಟರಮಟ್ಟಿಗೆ ವಿಧೇಯನಾದ" ಕ್ರಿಸ್ತನ ಮಾದರಿಯನ್ನು ಪಾಲಿಸಬೇಕೆಂದು ಪೌಲನು ಫಿಲಿಪ್ಪಿಯವರಿಗೆ ಉತ್ತೇಜಿಸುತ್ತಾನೆ (2:8).

ನಾಲ್ಕು ಅಧ್ಯಾಯಗಳ ಮೇಲೆ ನಾವು ಕೆಳಕಂಡ ಶೀರ್ಷಿಕೆ ಕೊಡಬಹುದು:

1. ಕ್ರಿಸ್ತನು ನಮ್ಮ ಜೀವಿತಕ್ಕೆ ಅರ್ಥ ಮತ್ತು ಗುರಿಯನ್ನು ಕೊಡುತ್ತಾನೆ (ಅಧ್ಯಾಯ 1)
2. ದೀನತೆ ಮತ್ತು ವಿಧೇಯತೆಯಲ್ಲಿ ಕ್ರಿಸ್ತನೇ ನಮ್ಮ ಮಾದರಿಯಾಗಿದ್ದಾನೆ (ಅಧ್ಯಾಯ 2)
3. ಕ್ರಿಸ್ತನು ನಮಗೆ ಭವಿಷ್ಯಕ್ಕಾಗಿ ಒಂದು ನಿರೀಕ್ಷೆ ಕೊಡುತ್ತಾನೆ (ಅಧ್ಯಾಯ 3)
4. ನಮ್ಮ ಜೀವನದ ವಿವಿಧ ಸನ್ನಿವೇಶಗಳಲ್ಲಿ ಕ್ರಿಸ್ತನು ನಮಗೆ ಬಲವನ್ನು ಕೊಡುತ್ತಾನೆ (ಅಧ್ಯಾಯ 4)

## ಕೊಲೊಸ್ಸೆಯವರಿಗೆ

ಕೊಲೊಸ್ಸೆಯವರಿಗೆ ಬರೆದದ್ದು ಸೆರೆಮನೆಯ ಪತ್ರಿಕೆಗಳಲ್ಲಿ ಮೂರನೆಯದಾಗಿದೆ. ಅನೇಕ ರೀತಿಯಲ್ಲಿ ಇದು ಎಫೆಸ ಪತ್ರಿಕೆಗೆ ಸಮಾನವಾಗಿದೆ. ಆದರೆ ಪೌಲನು ಸ್ಥಾಪಿಸದ ಮತ್ತು ಸಂಧಿಸದ ಸಭೆಗೆ ಬರೆದಿರಲಾಗಿ ಇದು ರೋಮಾಪುರದವರಿಗೆ ಬರೆದ ಪತ್ರಿಕೆಗೆ ಸಹ ಸಮಾನವಾಗಿದೆ.

ಈ ಪತ್ರಿಕೆಯಲ್ಲಿ ಕ್ರಿಸ್ತನು ಕೇವಲ ಸಭೆಯ ಒಡೆಯನಾಗಿ ಮಾತ್ರವಲ್ಲದೆ, ಇಡೀ ಸೃಷ್ಟಿಯ ಒಡೆಯನಾಗಿ ಸಹ ಚಿತ್ರಿಸಲ್ಪಟ್ಟಿದ್ದಾನೆ. ಕೊಲೊಸ್ಸೆಯು ರೋಮಿನಿಂದ ಪೂರ್ವಕ್ಕೆ ಹೋಗುವ ಒಂದು ಪ್ರಾಮುಖ್ಯ ವ್ಯಾಪಾರ ಮಾರ್ಗದಲ್ಲಿ ನೆಲೆಗೊಂಡಿತ್ತು. ಅನೇಕ ಮಂದಿ ತತ್ವಶಾಸ್ತ್ರಜ್ಞರು ಮತ್ತು ಧಾರ್ಮಿಕ ಬೋಧಕರುಗಳು ಈ ರೋಮನ್ ಹೆದ್ದಾರಿಯಲ್ಲಿ ಪ್ರಯಾಣಿಸುವಾಗ ಅಲ್ಲಿನ ಜನರೊಂದಿಗೆ ಮಾತನಾಡಲು ಕೊಲೊಸ್ಸೆಯಲ್ಲಿ ಇಳಿದುಕೊಳ್ಳುತ್ತಿದ್ದರು. ಸಭಾಸ್ಥಾಪಕನಾದ

ಎಪಫ್ರನು ಕೊಲೊಸ್ಸೆಯಲ್ಲಿನ ಸಭೆಗಿರುವ ಅಪಾಯಕಾರಿ ಸನ್ನಿವೇಶದ ಬಗ್ಗೆ ಮಾಹಿತಿ ಕೊಡಲು ರೋಮಿಗೆ ಪೌಲನ ಬಳಿಗೆ ಬರುತ್ತಾನೆ. ಸುಳ್ಳು ಬೋಧಕರುಗಳು ವಿಶ್ವಾಸಿಗಳ ನಡುವೆ ಗೊಂದಲವನ್ನು ಸೃಷ್ಟಿಸಿದ್ದರು. ಕ್ರಿಸ್ತನ ಕಾರ್ಯಗಳ ಜೊತೆ "ಜ್ಞಾನ" ಮತ್ತು "ಪರಿಪೂರ್ಣತೆ" ಸಹ ಅಗತ್ಯವಿದೆ ಎಂಬುದಾಗಿ ಅವರು ಬೋಧಿಸಿದರು. ಕಠಿಣವಾದ ಪ್ರಾಯಶ್ಚಿತ್ತ ಮತ್ತು ತೀವ್ರ ವೈರಾಗ್ಯ ಮತ್ತು ದೇವದೂತರ ಆರಾಧನೆಯ ಮೂಲಕ ಅವರು ಜಾಗತಿಕ ಶಕ್ತಿಯನ್ನು ನಿಯಂತ್ರಿಸಲು ಪ್ರಯತ್ನಿಸಿದರು (2:3, 8, 18, 20-23). ಇದರ ಪರಿಣಾಮವಾಗಿ ಕ್ರಿಸ್ತನನ್ನು ಕೆಳದರ್ಜೆಗೆ ತಳ್ಳಿ ಉಳಿದ ಒಡೆಯ/ಕರ್ತರ ನಡುವೆ ಒಬ್ಬನೆಂಬುದಾಗಿ ಯೋಚಿಸಲಾಯಿತು.

ಇದು ಈ ಪತ್ರಿಕೆಯ ಹಿನ್ನಲೆಯಾಗಿದೆ ಮತ್ತು ಈ ಕಾರಣದಿಂದಲೇ ಪೌಲನು ಕೊಲೊಸ್ಸೆಯವರಿಗೆ ಬರೆದಂತೆಯೇ ಇವರಿಗೆ ಬರೆಯುತ್ತಾನೆ. ಆತನು ಹೇಳುವ ಮುಖ್ಯ ಅಂಶವೇನೆಂದರೆ ಯೇಸು ಕ್ರಿಸ್ತನ ಕುರಿತ ಸುವಾರ್ತೆಗೆ ಏನನ್ನೂ ಸೇರಿಸಲಾಗದು. ಆತನು ಸೃಷ್ಟಿಗಳಲೆಲ್ಲಾ ಆತನೇ ಶ್ರೇಷ್ಠನಾದವನಾಗಿದ್ದಾನೆ ಮತ್ತು ಆತನೇ ದೇಹವಾಗಿರುವ ಸಭೆಗೆ ಶಿರಸ್ಸಾಗಿದ್ದಾನೆ.

ಕೊಲೊಸ್ಸೆ ಪತ್ರಿಕೆಯು ಎರಡು ಮುಖ್ಯ ಭಾಗಗಳನ್ನು ಒಳಗೊಂಡಿದೆ:

1. ದೈವಶಾಸ್ತ್ರ: ಯೇಸು ಕ್ರಿಸ್ತನ ಮೂಲಕ ದೇವರು ಮಾಡಿದ ಕಾರ್ಯದ ಕುರಿತು ಮತ್ತು ಕ್ರಿಸ್ತನ ಪೂರ್ಣ ಸಾರ್ವಭೌಮತ್ವ (ಅಧ್ಯಾಯ 1-2)
2. ನೀತಿಶಾಸ್ತ್ರ: ಕ್ರಿಸ್ತನ ಮೂಲಕ ದೇವರ ಕಾರ್ಯಗಳಿಗನುಸಾರವಾಗಿ ಜೀವನ ನಡೆಸಲು ಪ್ರಬೋಧನೆ (ಅಧ್ಯಾಯ 3-4)

# 1 ಥೆಸಲೋನಿಕದವರಿಗೆ

ತನ್ನ ಎರಡನೇ ಸೇವಾ ಪ್ರಯಾಣದಲ್ಲಿ ಮ್ಯಾಸಿಡೋನಿಯಾದ ರೋಮನ್ ಪ್ರಾಂತ್ಯದ ರಾಜಧಾನಿಯಾದ ಥೆಸಲೋನಿಕಕ್ಕೆ (ಅಪೊ. 17) ಪೌಲನು ಬಂದನು. ಅಲ್ಲಿ ಆತನು ಮೂರು ವಾರಗಳಿದ್ದು ಸಭಾಮಂದಿರದಲ್ಲಿರುವ ಎಲ್ಲಾ ಸಬ್ಬತ್ತುಗಳಲ್ಲಿ ಮಾತನಾಡಿದನು. ಯೇಸುವು ಗ್ರಂಥಗಳಲ್ಲಿನ ಮೆಸ್ಸೀಯನಾಗಿದ್ದಾನೆಂಬುದಾಗಿ ಅನೇಕ ಯೆಹೂದ್ಯರು ನಂಬಿದ್ದರು. ಅನೇಕ ಯೆಹೂದ್ಯರು ಸಿಟ್ಟಿಗೆದ್ದು ದಂಗೆಯನ್ನು ಪ್ರಾರಂಭಿಸಿದರು, ಹೀಗಾಗಿ ಪೌಲನು ಕೂಡಲೇ ಪಟ್ಟಣವನ್ನು ಬಿಟ್ಟುಹೋಗಬೇಕಾಯಿತು.

ನಂತರದಲ್ಲಿ ಆತನು ಕೊರಿಂಥಕ್ಕೆ ಬಂದಾಗ ಥೆಸಲೋನಿಕದಲ್ಲಿನ ಪರಿಸ್ಥಿತಿಯ ಬಗ್ಗೆ ಪೌಲನು ಮಾಹಿತಿ ಪಡಕೊಳ್ಳುತ್ತಾನೆ: ಅನೇಕ ಮಂದಿ ಶಿಷ್ಯರು ಯೇಸುವಿನ ಮೇಲೆ ನಂಬಿಕೆಯಿಟ್ಟದ್ದರಿಂದ ಯೆಹೂದ್ಯರು ಇನ್ನೂ ಸಮಸ್ಯೆಗಳನ್ನುಂಟುಮಾಡತೊಡಗಿದರು. ತಾವು ಪೌಲನಿಂದ ದೂರವಾಗಿದ್ದೇವೆಂಬುದಾಗಿ ವಿಶ್ವಾಸಿಗಳು ಯೋಚಿಸಿದರು. ಪೌಲನು ಬರೆದ ಈ ಪತ್ರಿಕೆಯು ಸಭೆಗೆ ಬೇಕಾದ ಸಲಹೆಯ ಅಗತ್ಯತೆಗೆ ಇರುವ ಒಂದು ಪ್ರತಿಕ್ರಿಯೆಯಾಗಿ ಬರೆಯಲ್ಪಟ್ಟಿದೆ.

ಈ ಪತ್ರಿಕೆಯಲ್ಲಿ ಪೌಲನು ಮೊದಲ ಬಾರಿಗೆ "ನಂಬಿಕೆ", ನಿರೀಕ್ಷೆ" ಮತ್ತು "ಪ್ರೀತಿಯ" ಕುರಿತ ಮೂರು ಮುಖ್ಯ ಕ್ರೈಸ್ತೀಯ ಸಂಗತಿಗಳ ಬಗ್ಗೆ ಬರೆಯುತ್ತಾನೆ. ಈ ಪತ್ರಿಕೆಯನ್ನು ರಚನೆ ಮಾಡಲು ಈ ಪದಗಳನ್ನು ಉಪಯೋಗಿಸಲು ಸಾಧ್ಯತೆಯಿದೆ:

1. ಥೆಸಲೋನಿಕದಲ್ಲಿನ ವಿಶ್ವಾಸಿಗಳ ನಡುವಿನ ನಂಬಿಕೆ (ಅಧ್ಯಾಯ 1)
2. ಪ್ರೀತಿ, ಮುಖ್ಯವಾಗಿ ವಿಶ್ವಾಸಿಗಳಿಗಾಗಿ ಪೌಲನು ಸೇವೆಯಲ್ಲಿ ತೋರಿಸಿದ ಪ್ರೀತಿ (ಅಧ್ಯಾಯ 2-3)

3. ನಿರೀಕ್ಷೆ: ಯೇಸು ಕ್ರಿಸ್ತನ ಎರಡನೇ ಬರೋಣದ ನಿರೀಕ್ಷೆಯೊಂದಿಗೆ ಸಂಬಂಧಿಸಿದ ಪ್ರಾಯೋಗಿಕ ಪ್ರಬೋಧನೆಗಳು (ಅಧ್ಯಾಯ 4-5)

# 2 ಥೆಸಲೋನಿಕದವರಿಗೆ

ಈ ಪತ್ರಿಕೆಯು ಮೊದಲ ಥೆಸಲೋನಿಕ ಪತ್ರಿಕೆ ಬರೆದ ಕೂಡಲೇ ಬರೆದಿರುವಂತೆ ತೋರುತ್ತದೆ. ಯೇಸುವಿನ ಎರಡನೇ ಬರೋಣದ ಕುರಿತು ಪೌಲನ ಬೋಧನೆಯನ್ನು ಸಭೆಯು ತಪ್ಪಾಗಿ ತಿಳಿದುಕೊಂಡಿತು. ಕೆಲ ವಿಶ್ವಾಸಿಗಳು ಸೋಮಾರಿಗಳಾಗಿ ಕೆಲಸ ಮಾಡುವುದನ್ನು ಬಿಟ್ಟು ಕೇವಲ ಯೇಸುವಿನ ಬರೋಣಕ್ಕಾಗಿ ಕಾಯತೊಡಗಿದರು.

ಹೀಗಾಗಿ ಪೌಲನು ಈಗ ಯೇಸುವಿನ ಎರಡನೇ ಬರೋಣದ ಅಂದರೆ ಆತನ ಬರೋಣಕ್ಕಿಂತ ಮೊದಲು ಸಂಭವಿಸಬೇಕಾದ ಸಂಗತಿಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಕೊಡುತ್ತಾನೆ.

ಈ ಪತ್ರಿಕೆಯನ್ನು ಕೆಳಕಂಡಂತೆ ಮೂರು ಭಾಗಗಳಾಗಿ ವಿಂಗಡಿಸಬಹುದು:

1. ಪೀಠಿಕೆ, ವಂದನೆ, ಯೇಸುವಿನ ಎರಡನೇ ಬರೋಣದ ಮೇಲೆ ಗಮನ ಹರಿಸುವುದು (ಅಧ್ಯಾಯ 1)
2. ಅಧರ್ಮಸ್ವರೂಪನು ಮತ್ತು ಯೇಸುವಿನ ಎರಡನೇ ಬರೋಣ (ಅಧ್ಯಾಯ 2)
3. ಎಚ್ಚರಿಕೆ/ಬುದ್ಧಿಮಾತುಗಳು: ಪ್ರಾರ್ಥನೆ ಮತ್ತು ಕ್ರಮವಾಗಿ ಜೀವಿಸಲು ಕರೆ (ಅಧ್ಯಾಯ 3)

# 1 ತಿಮೊಥೆ ಪತ್ರಿಕೆ

ಇದು ಸಭಾಪಾಲಕರುಗಳಿಗೆ ಬರೆದ "ಸಭಾಪಾಲಕರ ಪತ್ರಿಕೆಗಳೆಂದು" ಕರೆಯಲ್ಪಡುವ ಮೂರು ಪತ್ರಿಕೆಗಳಲ್ಲಿ ಮೊದಲನೆಯದಾಗಿದೆ. ಇವು ಒಂದು ನಿರ್ಧಿಷ್ಠ ಸ್ಥಳದಲ್ಲಿ ಕೆಲ ಸಮಯದ ಮಟ್ಟಿಗೆ ಸೇವೆಯನ್ನು ನೋಡಿಕೊಳ್ಳಲು ನೇಮಿಸಲಾದ ಜೊತೆಕೆಲಸದವರಿಗೆ ಬರೆದ ಪತ್ರಿಕೆಗಳಾಗಿವೆ. ಈ ಪತ್ರಿಕೆಗಳ ಘಟನೆಗಳು ರೋಮಿನಲ್ಲಿ ಪೌಲನ ಸೆರೆಯೊಂದಿಗೆ ಮುಕ್ತಾಯವಾಗುವ ಅಪೋಸ್ತಲರ ಕೃತ್ಯದ ಪುಸ್ತಕದ ಕಥೆಗೆ ಸರಿಹೊಂದುವುದಿಲ್ಲ. ಈಗ ಆತನು ಪ್ರಯಾಣ ಮತ್ತು ಸೇವೆ ಮಾಡಲು ಪುನಃ ಸ್ವತಂತ್ರನಾಗಿದ್ದಾನೆ. ಆತನು ತೀತನನ್ನು ಮೊದಲು ಕ್ರೇತ ದ್ವೀಪದಲ್ಲಿಯೂ ಅನಂತರ ತಿಮೊಥಿಯನ್ನು ಎಫೆಸದಲ್ಲಿ ಬಿಟ್ಟು ಬರುತ್ತಾನೆ. ಕೆಲ ಕಾಲಿನ ತರುವಾಯ ತನ್ನ ಪ್ರಯಾಣದ ಅವಧಿಯಲ್ಲಿ ಆತನು ತಿಮೊಥಿಗೆ ಒಂದು ಪತ್ರಿಕೆಯನ್ನು (ಮೊದಲ ತಿಮೊಥಿ), ಅನಂತರ ತೀತನಿಗೆ ಒಂದು ಪತ್ರಿಕೆಯನ್ನು ಬರೆಯುತ್ತಾನೆ. ಪೌಲನು ಪುನಃ ರೋಮಿನಲ್ಲಿ ಪುನಃ ಬಂಧಿಯಾಗುತ್ತಾನೆ. ಅಲ್ಲಿಂದ ಆತನು ತಿಮೊಥಿಗೆ ಪತ್ರಿಕೆಯನ್ನು (ಎರಡನೇ ತಿಮೊಥಿ) ಬರೆಯುತ್ತಾನೆ.

ತಿಮೊಥಿಯು ಪೌಲನ ಆಪ್ತಸ್ನೇಹಿತನೂ ಮತ್ತು ಜೊತೆಗೆಲಸದವನೂ ಆಗಿದ್ದನು. ಆತನ ತಂದೆಯು ಗ್ರೀಕನಾಗಿದ್ದರೆ, ಆತನ ತಾಯಿಯು ಯೆಹೂದ್ಯಳಾಗಿರುತ್ತಾಳೆ, ಮತ್ತು ಆತನು ಗಲಾತ್ಯದ ರೋಮನ್ ಪ್ರಾಂತ್ಯದಲ್ಲಿನ ಲುಸ್ತ್ರದ ನಿವಾಸಿಯಾಗಿರುತ್ತಾನೆ. ಪೌಲನ ಎರಡನೇ ಮತ್ತು ಮೂರನೇ ಸೇವಾ ಪ್ರಯಾಣದಲ್ಲಿ ಈತನು ಆತನೊಂದಿಗೆ ಪ್ರಯಾಣಿಸುತ್ತಾನೆ. ಪೌಲನು ಈ ಪತ್ರಿಕೆಯನ್ನು ಬರೆಯುವಾಗ ತಿಮೊಥಿಯು ಎಫೆಸದಲ್ಲಿ ಸಭಾಪಾಲಕನಾಗಿ ಸೇವೆ ಮಾಡುತ್ತಿರುತ್ತಾನೆ. ಈ ಪತ್ರಿಕೆಯ ಸಂದರ್ಭವು ದುರ್ಬೋಧಕರು ಮತ್ತು ಸಭೆಯಲ್ಲಿನ ಉಳಿದ ಸಮಸ್ಯೆಗಳೊಂದಿಗೆ ಹೇಗೆ ವ್ಯವಹರಿಸಬೇಕೆಂದು ತಿಮೊಥಿಗೆ ಸಲಹೆ ಕೊಡುವುದಾಗಿದೆ.

ಈ ಪತ್ರಿಕೆಯನ್ನು ಈ ರೀತಿಯಾಗಿ ಐದು ಭಾಗಗಳಾಗಿ ವಿಂಗಡಿಸಬಹದು:

1. ಸ್ವಸ್ಥ ಬೊಧನೆಯನ್ನು ಸ್ಥಾಪಿಸಿ, ಒಂದು ಆರೋಗ್ಯಕರ ಆತ್ಮೀಕ ಜೀವಿತ ನಡೆಸಲು ಬುದ್ಧಿಮಾತು/ಆಜ್ಞೆ (ಅಧ್ಯಾಯ 1-2)
2. ಸಭಾನಾಯಕರು ಮತ್ತು ಸಭಾಧ್ಯಕ್ಷರನ್ನು ನೇಮಿಸಲು ಸಲಹೆಗಳು (ಅಧ್ಯಾಯ 3)
3. ತಿಮೊಥಿಗೆ ವೈಯಕ್ತಿಕ ಸೂಚನೆಗಳು (ಅಧ್ಯಾಯ 4)
4. ಸಭಾ ಜೀವಿತ ಮತ್ತು ವಿಧವೆಯರ ಗುರುತಿಸುವಿಕೆಗೆ ನಿಯಮಗಳು (ಅಧ್ಯಾಯ 5)
5. ಸಂಪತ್ತು, ಹಣ ಮತ್ತು ಕ್ರೈಸ್ತೀಯ ಜೀವನಶೈಲಿಯ ಕುರಿತು ಬುದ್ಧಿಮಾತು (ಅಧ್ಯಾಯ 6)

# 2 ತಿಮೊಥೆ

ಈ ಪತ್ರಿಕೆಯನ್ನು "ಪೌಲನ ಕೊನೆಯ ಇಚ್ಛೆ ಮತ್ತು ಒಡಂಬಡಿಕೆ" ಎಂದು ಕೆಲವೊಮ್ಮೆ ಕರೆಯಲಾಗುತ್ತದೆ. ಸರಿಸುಮಾರು ತನ್ನ ಜೀವನ ಮುಗಿಯಿತು ಮತ್ತು ತಾನು ರೋಮಿನಲ್ಲಿ ಮರಣದೆಡೆಗೆ ಸಾಗುತ್ತಿದ್ದೇನೆಂಬುದನ್ನು ಪೌಲನು ತಿಳಿದಿರುತ್ತಾನೆ (4:6-8). ಬೇಗನೇ ತಿಮೊಥಿಯು ಬಂದು, ತನ್ನನ್ನು ಸಂಧಿಸಿ ಇಂತಹ ಸೆರೆವಾಸದ ಕಷ್ಟದ ಸಮಯದಲ್ಲಿ ಆತನು ತನ್ನೊಂದಿಗೆ ಇರಬೇಕೆಂದು ಪೌಲನು ಬಯಸುತ್ತಾನೆ. ಇದು ಅಪೊಸ್ತಲರ ಕೃತ್ಯದ ಕೊನೆಯ ಅಧ್ಯಾಯದಲ್ಲಿ ತಿಳಿಸಿರುವ ಗೃಹಬಂಧನಕ್ಕೆ ತದ್ವಿರುದ್ಧವಾಗಿದೆ. ಈ ಸಮಯದಲ್ಲಿ ಆತನನ್ನು ಬೆಂಬಲಿಸಲು ಕೆಲವೇ ಜನರಿದ್ದರು. ಲೂಕನ ಹೊರತುಡಿಸಿ ಆತನ ಹೆಚ್ಚಿನ ಹಿರಿಯ ಸಂಗಡಿಗರೆಲ್ಲರೂ ಆತನಿಂದ ದೂರವಾಗಿದ್ದರು. ಈ ಪತ್ರಿಕೆಯನ್ನು ಬರೆಯಲು ಪೌಲನಿಗೆ ಲೂಕನು ಸಹಾಯ ಮಾಡಿರುವ ಸಾಧ್ಯತೆಯಿದೆ (4:9-16). ಈಗ ಪೌಲನು ತನ್ನ ಆತ್ಮೀಕ ಮಗನಾದ ತಿಮೊಥಿಗಾಗಿ ಹಾತೊರೆಯುತ್ತಿದ್ದಾನೆ.

ಆದರೆ ಈ ಪತ್ರಿಕೆಯಲ್ಲಿನ ಪೌಲನ ಮುಖ್ಯ ಕಾಳಜಿಯು ತಿಮೊಥಿಯು ರೋಮಿಗೆ ಬರುವುದಕ್ಕೆ ಮುಂಚೆ ಯೇಸು ಕ್ರಿಸ್ತನ ಕುರಿತ ಸುವಾರ್ತೆಯನ್ನು ಶುದ್ಧವಾಗಿಡಬೇಕೆಂಬುದಾಗಿತ್ತು. ಹೀಗೆ ಎಫೆಸದ ಸಭೆಯಲ್ಲಿ ಇನ್ನೂ ಸುಳ್ಳು ಬೋಧಕರ ಸಮಸ್ಯೆಯಿತ್ತು. ಈ ಪರಿಸ್ಥಿತಿಯ ಬಗ್ಗೆ ತಿಮೊಥಿಯು ತೀರಾ ನಿರಾಶನಾಗಿರುವಂತೆ ತೋರುತ್ತಾನೆ ಮತ್ತು ಆತನು ಇನ್ನೇನು ಬಿಟ್ಟುಬಿಡಬೇಕೆಂದಿದ್ದನು. ನಂಬಿಗಸ್ತರೂ ಮತ್ತು ಉಪದೇಶವನ್ನು ಬೊಧಿಸಶಕ್ತರಾದ ಜನರಿಗೆ ಸಭೆಯಲ್ಲಿ ಬೋಧಿಸುವ ಜವಾಬ್ದಾರಿಯನ್ನು ಒಪ್ಪಿಸಿಕೊಡಬೇಕೆಂದು ಪೌಲನು ತಿಮೊಥಿಗೆ ಉತ್ತೇಜಿಸಿ, ಸಲಹೆ ಕೊಡುತ್ತಾನೆ (2:2). ಅಲ್ಲದೆ ಪೌಲನು ಸೇವೆ ಮಾಡುವಾಗ ಮತ್ತು ಬೋಧಿಸುವಾಗ ಶ್ರಮಪಟ್ಟು ದುಡಿಯಲು, ಬಾಧೆ ಪಡಲು ಮತ್ತು ಹಿಂಸೆ ಎದುರಿಸಲು ಸಹ ಸಿದ್ಧರಾಗಿರಬೇಕೆಂದು ತಿಮೊಥಿಗೆ ಹೇಳುತ್ತಾನೆ. ಇದಕ್ಕಾಗಿ ಆತನು "ಕ್ರಿಸ್ತ ಯೇಸುವಿನಲ್ಲಿರುವ ಕೃಪೆಯಿಂದ ಬಲಹೊಂದಿದವನಾಗಬೇಕಿದೆ" (2:1).

ಈ ಪತ್ರಿಕೆಯನ್ನು ಎರಡು ಮುಖ್ಯ ಭಾಗಗಳಾಗಿ ವಿಂಗಡಿಸಬಹುದು:

1. ತಿಮೊಥಿಗೆ ತಾಳ್ಮೆಯಿಂದಿರಲು ಮತ್ತು ಸೇವೆಯಲ್ಲಿ ಧೈರ್ಯದಿಂದಿರಲು ಒತ್ತಾಯಿಸುವುದು (1:1-4:5)
2. ತಿಮೊಥಿಗೆ ಪೌಲನ ಬೀಳ್ಕೊಡುಗೆ (4:6-18)

## ತೀತನು

ಪೌಲನ ಜೊತೆಕೆಲಸದವರಲ್ಲಿ ಒಬ್ಬನಾಗಿರುವ ತೀತನ ಬಗ್ಗೆ ಅಪೊಸ್ತಲರ ಕೃತ್ಯ ಪುಸ್ತಕದಲ್ಲಿ ಬರೆಯಲ್ಪಟ್ಟಿಲ್ಲ. ಆದರೆ ಗಲಾತ್ಯ ಪತ್ರಿಕೆಯಲ್ಲಿನ ಪೌಲನ ಸ್ವಂತ ಎಣಿಕೆಯಿಂದ ಆತನ ಬಗ್ಗೆ ನಮಗೆ ಮಾಹಿತಿ ಸಿಗುತ್ತದೆ. ತೀತನು ಒಬ್ಬ ಗ್ರೀಕನೂ – ಅನ್ಯವಿಶ್ವಾಸಿಯೂ ಆಗಿದ್ದು ಆರಂಭದಲ್ಲಿಯೇ ಪೌಲನೊಂದಿಗೆ ಪ್ರಯಾಣ ಮಾಡುತ್ತಾ ಸೇವೆ ಮಾಡಲು ಪ್ರಾರಂಭಿಸಿದನು (ಗಲಾತ್ಯ 2:1).

ಕೆಲವೊಮ್ಮೆ "ಪೌಲನ ನಾಲ್ಕನೇ ಸೇವಾಪ್ರಯಾಣವೆಂದು ಕರೆಯಲ್ಪಡುವ" ಪ್ರಯಾಣದ ವೇಳೆ ಅಲ್ಲಿ ಸಭೆಗಳನ್ನು ಸಂಘಟಿಸುವ ಕಾರ್ಯವನ್ನು ಪೂರ್ಣಗೊಳಿಸಲು ತೀತನನ್ನು ಕ್ರೇತ ದ್ವೀಪದಲ್ಲಿ ಬಿಟ್ಟುಹೋಗಲಾಗುತ್ತದೆ. ಅಲ್ಲಿ ಆತನಿಗೆ ಮಾಡಲು ಅನೇಕ ಕಾರ್ಯಗಳಿದ್ದವು. ಅಲ್ಲದೆ ತೀತನಿಗೆ ಸೇವೆಯಲ್ಲಿ ಸಮಸ್ಯೆಗಳನ್ನು ಸೃಷ್ಟಿಸಲು ಬಯಸಿದ ಅನೇಕ ತೊಂದರೆ ಕೊಡುವವರೂ ಮತ್ತು ಸುಳ್ಳು ಬೊಧಕರೂ ಅಲ್ಲಿದ್ದರು.

ಸ್ವಲ್ಪಮಟ್ಟಿಗೆ ತಿಮೊಥಿಯ ಮೊದಲ ಪತ್ರಿಗೆ ಸಮಾನವಾಗಿರುವ ಈ ಪತ್ರಿಕೆಯು ಪೌಲನಿಂದ ತೀತನಿಗೆ ಹೆಚ್ಚು ಪ್ರಾಯೋಗಿಕ ಸಲಹೆ/ಬುದ್ಧಿಮಾತನ್ನೇ ಒಳಗೊಂಡಿದೆ.

ಮೊದಲು ಪೌಲನು ಸಭೆಯಲ್ಲಿನ ನಾಯಕತ್ವವನ್ನು ಹೇಗೆ ಸಂಘಟಿಸಬೇಕೆಂಬುದರ ಬಗ್ಗೆ ತೀತನಿಗೆ ಸಲಹೆ ಕೊಡುತ್ತಾನೆ (1:1-16). ಅನಂತರ ಆತನು ಸಭೆಯಲ್ಲಿನ ತನ್ನ ಬೋಧನಾ ಸೇವೆಯ ಬಗ್ಗೆ ತೀತನಿಗೆ ಮಾರ್ಗದರ್ಶನವನ್ನು ಕೊಡುತ್ತಾನೆ. ಬೋಧಕನು ಸಭೆಯಲ್ಲಿನ ಬೇರೆ ಬೇರೆ ಜನರ ವರ್ಗಗಳನ್ನು ಸಂಬೋಧಿಸಬೇಕು (2:1-10). ಬೋಧನೆಯು ದೇವರ ಕೃಪೆಯನ್ನು ತಿಳಿಸಬೇಕು (2:11-15), ಇದು ಜನರ ಸಾಮಾಜಿಕ ಮತ್ತು ರಾಜಕೀಯ ಸನ್ನಿವೇಶಗಳಿಗೆ ಪೂರಕವಾಗಿರಬೇಕು (3:1-8), ಮತ್ತು ಇದು ಬುದ್ಧಿಯಿಲ್ಲದ ವಿತರ್ಕಗಳನ್ನು ಮತ್ತು ಕೊನೆಯಿಲ್ಲದ ವಾಗ್ವಾದಗಳಿಂದ ದೂರವಾಗಿರಬೇಕು (3:9-11).

ಈ ಪತ್ರಿಕೆಯನ್ನು ಹೀಗೆ ರಚನೆ ಮಾಡಬಹುದು:

1. ಸಭಾ ನಾಯಕರ ನೇಮಕದ ಕುರಿತು ಸಲಹೆ (ಅಧ್ಯಾಯ 1)
2. ಸಭೆಯಲ್ಲಿನ ಜೀವಿತಕ್ಕೆ ನಿಯಮಗಳು (ಅಧ್ಯಾಯ 2)
3. ಈ ಲೋಕದಲ್ಲಿನ ವಿಶ್ವಾಸಿಗಳ ನಂಬಿಕೆಯ ಕುರಿತು ಬುದ್ಧಿಮಾತುಗಳು (ಅಧ್ಯಾಯ 3)

## ಫಿಲೆಮೋನನಿಗೆ ಬರೆದ ಪತ್ರಿಕೆ

ಈ ಸಣ್ಣ ಪತ್ರಿಕೆಯು ನಾಲ್ಕು ಸೆರೆಮನೆಯ ಪತ್ರಿಕೆಗಳಿಗೆ ಸೇರಿದ್ದು ಕೊಲೊಸ್ಸೆ ಪತ್ರಿಕೆಯೊಂದಿಗೆ ನಿಕಟ ಸಂಬಂಧ ಹೊಂದಿದೆ. ಫಿಲೆಮೋನನು ಕೊಲೊಸ್ಸೆಯಲ್ಲಿನ ಒಬ್ಬ ವಿಶ್ವಾಸಿಯಾಗಿದ್ದು, ಈತನ ಸೇವಕನಾದ ಒನೇಸೀಮನು ರೋಮಿಗೆ ಓಡಿಹೋಗುತ್ತಾನೆ. ಅಲ್ಲಿ ಆತನು ಪೌಲನನ್ನು ಸಂಧಿಸಿ ಒಬ್ಬ ವಿಶ್ವಾಸಿಯಾಗುತ್ತಾನೆ. ಈಗ ಪೌಲನು ಫಿಲೆಮೋನನಿಗೆ ನೀನು ಈತನನ್ನು "ಇನ್ನು ಮೇಲೆ ಅವನು ದಾಸನಾಗದೆ, ದಾಸನಿಗಿಂತ ಉತ್ತಮವಾಗಿ ಪ್ರಿಯ ಸಹೋದರನಂತೆ" ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಾ, ಅನುಮೋದನಾ ಪತ್ರದೊಂದಿಗೆ ಒನೇಸೀಮನನ್ನು ಆತನ ಯಜಮಾನನ ಬಳಿಗೆ

ಕಳಿಸಿಕೊಡುತ್ತಾನೆ (ವ. 16). ಈ ಪತ್ರಿಕೆಯು ಕೊಲೊಸ್ಸೆ ಸಭೆಗೆ ಪೌಲನು ಬರೆದ ಪತ್ರಿಕೆಯೊಂದಿಗೆ ಬಹುಶಃ ಒನೇಸೀಮನೊಂದಿಗೆ ಕೊಲೊಸ್ಸೆಗೆ ಕಳಿಸಿರಬಹುದು. ಆದಿಸಭೆಯ ವೇಳೆಯಲ್ಲಿ ಯಜಮಾನರು ಮತ್ತು ದಾಸರ ನಡುವಿನ ಅಸಮಾನತೆಯೊಂದಿಗೆ ರೋಮನ್ ಸಮಾಜದ ಮೌಲ್ಯ ವ್ಯವಸ್ಥೆಯನ್ನು ಕ್ರೈಸ್ತೀಯ ನಂಬಿಕೆಯು ಹೇಗೆ ಮಟ್ಟಹಾಕಿತೆಂಬುದಕ್ಕೆ ಒಂದು ಮಾದರಿಯನ್ನು (ಉದಾಹರಣೆಯನ್ನು) ನಮಗೆ ಈ ಪತ್ರಿಕೆಯು ಕೊಡುತ್ತದೆ.

## ಪೌಲನ 13 ಪತ್ರಿಕೆಗಳಿಗೆ ಪ್ರಶ್ನೆಗಳು

1. ಹೊಸ ಒಡಂಬಡಿಕೆಯಲ್ಲಿ ಪೌಲನು ಬರೆದ 13 ಪತ್ರಿಕೆಗಳಿವೆ. ಯಾಕೆ ರೋಮಾಪುರದವರಿಗೆ ಬರೆದ ಪತ್ರಿಕೆ ಮೊದಲು ಮತ್ತು ಫಿಲೆಮೋನನಿಗೆ ಬರೆದ ಪತ್ರಿಕೆ ಕೊನೆಯಲ್ಲಿ ಇಡಲ್ಪಟ್ಟಿದೆ ಎಂಬುದನ್ನು ವಿವರಿಸಿರಿ.
2. ಪೌಲನ ಯಾವ ಪತ್ರಿಕೆಗಳನ್ನು ಸೆರೆಮನೆಯ ಪತ್ರಿಕೆಗಳೆಂದು ಕರೆಯುವರು? ಯಾಕೆ?
3. ಪೌಲನ ಯಾವ ಪತ್ರಿಕೆಯನ್ನು ಸಭಾಪಾಲಕರ ಪತ್ರಿಕೆಗಳೆಂದು ಕರೆಯುವರು? ಯಾಕೆ?
4. ಹೊಸ ಒಡಂಬಡಿಕೆಯಲ್ಲಿ ಪೌಲನ ಯಾವ ಪತ್ರಿಕೆ ಮೊದಲನೆಯದು?
5. ಯಾವುದು ಕೊನೆಯದು? ಅದನ್ನು ನಾವು ಹೇಗೆ ತಿಳಿಯಬಹುದು?
6. ಪೌಲನು ಯಾಕೆ ರೋಮಾಪುರದವರಿಗೆ ಪತ್ರಿಕೆಯನ್ನು ಬರೆದನು? ಉತ್ತರಿಸುವ ಮುನ್ನ ನಿಮ್ಮ ಗುಂಪಿನ ಸದಸ್ಯರೊಂದಿಗೆ ಚರ್ಚಿಸಿರಿ.
7. ವಿಷಯಾಂಶದಲ್ಲಿ ರೋಮಾಪುರದವರಿಗೆ ಬರೆದ ಪತ್ರಿಕೆಗೆ ಸಮಾನವಾದ ಪೌಲನ ಇನ್ನೊಂದು ಪತ್ರಿಕೆಯಿದೆ. ಅದು ಯಾವುದು?
8. ವಿಷಯಾಂಶದಲ್ಲಿ ಕೊಲೊಸ್ಸೆ ಪತ್ರಿಕೆಗೆ ಸಮಾನವಾದ ಪೌಲನ ಇನ್ನೊಂದು ಪತ್ರಿಕೆಯಿದೆ. ಅದು ಯಾವ ಪತ್ರಿಕೆ?
9. ಪೌಲನ ಅನೇಕ ಪತ್ರಿಕೆಗಳು ಸಭೆಯಲ್ಲಿನ ಸುಳ್ಳು ಬೋಧಕರುಗಳೊಂದಿಗೆ ವ್ಯವಹರಿಸುವುದಾಗಿದೆ. ಉತ್ತರ ಬರೆಯುವ ಮುನ್ನ ಗುಂಪಿನ ಸದಸ್ಯರೊಂದಿಗೆ ಚರ್ಚಿಸಿರಿ.
10. ಕೊರಿಂಥದಲ್ಲಿನ ಸಭೆಗೆ ಪೌಲನು ಎಷ್ಟು ಪತ್ರಿಕೆಗಳನ್ನು ಬರೆಯುತ್ತಾನೆ? ನಿರ್ಣಯಿಸುವುದಕ್ಕಿಂತ ಮುನ್ನ ಯೋಚಿಸಿ ಚರ್ಚಿಸಿರಿ.
11. ಯಾವ ಪತ್ರಿಕೆಗಳಲ್ಲಿ ಪೌಲನು ಯೇಸುವಿನ ಎರಡನೇ ಬರೋಣದ ಕುರಿತು ಬೋಧಿಸುತ್ತಾನೆ? ಉತ್ತರ ಬರೆಯುವ ಮುನ್ನ ನಿಮ್ಮ ಗುಂಪಿನ ಸದಸ್ಯರೊಂದಿಗೆ ಚರ್ಚಿಸಿರಿ.
12. ಯಾವ ಪತ್ರಿಕೆಗಳಲ್ಲಿ ಪೌಲನು ಸಭಾನಾಯಕರಿಗಾಗಿನ ಅರ್ಹತೆಗಳ ಬಗ್ಗೆ ಪೌಲನು ಬೋಧಿಸುತ್ತಾನೆ?
13. ಅಪೊಸ್ತಲರ ಕೃತ್ಯದಲ್ಲಿ ತಿಳಿಸಲ್ಪಟ್ಟಂತೆ ಮೂರು ಸೇವಾ ಪ್ರಯಾಣದ ಹೊರತಾಗಿ ಇನ್ನೂ ಹೆಚ್ಚಿನ ಪ್ರಯಾಣಗಳನ್ನು ಮಾಡಿದನೆಂಬುದನ್ನು ನಾವು ಹೇಗೆ ತಿಳಿದುಕೊಳ್ಳಬಹುದು? ಉತ್ತರ ಬರೆಯುವ ಮುನ್ನ ನಿಮ್ಮ ಗುಂಪಿನ ಸದಸ್ಯರೊಂದಿಗೆ ಚರ್ಚಿಸಿರಿ.
14. ಹೊಸ ಒಡಂಬಡಿಕೆಯ ಈ ವಿಭಾಗದಲ್ಲಿನ 13 ಪುಸ್ತಕಗಳ ಕುರಿತು 10 ಪ್ರಶ್ನೆಗಳನ್ನು ಬರೆಯಿರಿ. ಅನಂತರ ಸ್ನೇಹಿತರೊಬ್ಬರಿಗೆ ಉತ್ತರ ಬರೆಯಲು ಹೇಳಿರಿ. ಸರಿಯಾದ ಪ್ರತಿ ಉತ್ತರಕ್ಕೆ ಅವರಿಗೆ 10 ಅಂಕಗಳನ್ನು ಕೊಡಿರಿ. ಭಾಗಶಃ ಸರಿಯಾದ ಉತ್ತರಕ್ಕೆ ಕಡಿಮೆ ಅಂಕ ಕೊಡಿರಿ. 50-69 ಅಂಕಗಳಿಗೆ ಉತ್ತೀರ್ಣತೆ ಕೊಡಿರಿ. 70-100 ಅಂಕಗಳಿಗೆ ಉನ್ನತ ಶ್ರೇಣಿ ಕೊಡಿರಿ.

# ಭಾಗ 3: ಹೊಸ ಒಡಂಬಡಿಕೆಯ ಇತರ ಪತ್ರಿಕೆಗಳು

ಹೊಸ ಒಡಂಬಡಿಕೆಯು ಆದಿಸಭೆಯಲ್ಲಿನ ಉಳಿದ ನಾಯಕರುಗಳು ಬರೆದ ಎಂಟು ಪತ್ರಿಕೆಗಳನ್ನು ಒಳಗೊಂಡಿದೆ. ಇಬ್ರಿಯ ಪತ್ರಿಕೆಯನ್ನು ಯಾರು ಬರೆದರೆಂಬುದು ತಿಳಿದಿಲ್ಲ. ಉಳಿದ ಏಳು ಪತ್ರಿಕೆಗಳನ್ನು "ಸಾಮಾನ್ಯ ಪತ್ರಿಕೆಗಳೆಂದು" ಕರೆಯಲಾಗುತ್ತದೆ. ಯಾಕೆಂದರೆ ಅವು ನಿರ್ದಿಷ್ಟ ವ್ಯಕ್ತಿಗಳಿಗೆ ಅಥವಾ ಸ್ಥಳೀಯ ಗುಂಪಿಗಿಂತ ಸಾಮಾನ್ಯ ಜನರಿಗೆ ಸಂಬೋಧಿಸಲ್ಪಟ್ಟಿವೆ. ಅವು ಯೇಸುವಿನ ತಮ್ಮನಾದ ಯಾಕೋಬನಿಂದ (ಒಂದು ಪತ್ರಿಕೆ), ಅಪೊಸ್ತಲ ಪೇತ್ರನಿಂದ (ಎರಡು ಪತ್ರಿಕೆ), ಅಪೊಸ್ತಲನಾದ ಯೋಹಾನನಿಂದ (ಮೂರು ಪತ್ರಿಕೆ) ಮತ್ತು ಯೇಸುವಿನ ಇನ್ನೊಬ್ಬ ಸಹೋದರನಾದ ಯೂದನಿಂದ (ಒಂದು ಪತ್ರಿಕೆ) ಬರೆಯಲ್ಪಟ್ಟಿವೆ.

## ಇಬ್ರಿಯರಿಗೆ ಬರೆದ ಪತ್ರಿಕೆ

ಈ ಪತ್ರಿಕೆಯ ಗ್ರಂಥಕರ್ತರು ಯಾರೆಂಬುದು ತಿಳಿದಿಲ್ಲ. ಈ ಕಾರಣದಿಂದಲೇ ಇಬ್ರಿಯ ಪತ್ರಿಕೆಯನ್ನು ಹೊಸ ಒಡಂಬಡಿಕೆಯ ಶಾಸನಕ್ಕೆ ಸೇರಿಸಬೇಕೋ, ಬೇಡವೋ ಎಂದು ಆಧಿಸಭೆಯಲ್ಲಿ ಭಿನ್ನಾಭಿಪ್ರಾಯವಿದೆ. ವಿಷಯಾಂಶ ಮತ್ತು ಬರವಣಿಗೆಯ ಶೈಲಿಯನ್ನು ನೋಡಿದರೆ ಪೌಲನು ಇದರ ಗ್ರಂಥಕರ್ತನೆಂಬುದಾಗಿ ತೋರುವುದಿಲ್ಲ. ಇತರ ಹೆಸರುಗಳೂ ತಿಳಿಸಲ್ಪಟ್ಟಿವೆ – ಬಾರ್ನಬ, ಅಪೊಲ್ಲೋಸನು, ಲೂಕ ಮತ್ತು ಸೀಲ – ಆದರೆ ಈ ಯಾವುದೇ ಹೆಸರುಗಳ ಕುರಿತು ಸತ್ಯವೇದ ಪಂಡಿತರು ಸಮ್ಮತಿಗೆ ಬಂದಿಲ್ಲ. ಏನೇ ಆಗಲಿ ಈ ಪತ್ರಿಕೆಯಿಂದಲೇ ಬರಹಗಾರನಿಗೆ ಸಭೆಯಲ್ಲಿ ಅಧಿಕಾರವಿತ್ತು ಮತ್ತು ಆತನು ಹಳೇ ಒಡಂಬಡಿಕೆಯೊಂದಿಗೆ ಚಿರಪರಿಚಿತನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಬಹುಶಃ ಈತನು ಒಂದು ಯೆಹೂದ್ಯ ಕುಟುಂಬದ ಒಬ್ಬ ಬುದ್ಧಿವಂತ ವ್ಯಕ್ತಿಯಾಗಿದ್ದಿರಬಹುದು.

ಈ ಪತ್ರಿಕೆಯ ಸ್ವೀಕೃತರು ಸಹ ಯಾರೆಂದು ತಿಳಿದಿಲ್ಲ. ಅವರು ಯೆಹೂದಿ ಹಿನ್ನಲೆ ಹೊಂದಿದ್ದರೋ ಅಥವಾ ಅನ್ಯ ಹಿನ್ನಲೆ ಹೊಂದಿದ್ದರೋ ಎಂಬುದು ಸಹ ಚರ್ಚಿಸಲ್ಪಟ್ಟಿದೆ. ಬಹುಶಃ ಅವರು ಗ್ರೀಕ್/ರೋಮನ್ ಸಂಸ್ಕೃತಿಯಿರುವ ಸಮಾಜದಲ್ಲಿ ವಾಸಿಸುತ್ತಿರುವ ಯೆಹೂದಿ ಹಿನ್ನಲೆಯ ಜನರಾಗಿರಬಹುದು. ಇಬ್ರಿಯ ಪತ್ರಿಕೆಯ ಬೋಧನೆಯು ಹಳೇ ಒಡಂಬಡಿಕೆಯಲ್ಲಿ ತಿಳಿಸಲ್ಪಟ್ಟಂತೆ ದೇವದರ್ಶನ ಗುಡಾರದಲ್ಲಿನ ಯಜ್ಞ (ಬಲಿ) ಗಳಿಗೆ ಒತ್ತು ಕೊಟ್ಟಿದೆ. ಆದರೆ ಪತ್ರಿಕೆಯು ಗ್ರೀಕಿನಲ್ಲಿ ಬರೆಯಲ್ಪಟ್ಟಿದೆಯೇ ವಿನಃ ಇಬ್ರಿಯ ಭಾಷೆಯಲ್ಲಿಲ್ಲ, ಮತ್ತು ಹಳೇ ಒಡಂಬಡಿಕೆಯ ಹೇಳಿಕೆಗಳನ್ನು ಗ್ರೀಕಿನ ಸೆಪ್ಟುಜೆಂಟ್ ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ಈ ಪತ್ರಿಕೆಯ ಉದ್ದೇಶವು ಸ್ವೀಕೃತರ ನಂಬಿಕೆಯನ್ನು ಬಲಪಡಿಸುವುದಾಗಿದೆ. ಕೇವಲ ಯೇಸು ಮಾತ್ರವೇ ನಿಜವಾಗಿ ಮತ್ತು ಖಂಡಿತವಾಗಿ ಮನುಷ್ಯರಿಗೆ ದೇವರನ್ನು ಪ್ರಕಟಿಸಲು ಸಾಧ್ಯ ಎಂದು ಗ್ರಂಥಕರ್ತನು ತಿಳಿಸುತ್ತಾನೆ.

ಇಬ್ರಿಯ ಪತ್ರಿಕೆಯ ಸಂದೇಶವು ಹೋಲಿಕೆಗಳ ಮೇಲೆ ಆಧರಿತವಾಗಿದೆ. ಕ್ರಿಸ್ತನ ಮೂಲಕ ಬಂದದ್ದನ್ನು ಈ ಹಿಂದೆ ಇದ್ದದ್ದರೊಂದಿಗೆ ಹೋಲಿಸಲಾಗಿದೆ. ಮುಕ್ತಾಯವು ಯಾವಾಗಲೂ ಒಂದೇ ರೀತಿಯಿದೆ: ಕ್ರಿಸ್ತನು ತಂದದ್ದೇ ಅತ್ಯುತ್ತಮವಾದುದ್ದಾಗಿದೆ. ಹಾಗಾಗಿ "ಉತ್ತಮ" ಎಂಬುದು ಈ ಪತ್ರಿಕೆಯಲ್ಲಿ ಮುಖ್ಯ ಪದವಾಗಿಬಿಡುತ್ತದೆ.

- ಉತ್ತಮ ಸಂಗತಿ (6:9)

- ಉತ್ತಮವಾದ ಒಂದು ನಿರೀಕ್ಷೆ (9:19)
- ಶ್ರೇಷ್ಠವಾದ ಒಡಂಬಡಿಕೆ (7:22)
- ಉತ್ತಮವಾದ ವಾಗ್ದಾನ (8:6)
- ಉತ್ತಮವಾದ ಯಜ್ಞ (9:23)
- ಉತ್ತಮವಾದ ಆಸ್ತಿ (10:34)
- ಉತ್ತಮ ದೇಶ (11:16)
- ಶ್ರೇಷ್ಠ ಪುನರುತ್ಥಾನ (11:35)
- ದೇವರು ನಮಗೋಸ್ಕರ ಶ್ರೇಷ್ಠವಾದ ಭಾಗ್ಯವನ್ನು ಸಂಕಲ್ಪಿಸಿದನು (11:40)
- ಹಿತಕರವಾದ ಮಾತು (12:24)

ಇಬ್ರಿಯ ಪತ್ರಿಕೆಯನ್ನು ಈ ರೀತಿ ರಚನೆ ಮಾಡಬಹುದು:

1. ಕ್ರಿಸ್ತನನ್ನು ದೇವದೂತರು ಮತ್ತು ಹಳೇ ಒಡಂಬಡಿಕೆಯ ಕೆಲ ವ್ಯಕ್ತಿಗಳೊಂದಿಗೆ ಹೋಲಿಸಲಾಗಿದೆ: ಮೋಶೆ, ಯೆಹೋಶುವ, ಆರೋನ ಮತ್ತು ಮೆಲ್ಕೀಜೆದೇಕ (ಅಧ್ಯಾಯ 1-7)
2. ಕ್ರಿಸ್ತ ತಂದಿರುವ ದೇವರೊಂದಿಗಿನ ಒಡಂಬಡಿಕೆಯನ್ನು ಹಳೇ ಒಡಂಬಡಿಕೆಯಲ್ಲಿನ ಹಿಂದಿನ ಒಡಂಬಡಿಕೆಯೊಂದಿಗೆ ಹೋಲಿಸಲಾಗಿದೆ (ಅಧ್ಯಾಯ 8-10)
3. ಕ್ರಿಸ್ತನಲ್ಲಿ ನಂಬಿಕೆಯಿಡುವವರು ಹಳೇ ಒಡಂಬಡಿಕೆಯ ವಿಶ್ವಾಸಿಗಳೊಂದಿಗೆ ಹೋಲಿಸಲ್ಪಟ್ಟಿದ್ದಾರೆ (ಅಧ್ಯಾಯ 11-13)

# ಯಾಕೋಬನು

ಯೇಸುವಿನ ಸಹೋದರನೂ, ಯೆರೂಸಲೇಮಿನ ಸಭೆಯ ಒಂದು ಕಂಬ/ಸ್ಥಂಭವೂ ಆಗಿರುವ ಯಾಕೋಬನು ಈ ಪತ್ರಿಕೆಯ ಗ್ರಂಥಕರ್ತನೆಂಬುದಾಗಿ ಆದಿ ಕ್ರೈಸ್ತೀಯ ಸಂಪ್ರದಾಯವು ಹೇಳುತ್ತದೆ. ಇದು ಹೊಸ ಒಡಂಬಡಿಕೆಯಲ್ಲಿ ಅತೀ ಆರಂಭಿಕ ಪತ್ರಿಕೆಯಾಗಿದ್ದು ಸಭೆ ಸೇರಿರುವ ಕುರಿತು ತಿಳಿಸದೆ ಇರುವುದರಿಂದ ಕ್ರಿ.ಶ. 49 ರಲ್ಲಿ ಅಪೊಸ್ತಲರು ಸಭೆ ಸೇರುವುದಕ್ಕಿಂತ ಮೊದಲೇ ಬರೆಯಲ್ಪಟ್ಟಿರಬಹುದು. ಆದರೆ ಬಹುಶಃ ಇದನ್ನೊಂದು ಪತ್ರಿಕೆಯೆಂದು ಕರೆಯಲಾಗದು. ಹೆಚ್ಚಾಗಿ ಇದು ಒಂದು ಬರೆಯಲ್ಪಟ್ಟ ಪ್ರಸಂಗ ಅಥವಾ ಸಂದೇಶದಂತಿದೆ.

ವಿಷಯಾಂಶಗಳು ಸಹ ಒಂದು ಉತ್ತಮವಾದ ಸಂದೇಶದಂತೆ ರಚಿಸಲ್ಪಟ್ಟಿದೆ. ಓದುಗರಿಗೆ ಅಥವಾ ಕೇಳುಗರಿಗೆ ಒಂದು ಮುಖ್ಯ ಅಂಶವನ್ನು ಪ್ರಸ್ತುತಪಡಿಸಲಾಗಿದೆ: "ವಾಕ್ಯದ ಪ್ರಕಾರ ನಡೆಯುವವರಾಗಿರಿ, ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ" (1:22).

ಈ ಅಂಶವು ದೂತರಿಂದ ಚರ್ಚಿಸಲ್ಪಟ್ಟಿವೆ: ಹೋರಾಟಗಳು, ಪಕ್ಷಪಾತ, ನಂಬಿಕೆ ಮತ್ತು ಕ್ರಿಯೆ, ಚಾಡಿ ಮತ್ತು ಹೊಗಳಿಕೊಳ್ಳುವಿಕೆ.

# 1 ಪೇತ್ರ

ಈ ಪತ್ರಿಕೆಯ ಗ್ರಂಥಕರ್ತನು ಅಪೊಸ್ತಲ ಪೇತ್ರನಾಗಿದ್ದು, ಬಹುಶಃ ಈತನು ಇದನ್ನು ರೋಮಿನಿಂದ ಬರೆದಿದ್ದಾನೆ. ಪೌಲನ ಎರಡನೇ ಮತ್ತು ಮೂರನೇ ಸೇವಾ ಪ್ರಯಾಣಗಳಲ್ಲಿ ಆತನ ಜೊತೆಗಾರನಾಗಿದ್ದ ಸೀಲನನ್ನು (ಅಥವಾ ಸಿಲ್ವಾನ) ಇದನ್ನು ಬರೆಯಲು ಒಬ್ಬ ಕಾರ್ಯದರ್ಶಿಯಾಗಿ ಉಪಯೋಗಿಸಿದನು (5:12).

ಯಾಕೆ ಗ್ರೀಕ್ ಭಾಷೆಯು ಅತ್ಯಂತ ಶ್ರೇಷ್ಠವಾದದ್ದು ಮತ್ತು ಯಾಕೆ ಪೌಲನ ಪತ್ರಿಕೆಗಳಿಗೆ ಅನೇಕ ಸಮಾನತೆಗಳಿವೆ ಎಂಬುದನ್ನು ಇದು ವಿವರಿಸಬಲ್ಲದು.

ಒಂದನೇ ಪೇತ್ರನ ಪತ್ರಿಕೆಯು ಹಿಂಸೆಯಿಂದ ವಿಶ್ವಾಸಿಗಳು ಐದು ರೋಮನ್ ಪ್ರಾಂತ್ಯಗಳಲ್ಲಿ ಚದುರಿಹೋದ ವೇಳೆಯಲ್ಲಿ ಬರೆಯಲ್ಪಟ್ಟಿದೆ.

ರೋಮನ್ ಅಧಿಕಾರಿಗಳಡಿಯಲ್ಲಿ ಅವರ ಬಾಧೆಗಳಲ್ಲಿ ಅವರನ್ನು ಉತ್ತೇಜಿಸಲು ಮತ್ತು ಬಲಪಡಿಸಲು ಪೇತ್ರನು ಬಯಸುತ್ತಾನೆ. ಆತನು ಅವರಿಗೆ ಯೇಸು ಕ್ರಿಸ್ತನ ಕುರಿತ ಶುಭವಾರ್ತೆಯನ್ನು ಜ್ಞಾಪಕಪಡಿಸುತ್ತಾನೆ. ಆತನ ಮೂಲಕ ತಂದೆಯಾದ ದೇವರು ನಮಗೆ ಒಂದು ಹೊಸ ಜೀವಿತವನ್ನು ಕೊಟ್ಟಿದ್ದಾನೆ. "ಆತನು ಯೇಸು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿ, ನಮ್ಮನ್ನು ತಿರುಗಿ ಜೀವಿಸುವಂತೆ ಮಾಡಿ, ಜೀವಕರವಾದ ನಿರೀಕ್ಷೆಯನ್ನು ನಮ್ಮಲ್ಲಿ ಹುಟ್ಟಿಸಿದ್ದಾನೆ" (1:3).

ಅವರಿಗೆ ಬಂದ ಬಾಧೆಯನ್ನು ಅವರ ನಂಬಿಕೆಯನ್ನು ಬಲಪಡಿಸಲು ಬಂದ ಶ್ರಮೆವೆಂಬುದಾಗಿ ನೋಡಬೇಕೆಂದು ಆತನು ಕೇಳಿಕೊಳ್ಳುತ್ತಾನೆ. ಈ ಪತ್ರಿಕೆಯು ಯೇಸುವಿಗೆ ಯೋಗ್ಯವಾದ ಜೀವಿತವನ್ನು ಜೀವಿಸಲು ಆದರಣೆ ಮತ್ತು ಉತ್ತೇಜನದಿಂದ ತುಂಬಿಕೊಂಡಿದೆ. ನಮ್ಮ ಹೋರಾಟ ಮತ್ತು ಬಾಧೆಗಳ ಹೊರತಾಗಿಯೂ ದೇವರು ಎಲ್ಲವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆ: "ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುತ್ತಾನೆ" (5:7).

ಮೊದಲನೇ ಪೇತ್ರನನ್ನು ಈ ರೀತಿ ರಚನೆ ಮಾಡಬಹುದು:

1. ನೀವು ಹೊಂದಿದ ನಿರೀಕ್ಷೆಯಲ್ಲಿ ಕ್ರೈಸ್ತರಾಗಿ ದೃಢವಾಗಿ ನಿಲ್ಲಿರಿ (ಅಧ್ಯಾಯ 1)
2. ನಿಮ್ಮ ಬಾಧೆ ಮತ್ತು ದೈನಂದಿನ ಜೀವನದ ಹೋರಾಟಗಳ ನಡುವೆ ಸಾಕ್ಷಿಯಾಗಿ ಬಾಳಿರಿ (ಅಧ್ಯಾಯ 2-3)
3. ಕ್ರೈಸ್ತೀಯ ಅನ್ಯೋನ್ಯತೆಯನ್ನು ಕಾಪಾಡಿಕೊಳ್ಳಿರಿ (ಅಧ್ಯಾಯ 4-5)

# 2 ಪೇತ್ರ

ಬಹುಶಃ ಪೇತ್ರನು ತನ್ನ ಜೀವಿತದ ಅಂತ್ಯದ ವೇಳೆ ಈ ಪತ್ರಿಕೆಯನ್ನು ಬರೆದಿರಬಹುದು (1:4). ಚಕ್ರವರ್ತಿಯಾದ ನೀರೋನ ಹಿಂಸೆಯ ವೇಳೆ ಈತನು ರೋಮಿನಲ್ಲಿ ರಕ್ತಸಾಕ್ಷಿಯಾದನೆಂಬುದಾಗಿ ಸಂಪ್ರದಾಯವು ಹೇಳುತ್ತದೆ. ಪೌಲನ ಎರಡನೇ ತಿಮೊಥಿಯಂತೆ ಇದು ಪೇತ್ರನ "ಕೊನೆಯ ಇಚ್ಛೆ ಮತ್ತು ಒಡಂಬಡಿಕೆಯಾಗಿದೆ". ಇದು ಕ್ರಿಸ್ತನ ನೀತಿಯ ಮೂಲಕ ನಂಬಿಕೆಯನ್ನು ಸ್ವೀಕರಿಸಿದ ಜನರಿಗೆ ಇದು ಬರೆಯಲ್ಪಟ್ಟಿದೆ.

ಈ ಪತ್ರಿಕೆಯ ಉದ್ದೇಶವು ಓದುಗರು ತಾವು ಸ್ವೀಕರಿಸಿದ ನಂಬಿಕೆಯಲ್ಲಿ ದೃಢವಾಗಿ ನಿಂತು ಸುಳ್ಳುಬೋಧನೆ ಹರಡುತ್ತಾ, ದೇವಭಕ್ತಿಗೆ ವಿರುದ್ಧವಾದ ಜೀವನಶೈಲಿ ನಡೆಸುವ ಸುಳ್ಳುಬೋಧಕರನ್ನು ವಿರೋಧಿಸುವುದಾಗಿದೆ. ಅಲ್ಲದೆ ಆ ಸುಳ್ಳುಬೋಧಕರು ಕರ್ತನ ಬರೋಣವನ್ನು ಸಹ ಪ್ರಶ್ನಿಸಿದರು.

ಎರಡನೇ ಪೇತ್ರನನ್ನು ಈ ರೀತಿ ರಚನೆ ಮಾಡಬಹುದು:

1. ನಂಬಿಕೆ ಮತ್ತು ಕ್ರೈಸ್ತೀಯ ಗುಣಸ್ವಭಾವ / ಮೌಲ್ಯಗಳಲ್ಲಿ ಬೆಳೆಯಲು ಬುದ್ಧಿಮಾತು (ಅಧ್ಯಾಯ 1)
2. ಸುಳ್ಳುಬೋಧಕರಿಗೆ ವಿರುದ್ಧವಾಗಿ ಎಚ್ಚರಿಕೆ (ಅಧ್ಯಾಯ 2)
3. ಕ್ರಿಸ್ತನ ಬರೋಣವು ಖಂಡಿತವಾಗಿರುವುದು (ಅಧ್ಯಾಯ 3)

# 1 ಯೋಹಾನನು

ಗ್ರಂಥಕರ್ತನ ಹೆಸರನ್ನು ಪತ್ರಿಕೆಯಲ್ಲಿ ತಿಳಿಸಿಲ್ಲ. ಆದರೆ ಆದಿಸಭೆಯ ಸಂಪ್ರದಾಯದಂತೆ ಇದರ ಶೈಲಿ ಮತ್ತು ದೈವಶಾಸ್ತ್ರದಲ್ಲಿ ಯೋಹಾನನ ಸುವಾರ್ತೆಗೆ ಸಮಾನವಾಗಿರುವುದರಿಂದ ಯೋಹಾನನೇ ಈ ಪತ್ರಿಕೆಯ ಗ್ರಂಥಕರ್ತನೆಂದು ಹೇಳಲಾಗುತ್ತದೆ. ಒಂದು ಮತ್ತು ಎರಡನೇ ಪೇತ್ರದಂತೆ ಈ ಪತ್ರಿಕೆ ಸಹ ಅನೇಕ ಸಭೆಗಳಿಗೆ ಕಳಿಸಲಾದ ಪತ್ರಿಕೆಯಾಗಿದೆ.

ಈ ಪತ್ರಿಕೆಯ ಉದ್ದೇಶವು ದೇವರು, ಆತನ ಮಗನೊಂದಿಗೆ ಮತ್ತು ಪರಸ್ಪರ ಒಬ್ಬರು ಇನ್ನೊಬ್ಬರೊಂದಿಗೆ ಅನ್ಯೋನ್ಯತೆಯಲ್ಲಿ ಬದುಕಲು ವಿಶ್ವಾಸಿಗಳನ್ನು ಉತ್ತೇಜಿಸಲುವುದಾಗಿದೆ. ಅಲ್ಲದೆ ಇದು ಅವರಿಗೆ “ಒಂದು ವಿಶೇಷವಾದ ಜ್ಞಾನವನ್ನು” ಪ್ರಸರಿಸುತ್ತಿರುವ ಸುಳ್ಳುಬೋಧಕರ ವಿರುದ್ಧ ಅವರನ್ನು ಎಚ್ಚರಿಸುತ್ತದೆ. ಭೌತಿಕ ಜಗತ್ತು ಕೆಟ್ಟದ್ದಾಗಿದೆ ಮತ್ತು ದೇವರು ಕ್ರಿಸ್ತ ಯೇಸುವಿನಲ್ಲಿ ಮನುಷ್ಯನಾಗುವುದು ಸಾಧ್ಯವಿಲ್ಲ ೆಂಬುದಾಗಿ ಅವರು ನಂಬಿದ್ದರು. ಯಾಕೆ ಯೋಹಾನನು ನರಾವತಾರವನ್ನು ದೃಢೀಕರಿಸುವುದರೊಂದಿಗೆ ತನ್ನ ಪತ್ರಿಕೆಯನ್ನು ಪ್ರಾರಂಭಿಸುತ್ತಾನೆಂಬುದನ್ನು ವಿವರಿಸುತ್ತದೆ.

“ನಾವು ನಿಮಗೆ ಪ್ರಸಿದ್ಧಪಡಿಸುವ ಜೀವವಾಕ್ಯವು ಆದಿಯಿಂದ ಇದ್ದದ್ದು. ನಾವು ಅದನ್ನು ಕಿವಿಯಾರೆ ಕೇಳಿ ಕಣ್ಣಾರೆ ಕಂಡು ಮನಸ್ಸಿಟ್ಟು ನೋಡಿ ಕೈಯಿಂದ ಮುಟ್ಟಿದ್ದೇವೆ (1:1).

ಯೇಸು ಯಾರೆಂಬ ಈ ವೈಯಕ್ತಿಕ ಜ್ಞಾನ ಅಥವಾ ತಿಳುವಳಿಕೆಯು ನಮ್ಮ ಜೀವಿತವನ್ನು ಹೇಗೆ ನಾವು ಜೀವಿಸುತ್ತೇವೆಂಬುದಕ್ಕೆ ಪರಿಣಾಮಗಳನ್ನು ಹೊಂದಿದೆ: ನಾವು ನಮ್ಮ ಸಹೋದರರನ್ನು ಪ್ರೀತಿಸುತ್ತೇವೆ ಮತ್ತು ನಮಗೆ ನಮ್ಮ ಸಹ ವಿಶ್ವಾಸಿಗಳೊಂದಿಗೆ ಅನ್ಯೋನ್ಯತೆಯುಂಟು. ನಾವು ದಿನಾಲು ಕ್ರಿಸ್ತನ ಬೆಳಕಿನಲ್ಲಿ ನಡೆಯುವವರಾಗಿದ್ದು, ಆತನ ರಕ್ತವು ಎಲ್ಲಾ ಪಾಪಗಳಿಂದ ನಮ್ಮನ್ನು ಶುದ್ಧೀಕರಿಸುತ್ತದೆ. ನಾವು ಈ ರೀತಿ ಮಾಡಿದರೆ ನಮಗೆ ನಿತ್ಯಜೀವವುಂಟೆಂಬುದು ನಮಗೆ ತಿಳಿದದೆ (5:12)

## 2 ಯೋಹಾನನು

13 ವಚನವನ್ನೊಳಗೊಂಡ ಈ ಪುಸ್ತಕವು ಇಡೀ ಸತ್ಯವೇದದಲ್ಲಿಯೇ ಅತೀ ಸಣ್ಣ ಪುಸ್ತಕವಾಗಿದೆ.

ತನ್ನನ್ನು ಸಭೆಯ ಹಿರಿಯನೆಂಬುದಾಗಿ ಕರೆದುಕೊಳ್ಳುವ ಗ್ರಂಥಕರ್ತನು ಯೋಹಾನನಾಗಿದ್ದನೆಂಬುದು ಆದಿಸಭಾ ಸಂಪ್ರದಾಯದ ಅಭಿಪ್ರಾಯವಾಗಿದೆ. "ಅಮ್ಮನವರಿಗೂ ಆಕೆಯ ಮಕ್ಕಳಿಗೂ" ಎನ್ನುವ ಸ್ವೀಕೃತರು ಬಹುಶಃ ಒಂದು ಸಭೆಯನ್ನು ಸೂಚಿಸುತ್ತಿರಬಹುದು.

ಎರಡನೇ ಯೋಹಾನ ಪತ್ರಿಕೆಯನ್ನು ಸಭೆಗೆ ಸುಳ್ಳುಬೋಧಕರ ವಿರುದ್ಧ ಎಚ್ಚರಿಸಲು ಬರೆಯಲ್ಪಟ್ಟಿದೆ. ಇವರು ಸಭೆಗೆ ಸಂಧಿಸಿ ಸತ್ಯದ ಬದಲು ಸುಳ್ಳುಬೋಧನೆಗಳನ್ನು ಹೇಳುತ್ತಿದ್ದಿರಬಹುದು. ಯೇಸುವು ನರನಾಗಿ / ಮನುಷ್ಯನಾಗಿ ಬಂದನೆಂಬ ತಿಳುವಳಿಕೆಯೊಂದಿಗೆ ವಿಶ್ವಾಸಿಗಳು ಸತ್ಯದಲ್ಲಿ ನಡೆಯಬೇಕು. ಅದು: ಅವರು ನರಾವತಾರದಲ್ಲಿ ನರಾವತಾರದಲ್ಲಿ ನಂಬಿಕೆಯಿಡಲೇಬೇಕು.

## 3 ಯೋಹಾನನು

ಈ ಪತ್ರಿಕೆ ಸಹ ಸಭೆಯ "ಹಿರಿಯನಿಂದ" (ಆದಿಸಭಾ ಸಂಪ್ರದಾಯದ ಪ್ರಕಾರ ಯೋಹಾನನು) ಗಾಯ ಎಂಬ ವ್ಯಕ್ತಿಗೆ ಬರೆಯಲ್ಪಟ್ಟಿದೆ. ಸತ್ಯದಲ್ಲಿ ನಡೆಯಬೇಕೆಂದು ಗಾಯನನ್ನು ಉತ್ತೇಜಿಸಲಾಗಿದೆ. ಅಲ್ಲದೆ ಈತನನ್ನು ಸಂಚರಿಸುವ ಬೋಧಕರುಗಳಿಗೆ ಮಾಡಿದ ಅತಿಥಿ ಸತ್ಕಾರಕ್ಕಾಗಿ ಹೊಗಳಲಾಗಿದೆ, ಆದರೆ ಆತನು ಸಭೆಯಲ್ಲಿ ದೊರೆತನ ಮಾಡಲು ಪ್ರಯತ್ನಿಸುವ ದಿಯೊತ್ರೇಫನ ಬಗ್ಗೆ ಎಚ್ಚರಿಕೆಯಿಂದಿರಬೇಕು.

## ಯೂದನು

ಗ್ರಂಥಕರ್ತನು ತನ್ನನ್ನು "ಯೇಸು ಕ್ರಿಸ್ತನ ದಾಸನೂ, ಯಾಕೋಬನ ತಮ್ಮನೂ" ಎಂಬುದಾಗಿ ಪರಿಚಯಿಸಿಕೊಳ್ಳುತ್ತಾನೆ. ಹೆಚ್ಚಾಗಿ ಈತನು ಯೆರೂಸಲೇಮಿನಲ್ಲಿನ ಆದಿಸಭೆಯ ಸ್ತಂಭಗಳಲ್ಲಿ ಒಬ್ಬನೂ, ಯೇಸು ಮತ್ತು ಯಾಕೋಬರ ತಮ್ಮನೂ ಆಗಿದ್ದಿರಬೇಕು. ಈ ಪತ್ರಿಕೆಯು ಎಲ್ಲಾ ವಿಶ್ವಾಸಿಗಳಿಗೆ ಬರೆಯಲ್ಪಟ್ಟಿದೆ. ಇದರ ಉದ್ದೇಶವು ಭಕ್ತಿಹೀನರೂ ನಾಚಿಗೆಗೆಟ್ಟ ಕೆಲಸ ಮಾಡುವವರೂ ಸಭೆಯಲ್ಲಿ ಕಳ್ಳತನದಿಂದ ಹೊಕ್ಕಿದ ಸುಳ್ಳುಬೋಧಕರ ವಿರುದ್ಧ ಅರಿವನ್ನು ಎಚ್ಚರಿಸುವುದಾಗಿದೆ.

ಆಶ್ಚರ್ಯಕರ ಸಂಗತಿಯೇನೆಂದರೆ ಈ ಪತ್ರಿಕೆಯ ಹೆಚ್ಚಿನ ಅಂಶಗಳು ಎರಡನೇ ಪೇತ್ರ ಪತ್ರಿಕೆಯಲ್ಲಿ ಕಂಡಬರುತ್ತವೆ.

ಹೊಸ ಒಡಂಬಡಿಕೆಯ 8 ಪತ್ರಿಕೆಗಳ ಪ್ರಶ್ನೆಗಳು

1. ಸಾಮಾನ್ಯ ಪತ್ರಿಕೆಗಳು ಯಾವುವು? ಯಾಕೆ ಅವುಗಳಿಗೆ ಆ ಹೆಸರು ಕೊಡಲ್ಪಟ್ಟಿದೆ?
2. ಈ ಪತ್ರಿಕೆಗಳ ಗ್ರಂಥಕರ್ತರ ಬಗ್ಗೆ ನಮಗೇನು ತಿಳಿದಿದೆ? ಉತ್ತರಿಸುವ ಮುನ್ನ ನಿಮ್ಮ ಗುಂಪಿನ ಸದಸ್ಯರೊಂದಿಗೆ ಚರ್ಚಿಸಿರಿ.
3. ಇಬ್ರಿಯ ಪತ್ರಿಕೆ ಬರೆದವನ ಬಗ್ಗೆ ನಮಗೇನು ತಿಳಿದಿದೆ? ಯೋಚಿಸಿ ಮತ್ತು ಚರ್ಚಿಸಿರಿ.

4. ಆದಿಸಭೆಯಲ್ಲಿ ಸುಳ್ಳುಬೋಧಕಕರದು ಮುಖ್ಯ ಸಮಸ್ಯೆಯಾಗಿತ್ತು. ಈ ಗುಂಪಿನಲ್ಲಿನ ಎಂಟು ಪತ್ರಿಕೆಗಳಲ್ಲಿ ಯಾವುವು ಸುಳ್ಳುಬೋಧಕರ ದುರ್ಬೋಧನೆಗಳಿಗೆ ವಿರುದ್ಧವಾಗಿ ಎಚ್ಚರಿಸುತ್ತವೆ. ಉತ್ತರಿಸುವ ಮುನ್ನ ನಿಮ್ಮ ಗುಂಪಿನ ಇತರ ಸದಸ್ಯರೊಂದಿಗೆ ಚರ್ಚಿಸಿರಿ.
5. ಈ ಸುಳ್ಳುಬೋಧಕರ ಕುರಿತು ನೀವೇನನ್ನು ಕಲಿತಿರುವಿರಿ? ಉತ್ತರಿಸುವ ಮುನ್ನ ನಿಮ್ಮ ಗುಂಪಿನ ಸದಸ್ಯರೊಂದಿಗೆ ಚರ್ಚಿಸಿರಿ.
6. ಹೊಸ ಒಡಂಬಡಿಕೆಯಲ್ಲಿ ಯಾವುದು ತೀರಾ ಹಳೆಯ ಪತ್ರಿಕೆಯಾಗಿರುವ ಸಾಧ್ಯತೆಯಿದೆ? ಯಾಕೆ ನಾವದನ್ನು ನಂಬುತ್ತೇವೆ? ಯೋಚಿಸಿ ಮತ್ತು ಚರ್ಚಿಸಿರಿ.
7. ಹೊಸ ಒಡಂಬಡಿಕೆಯ ಈ ವಿಭಾಗದ ಎಂಟು ಪುಸ್ತಕಗಳ ಬಗ್ಗೆ ಐದು ಪ್ರಶ್ನೆಗಳನ್ನು ಬರೆಯಿರಿ. ಅನಂತರ ನಿಮ್ಮ ಸ್ನೇಹಿತರೊಬ್ಬರಿಗೆ ಉತ್ತರ ಬರೆಯಲು ಹೇಳಿರಿ. ಅಂತಿಮವಾಗಿ ಪ್ರತಿ ಸರಿ ಉತ್ತರಕ್ಕೆ 10 ಅಂಕಗಳನ್ನು ಕೊಡಿರಿ. ಉತ್ತರವು ಭಾಗಶಃ ಸರಿಯಾಗಿದ್ದರೆ ಕಡಿಮೆ ಅಂಕ ಕೊಡಿರಿ. 25-34 ಅಂಕಗಳಿಗೆ ಉತ್ತೀರ್ಣ ಕೊಡಿರಿ. 35-50 ಅಂಕಗಳಿಗೆ ಉನ್ನತ ಶ್ರೇಣಿ ಕೊಡಿರಿ.

# ಭಾಗ 4: ಪ್ರಕಟಣೆ

## ಪ್ರಕಟಣೆ

ಸತ್ಯವೇದದ ಕಡೆಯ ಪುಸ್ತಕವು ಒಂದು ಪ್ರವಾದನಾ ಪುಸ್ತಕವಾಗಿದೆ (1:3, 22:18). ಇದನ್ನು ಒಂದು ಪ್ರಕಟಣೆ ಎಂದು ಕರೆಯಬಹುದು (1:3), ಮತ್ತು ಇದಕ್ಕೆ ಪುಸ್ತಕಕ್ಕೆ ಅದರ ಹೆಸರನ್ನು ಕೊಟ್ಟಿದೆ. ಪತ್ಮೋಸ್ ದ್ವೀಪದಲ್ಲಿ ಒಬ್ಬ ಖೈದಿಯಾಗಿರುವಾಗ ಅಪೊಸ್ತಲನಾದ ಯೋಹಾನನು ಕಂಡ ದರ್ಶನಗಳನ್ನು ಇದು ಒಳಗೊಂಡಿದೆ. ಅಲ್ಲದೆ ಇದು ಅಸ್ಯ ಸೀಮೆಯ ಏಳು ಸಭೆಗಳಿಗೆ ಬರೆಯಲ್ಪಟ್ಟಿರುವುದರಿಂದ ಅದನ್ನು ಪತ್ರಿಕೆಯೆಂಬುದಾಗಿ ಪರಿಗಣಿಸಬಹುದು (1:11, 2:1).

ನಾಲ್ಕು ಬಾರಿ ಗ್ರಂಥಕರ್ತನು ತನ್ನನ್ನು ಯೋಹಾನನೆಂದು ಗುರುತಿಸಿಕೊಳ್ಳುತ್ತಾನೆ (1:1, 4, 9, 22:8). ಈ ಯೋಹಾನನು ಯೋಹಾನನ ಸುವಾರ್ತೆ ಮತ್ತು ಹೊಸ ಒಡಂಬಡಿಕೆಯ ಮೂರು ಪತ್ರಿಕೆಗಳನ್ನು ಬರೆದ ಅಪೊಸ್ತಲನಾದ ಯೋಹಾನನೆಂಬುದಾಗಿ ಗುರುತಿಸುತ್ತದೆ. ಗ್ರಂಥಕರ್ತನು ಒಬ್ಬ ಯೆಹೂದಿಯಾಗಿದ್ದು ಹಳೇ ಒಡಂಬಡಿಕೆಯೊಂದಿಗೆ ಪರಿಚಿತನಾಗಿದ್ದನೆಂಬುದಾಗಿ ಈ ಪುಸ್ತಕವೇ ತಿಳಿಸುತ್ತದೆ. ಅಲ್ಲದೆ ಈತನು ಅಸ್ಯ ಸೀಮೆಯ ಏಳು ಸೀಮೆಗಳಿಗೆ ಚಿರಪರಿಚಿತವಾದ ಒಬ್ಬ ಸಭಾನಾಯಕನಾಗಿರಬೇಕು. ಸ್ಪಷ್ಟವಾಗಿ ಈತನೊಬ್ಬ ಆಳವಾದ ಧಾರ್ಮಿಕ ವ್ಯಕ್ತಿ ಸಹ ಆಗಿದ್ದು ಕ್ರೈಸ್ತೀಯ ನಂಬಿಕೆಯು ಈ ಲೋಕದಲ್ಲಿ ಕಾರ್ಯನಿರತವಾಗಿರುವ ದುರಾತ್ಮ ಶಕ್ತಿಗಳ ಮೇಲೆ ಜಯಸಾಧಿಸುತ್ತದೆಂಬುದಾಗಿ ಪೂರ್ಣವಾಗಿ ಮನವರಿಕೆ ಮಾಡಿಕೊಂಡಿದ್ದನು.

ವಿಶ್ವಾಸಿಗಳು ಹಿಂಸೆಯನ್ನು ಎದುರಿಸುತ್ತಿರುವ ವೇಳೆಯಲ್ಲಿ ಪ್ರಕಟಣೆಯು ಬರೆಲ್ಪಟ್ಟಿದೆ. ಇದು ರೋಮನ್ ಚಕ್ರವರ್ತಿಗಳ ಆರಾಧನೆಯನ್ನು ಜಾರಿಗೆ ತಂದದ್ದರ ಪರಿಣಾಮವಾಗಿದೆ. ಚಕ್ರವರ್ತಿಯನ್ನು ಬಿಟ್ಟು ಯೇಸು ಕ್ರಿಸ್ತನನ್ನು ಒಡೆಯ/ಕರ್ತನೆಂದು ಆರಾಧಿಸಿದ ವಿಶ್ವಾಸಿಗಳು ಹೆಚ್ಚಾಚ್ಚಾಗಿ ಕಷ್ಟಗಳನ್ನು ಎದುರಿಸಬೇಕಾಯಿತು.

ನಂಬಿಗಸ್ತರಾಗಿದ್ದು ಚಕ್ರವರ್ತಿಗಳ ಆರಾಧನೆಯನ್ನು ವಿರೋಧಿಸಬೇಕೆಂದು ವಿಶ್ವಾಸಿಗಳನ್ನು ಉತ್ತೇಜಿಸಲು ಯೋಹಾನನು ಇದನ್ನು ಬರೆಯುತ್ತಾನೆ. ಕೇವಲ ದೇವರು ಮತ್ತು ಕೊಯ್ಯಲ್ಪಟ್ಟ ಕುರಿ ಮಾತ್ರ ಆರಾಧನೆಗೆ ಯೋಗ್ಯರಾಗಿದ್ದಾರೆ (5:6).

ದೇವರು ಮತ್ತು ಸೈತಾನನ ನಡುವಿನ ಅಂತಿಮ ಮುಖಾಮುಖಿಯು ಸನ್ನಿಹಿತವಾಗಿದೆ ಎಂಬುದಾಗಿ ಯೋಹಾನನು ತನ್ನ ಓದುಗರಿಗೆ ತಿಳಿಸುತ್ತಾನೆ. ಅನಂತರ ದುಷ್ಟರು ಶಾಶ್ವತವಾಗಿ ನಿರ್ನಾಮವಾಗುವರು ಮತ್ತು ದೇವಜನರು ಮಹಿಮೆ ಮತ್ತು ಆಶೀರ್ವಾದಗಳ ನಿತ್ಯತ್ವದೊಳಗೆ ಸೇರುವರು.

ಈ ಪುಸ್ತಕವು “ಕಾಲಜ್ಞಾನದ ಪುಸ್ತಕ” ವೆಂಬ (ಗ್ರೀಕಿನಲ್ಲಿ ಇದರರ್ಥ ಪ್ರಕಟಣೆ) ಒಂದು ವಿಶೇಷ ರೀತಿಯ ಸಾಹಿತ್ಯಕ್ಕೆ ಸೇರಿದ್ದಾಗಿದೆ. ಇದು ಸಾಂಕೇತಿಕ ಮತ್ತು ಚಿತ್ರಣಗಳಿಂದ ಕೂಡಿದ ಒಂದು ಬರಹ/ಸಾಹಿತ್ಯವಾಗಿದೆ. ಕಾಲಜ್ಞಾನದ ಪಠ್ಯಕ್ಕೆ ಮೊಟ್ಟಮೊದಲ ಉದಾಹರಣೆಯು ಹಳೇ ಒಡಂಬಡಿಕೆಯ ದಾನಿಯೇಲನ ಪುಸ್ತಕದಲ್ಲಿ ಕಂಡುಬರುತ್ತದೆ. ಈ ರೀತಿಯ ಪಠ್ಯಗಳು ಕೇವಲ ಸ್ವೀಕೃತರು ಅರ್ಥೈಸಿಕೊಳ್ಳುವ ರೀತಿಯಲ್ಲಿ ಬರೆಯಲ್ಪಟ್ಟಿವೆ. ಅವರ ವಿರೋಧಿಗಳು ಸಂದೇಶವನ್ನು ಅರ್ಥೈಸಿಕೊಳ್ಳುವಂತಾಗಬಾರದು.

ಪ್ರಕಟಣೆಯಲ್ಲಿನ ದರ್ಶನಗಳು ಒಬ್ಬ ಆದುನಿಕ ಓದುಗನಿಗೆ ವಿಚಿತ್ರವಾಗಿ ತೋರಿಬರುತ್ತವೆ. ಅದೃಷ್ಟವಶಾತ್ ಅರ್ಥವಿವರಣೆಯೊಂದಿಗೆ ಸಹಾಯಿಸಲು ಈ ಪುಸ್ತಕವು ಅನೇಕ ಸುಳಿವುಗಳನ್ನು ಕೊಡುತ್ತದೆ. ಉದಾಹರಣೆಗೆ: ನಕ್ಷತ್ರಗಳು ದೂತರುಗಳಾಗಿವೆ (1:20), ದೀಪಸ್ತಂಭಗಳು ಸಭೆಗಳಾಗಿವೆ (1:20), ಮಹಾ ಜಾರಳು ಬಾಬಿಲೋನ್ – ಬಹುಶಃ ರೋಮ್ (17:1, 5, 18) ಮತ್ತು ಪರಲೋಕದ ಯೆರೂಸಲೇಮು – ಯಜ್ಞದ ಕುರಿಮರಿಯ ಮಗಲಗಿತ್ತಿ – ಸಭೆ ಆಗಿದೆ (21:9-10). ಒಂದು ವಿಶೇಷವಾದ ವೈಶಿಷ್ಟ್ಯವೆಂದರೆ ಆಗಾಗ್ಗೆ ಉಪಯೋಗಿಸಲ್ಪಡುವ ಏಳನೇ ಸಂಖ್ಯೆ – ಇದು ಸುಮಾರು 25 ಬಾರಿ ಕಂಡುಬರುತ್ತದೆ. ಇದರಲ್ಲಿ ಏಳು ಆಶೀರ್ವಚನಗಳಿವೆ – "ಧನ್ಯರು" (1:3, 14:13, 16:15, 19:9, 20:6, 22:7, 14), ಏಳು ಸಭೆಗಳು (1:4, 11), ಏಳು ಆತ್ಮಗಳು (1:4), ಏಳು ಚಿನ್ನದ ದೀಪಸ್ತಂಭಗಳು (1:12), ಏಳು ನಕ್ಷತ್ರಗಳು (1:16), ಏಳು ಮುದ್ರೆಗಳು (5:1), ಏಳು ಕೊಂಬು ಮತ್ತು ಏಳು ಕಣ್ಣುಗಳು (5:6), ಏಳು ತುತ್ತೂರಿಗಳು (8:2), ಏಳು ಗುಡಾರಗಳು (10:3), ಏಳು ಲಕ್ಷಣಗಳು (12:1, 3, 13:13, 14, 15:1, 16:14, 19:20), ಏಳು ಮುಕುಟಗಳು (12:3), ಏಳು ಉಪದ್ರವಗಳು (15:6), ಏಳು ಚಿನ್ನದ ಪಾತ್ರೆಗಳು (15:7), ಏಳು ಬೆಟ್ಟಗಳು (17:9) ಮತ್ತು ಏಳು ಅರಸರುಗಳು (17:10) ಇತ್ಯಾದಿ. ಸಾಂಕೇತಿಕವಾಗಿ ಏಳರ ಸಂಖ್ಯೆಯು ಸಂಪೂರ್ಣತೆಯನ್ನು ಸೂಚಿಸುತ್ತದೆ.

ಸತ್ಯವೇದದ ಪಂಡಿತರು ಪ್ರಕಟಣೆಯ ಅರ್ಥವಿವರಣೆಯ ಕುರಿತು ಒಪ್ಪುವುದಿಲ್ಲ. ಇದರಲ್ಲಿ ನಾಲ್ಕು ಮುಖ್ಯ ವ್ಯಾಖ್ಯಾನಕಾರರ ಗುಂಪುಗಳಿವೆ:

1. ಭೂತಕಾಲವಾದಿಗಳು ಇದರಲ್ಲಿನ ಹೆಚ್ಚಿನ ಘಟನೆಗಳು ಕ್ರಿ.ಶ. ಒಂದನೇ ಶತಮಾನದಲ್ಲಿಯೇ ನಡೆದು ಹೋದವುಗಳಾಗಿವೆ ಎಂದು ಹೇಳುತ್ತಾರೆ.
2. ಐತಿಹಾಸಿಕ ಸಿದ್ಧಾಂತವಾದಿಗಳು ಈ ಪುಸ್ತಕವು ಯೋಹಾನನು ಪತ್ಮೋಸ್ ದ್ವೀಪದಲ್ಲಿದ್ದ ಸಮಯದಿಂದ ಇತಿಹಾಸದ ಅಂತ್ಯದವರೆಗಿನ ಘಟನೆಗಳ ಒಂದು ದೀರ್ಘವಾದ ಸರಪಣಿಯನ್ನು ವಿವರಿಸುತ್ತದೆ ಎಂದು ಹೇಳುತ್ತಾರೆ.
3. ಭವಿಷ್ಯತಾವಾದಿಗಳು ಅಂತ್ಯಕಾಲದವರೆಗೂ ಹೆಚ್ಚಿನ ಘಟನೆಗಳು ಸಂಭವಿಸುವುದಿಲ್ಲವೆಂದು ಹೇಳುತ್ತಾರೆ.
4. ಘಟನೆಗಳು ಸಾಂಕೇತಿಕವಾದವುಗಳೆಂಬುದಾಗಿ ಆದರ್ಶವಾದಿಗಳು ಹೇಳುತ್ತಾರೆ. ಅವು ಕೆಟ್ಟತನದ ಮೇಲಿನ ಒಳ್ಳೆಯದರ ವಿಜಯದಂತಹ ಅಸಂಖ್ಯಾತ ಸತ್ಯತೆಗಳನ್ನು ವಿವರಿಸುತ್ತವೆ.

ಸುಯೋಗವೆಂದರೆ ಪುಸ್ತಕದ ಮೂಲ ಸತ್ಯತೆಗಳು ಯಾವುದೇ ನಿರ್ಧಿಷ್ಟ ಅರ್ಥವಿವರಣೆಯ ಮೇಲೆ ಆತುಕೊಂಡಿಲ್ಲ. ಈ ಪುಸ್ತಕವನ್ನು ಇದರ ಒಟ್ಟಾರೆ ಸಂದೇಶಕ್ಕಾಗಿ ಓದಿ ಎಲ್ಲಾ ವಿವರಗಳಲ್ಲಿ ಸಿಲುಕಿಕೊಳ್ಳಲು ಶೋಧನೆಯನ್ನು ಎದುರಿಸುವ ಪ್ರತಿಯೊಬ್ಬರಿಗೂ ಅವು ಸ್ಪಷ್ಟವಾಗಿವೆ. ಪ್ರಕಟಣೆಯ ಬಲವಾದ ಸಂದೇಶವೆಂದರೆ ದೇವರಿಗೆ ಎಲ್ಲಾ ಅಧಿಕಾರ/ಬಲವು ಮೀಸಲಾಗಿದೆ ಮತ್ತು ಯೇಸುವು ಇತಿಹಾಸದ ಎಲ್ಲ ಚಲನೆಯನ್ನು ನಿಯಂತ್ರಿಸುವವನಾಗಿದ್ದಾನೆ. ಅಂತ್ಯಕಾಲದಲ್ಲಿ ದೇವರು ನಿರ್ಣಾಯಕವಾಗಿ ಯೇಸು ಕ್ರಿಸ್ತನ ಮೂಲಕ ತನ್ನೆಲ್ಲ ವೈರಿಗಳನ್ನು ಸೋಲಿಸುತ್ತಾನೆ. ಯೇಸುವಿಗೆ ನಂಬಿಗಸ್ತರಾಗಿರುವವರು ನೂತನ ಭೂಮ್ಯಾಕಾಶಗಳನ್ನು ಅನುಭವಿಸುವರು. ಈ ಪುಸ್ತಕದ ಉದ್ದೇಶವು ಹಿಂಸೆಗೊಳಗಾದ ಸಭೆಯನ್ನು ಉತ್ತೇಜಿಸುವುದು ಮತ್ತು ಆದರಿಸುವುದಾಗಿದೆ.

ಪ್ರಕಟಣೆಯನ್ನು ಈ ರೀತಿಯಾಗಿ ರಚನೆ ಮಾಡಬಹುದು.

1. ಪೀಠಿಕೆ (1:1-8)
2. ಯೋಹಾನನ ಕರೆ (1:9-20)
3. ಏಳು ಸಭೆಗಳಿಗೆ ಪತ್ರಗಳು (ಅಧ್ಯಾಯ 2-3)
4. ದೇವರ ಸಿಂಹಾಸನದ ದರ್ಶನ (ಅಧ್ಯಾಯ 4-5)
5. ಮುದ್ರೆಗಳು, ತುತ್ತೂರಿಗಳು ಮತ್ತು ಪಾತ್ರೆಗಳು (ಅಧ್ಯಾಯ 6-16)
6. ಜಾರಸ್ತ್ರೀ, ಬಾಬಿಲೋನಿನ ನ್ಯಾಯತೀರ್ಪು (17:1-19:10)
7. ಇತಿಹಾಸದಲ್ಲಿ ದೇವರ ಕೊನೆಯ ವಿಜಯ: ನ್ಯಾಯತೀರ್ಪು ಮತ್ತು ರಕ್ಷಣೆ. ನೂತನ ಭೂಮಿ ಮತ್ತು ನೂತನಾಕಾಶ. ಯೆರೂಸಲೇಮ್, ಯಜ್ಞದ ಕುರಿಯಾದಾತ ವಿವಾಹವಾಗುವ ಕನ್ಯೆ (19:11-22:5)
8. ಮುಕ್ತಾಯಗಳು

## ಪ್ರಕಟಣೆಯ ಪ್ರಶ್ನೆಗಳು

1. ಈ ಪುಸ್ತಕದ ಸಂದರ್ಭವೇನು? ಉತ್ತರ ಬರೆಯುವ ಮುನ್ನ ನಿಮ್ಮ ಗುಂಪಿನ ಸದಸ್ಯರೊಂದಿಗೆ ಚರ್ಚಿಸಿರಿ.
2. ಈ ಪುಸ್ತಕದ ಮುಖ್ಯ ಸಂದೇಶವೇನು? ಉತ್ತರ ಬರೆಯುವ ಮುನ್ನ ನಿಮ್ಮ ಗುಂಪಿನ ಸದಸ್ಯರೊಂದಿಗೆ ಚರ್ಚಿಸಿರಿ.
3. ಇದರ ಗ್ರಂಥಕರ್ತರಾರು? ಯೋಚಿಸಿ ಮತ್ತು ಚರ್ಚಿಸಿರಿ.
4. ಕಾಲಜ್ಞಾನ ಸಾಹಿತ್ಯದ ಪ್ರಮುಖ ವೈಶಿಷ್ಟಗಳೇನು? ಉತ್ತರ ಬರೆಯುವ ಮುನ್ನ ನಿಮ್ಮ ಗುಂಪಿನ ಸದಸ್ಯರೊಂದಿಗೆ ಚರ್ಚಿಸಿರಿ.